ಸ್ಥಾಪನೆ : ೧೮೭೪

1934

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ
ಶತಮಾನೋತ್ತರ ಬೆಳ್ಳಿ ಹಬ್ಬದ
ಪುಸ್ತಕ ಪ್ರದರ್ಶನ ೧೯೯೯



1934

ಶತಮಾನೋತ್ತರ ಬೆಳ್ಳಿ ಹಬ್ಬದ
(ಏಪ್ರಿಲ್ ೧೯೯೯ ಸಂಚಿಕೆ)

ಡೆ. ಚೆನ್ನಬಸಪ್ಪನವರು.
(೧೮೩೩–೧೮೮೧)

ಕನ್ನಡ
ಪ್ರಾಥಮಿಕ ಶಿಕ್ಷಣ



ಶಿಕ್ಷಣ ಸಂಸ್ಥೆ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚೆನ್ನಬಸಪ್ಪ ವೃತ್ತ, ರೋಡ್ಡರಸ್ತೆ, ಧಾರವಾಡ – ೧

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— JANUARY 1934 —

ಸಂಪಾದಕ— **ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,**

ಸಂಪುಟ ೭೦] **ಜನವರಿ ೧೯೩೪** [ವ. ೫ ಸಂ. ೧೦

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧	ಮಾತೃಭಾಷೆ	೧
೨.	ಅಂದಮಾನದ ವರ್ಣನೆ	೭
೩.	ಸಕ್ಕರೆ	೧೭
೪.	ಮಾನಸಶಾಸ್ತ್ರ	೨೦
೫.	ಪುಸ್ತಕ ಪರಿಚಯ	೨೯
೬.	ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು ...	೩೧
೭.	ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ವೇಳಾಪತ್ರಿಕೆ	೩೨

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head Master, Training School, Dharwar, at his Office.

ಮಾರಾಟಕ್ಕೆ ಸಿದ್ಧವಾಗಿದೆ] [ಬೆಲೆ ೫ ಆಣೆ

ಕರ್ನಾಟಕದ ಕಥಾಮಯ ಇತಿಹಾಸ

(ಕನ್ನಡ ಶಾಲೆಯ ೪ನೆಯ ಇಯತ್ತೆಗಾಗಿ)

ಲೇಖಕ:— ಗೋ. ಅ. ಜೋಗಳೇಕರ, ಸ್ಕೂಲ್‌ಮಾಸ್ತರ ಗದಗ

ನಮ್ಮಿಂದ ರಚಿಸಲ್ಪಟ್ಟ "ಕರ್ನಾಟಕಾಚಾ ಗೋಷ್ಟಿರೂಪ ಇತಿಹಾಸ" ಎಂಬ ಮರಾಠಿ ಪುಸ್ತಕವು ಮುಂಬಯಿ ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾಗಿದೆ. ಅದರ ಕನ್ನಡ ಭಾಷಾಂತರವು ಮಾರಾಟಕ್ಕೆ ಸಿದ್ಧವಾಗಿದೆ. ಇದರಲ್ಲಿ ಐತಿಹಾಸಿಕ ಕಾಲದಿಂದ ಈಗಿನವರೆಗಿನ ಕರ್ನಾಟಕದ ಇತಿಹಾಸವು ಚಿಕ್ಕಮಕ್ಕಳಿಗೆ ತಿಳಿಯಬಹುದಾದ ಸುಲಭ ಭಾಷೆಯಲ್ಲಿ ೩೨ ಕಥೆಗಳ ರೂಪದಿಂದ ಬರೆಯಲ್ಪಟ್ಟದೆ. ಬಾಲಕರಲ್ಲಿ ಸ್ಫೂರ್ತಿಯೂ, ಸ್ವಾಭಿಮಾನವೂ ಹುಟ್ಟುವಂತೆ ಇದರ ರಚನೆಯಿದೆ. ಎರಡು ನಕಾಶಗಳೂ, ಅಲ್ಲಲ್ಲಿ ಬೇಕಾಗುವ ಚಿತ್ರಗಳೂ ಸೇರಿಸಲ್ಪಟ್ಟವೆ. ಇಂಥ ಉಪಯುಕ್ತವಾದ ಪುಸ್ತಕಕ್ಕೆ ಸ್ಕೂಲ್‌ಬೋರ್ಡುಗಳೂ, ಶಿಕ್ಷಕರೂ ಉತ್ತೇಜನಕೊಟ್ಟು ಬಾಲಕರಿಗೆ ನಿಜವಾದ ಇತಿಹಾಸಜ್ಞಾನವನ್ನು ಮಾಡಿಕೊಡಬೇಕೆಂದು ಹಾರೈಸುವೆವು.

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವವು. ಶಿಕ್ಷಕರಿಗೂ ಪುಸ್ತಕವ್ಯಾಪಾರಿಗಳೂ ಯೋಗ್ಯ ಕಮಿಶನು ಕೊಡಲಾಗುವದು

ಗೋ. ಅ. ಜೋಗಳೇಕರ,

ಸ್ಕೂಲ್‌ಮಾಸ್ತರ, ಗದಗ ಮ್ಯುನಿಸಿಪಾಲಿಟಿ, ಗದಗ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೭೦ | ಜನವರಿ ೧೯೩೪ | ವರ್ಷ ೫ ಸಂ. ೧೦

ಮಾತೃಭಾಷೆಯ ಅಭ್ಯಾಸ

ನಮ್ಮದೇಶದ ಒಬ್ಬ ಶಿಕ್ಷಣ ಶಾಸ್ತ್ರಜ್ಞರು ಕೆಲವು ವರುಷಗಳ ಹಿಂದೆ ಶಿಕ್ಷಣಾಭ್ಯಾಸಕ್ಕಾಗಿ ಇಂಗ್ಲಂಡಕ್ಕೆ ಹೋಗಿದ್ದರು. ಆಗ ಅಲ್ಲಿ ಒಂದು ಶಿಕ್ಷಣಾಭಿಮಾನಿಗಳ ಸಮ್ಮೇಲನವು ನಡೆದಿತ್ತು. ಆ ಸಮ್ಮೇಲನಕ್ಕೆ ಹೊಂದಿ ಒಂದು ಪ್ರದರ್ಶನದ ಏರ್ಪಾಡಾಗಿತ್ತು. ಅಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ನಡೆಯುವ ಮಾತೃಭಾಷಾಭ್ಯಾಸಕ್ಕೆ (ಅಂದರೆ ಇಂಗ್ಲಿಷ ಭಾಷೆಯ ಅಭ್ಯಾಸಕ್ಕೆ) ಸಂಬಂಧಿಸಿದ ಸಂಗತಿಗಳನ್ನು ಸೂಚಿಸುವ ಯಾದಿಗಳು, ಪಟಗಳು ಮೊದಲಾದವುಗಳನ್ನು ಇಟ್ಟಿದ್ದರು. ಅವುಗಳನ್ನು ನೋಡಿ ಅಲ್ಲಿ ಪ್ರಚಾರದಲ್ಲಿರುವ ಭಾಷಾಭ್ಯಾಸದ ಕ್ರಮಗಳನ್ನೂ ಸಾಧನಗಳನ್ನೂ ಉದ್ದೇಶಗಳನ್ನೂ ಕುರಿತು ನಮ್ಮದೇಶದ ಶಿಕ್ಷಣ ಶಾಸ್ತ್ರಜ್ಞರು ಕೆಲವು ಸಂಗತಿಗಳನ್ನು ನಮ್ಮ ದೇಶದ ಶಿಕ್ಷಕರಿಗಾಗಿ ಬರೆದಿರುವರು.

ಸದ್ಯಕ್ಕೆ ನಮ್ಮಲ್ಲಿ ಮಾತೃಭಾಷೆಯ ಅಭ್ಯಾಸವು ಪ್ರಾಥಮಿಕ ಶಾಲೆಗಳಲ್ಲಿ ಹ್ಯಾಗೆ ನಡೆದಿರುವದೆಂಬ ಬಗ್ಗೆ ಇಲ್ಲಿ ವಿವರಿಸಲವಶ್ಯವಿಲ್ಲ. ಅದರಲ್ಲಿ ವಿವರಿಸಲರ್ಹವಾದ ಅಂಶಗಳೂ ಇಲ್ಲ. ನಮ್ಮ ಹುಡುಗರು ಹಾಗೂ ಹೀಗೂ ಮಾಡಿ ಪ್ರತಿಯೊಂದು ವರುಷದಲ್ಲಿ ಸರಕಾರದವರು ಪ್ರಸಿದ್ಧಪಡಿಸಿರುವ ಒಂದು ಕ್ರಮಿಕ ಪುಸ್ತಕದಲ್ಲಿಯ ಕೆಲವು ಪುಟಗಳನ್ನು ಓದಿ ಮುಗಿಸುವರು. ಇವುಗಳನ್ನು ಅಕ್ಷರ ಹೊಂದಿಸಿ (ಶಬ್ದ, ವಾಕ್ಯ ಖಂಡ ಹೊಂದಿಸಿಯಲ್ಲ) ಓದಲಿಕ್ಕೂ, ನಡುವೆ ಕೇಳಿದ ಶಬ್ದಗಳಲ್ಲಿ ಒಂದೆರಡರ ಅರ್ಥವನ್ನು ಹೇಳಲಿಕ್ಕೂ ಬಂದರೆ ನಮ್ಮ ವಿದ್ಯಾರ್ಥಿಗಳು ಮೇಲಿನ ಇಯತ್ತೆಗೆ ಹೋಗಿ ಹೊಸ ಪುಸ್ತಕವನ್ನು ಇದೇ ರೀತಿ

ಯಿಂದ ಅಭ್ಯಾಸಮಾಡಲು ಆರಂಭಿಸುವದುಂಟು. ವರ್ಷದಲ್ಲಿ ಇದರೊಳಗಿನ ಕೆಲವು ಪದ್ಯಪಾಠಗಳ ಅನ್ವಯಾರ್ಥ ಭಾವಾರ್ಥಗಳನ್ನು ಗಟ್ಟಿಮಾಡಿ, ಕವಿತೆಗಳನ್ನು ಪಾಠವೆಂದರೆ ತೀರಿತು, ಕವಿತೆಯ ಜ್ಞಾನವನ್ನು ಮಾಡಿಕೊಂಡು ಮುಗಿಸಿದಂತಾಗುವದು ಮಾತೃಭಾಷೆಯ ಯೋಗ್ಯ ಉಪಯೋಗವನ್ನಂತೂ ಕ್ರಮವಾಗಿಯೂ ಪರಿಣಾಮಕರವಾಗಿಯೂ ಮಾಡುವ ರೂಢಿಯು ನಮ್ಮಲ್ಲಿಯ ಹುಡುಗರಿಗೆ ಆಗುವದಿಲ್ಲ. ಅವರು ನಿಬಂಧವನ್ನು (ಬಹುತರ ಪಾಠಮಾಡಿ) ಬರೆಯುವರು. ಮುಲಕಿಪರೀಕ್ಷೆಯಲ್ಲಿಯೇ ಸರಕಾರದವರು ನೇಮಿಸಿದ ಏಳು ಪುಸ್ತಕಗಳ ಹೊರತು ಬೇರೆ ಕನ್ನಡ ಗ್ರಂಥಗಳನ್ನು ಎಷ್ಟೋ ಹುಡುಗರು ನೋಡಿರುವದಿಲ್ಲ.

ಇರಲಿ; ಸುಧಾರಿಸಿದ ರಾಷ್ಟ್ರಗಳಲ್ಲಿ ಚಿಕ್ಕಮಕ್ಕಳಿಗೆ ಮಾತೃಭಾಷೆಯ ಅಭ್ಯಾಸವನ್ನು ಯಾವ ಕ್ರಮದಿಂದ ಮಾಡಿಸುವರೆಂಬದನ್ನು ಇಂಗ್ಲಂಡದಲ್ಲಿ ನಡೆದಿರುವ ಮಾದರಿಯ ಮೇಲಿಂದ ನಾವು ತಿಳಿದುಕೊಳ್ಳೋಣ:—

ಇಂಗ್ಲೀಷ ಭಾಷೆಯ ಅಭ್ಯಾಸವು ಇಂಗ್ಲಂಡದೇಶದ ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವ ವಿಷಯುಗಳಲ್ಲಿ ಒಳ್ಳೇ ಮಹತ್ವವುಳ್ಳದ್ದೆಂದು ಎಣಿಸಲ್ಪಡುತ್ತದೆ. ಇದು ಮಾತೃಭಾಷೆಯೆಂದೇ ಇದಕ್ಕೆ ಮಹತ್ವವು ಉಂಟಾಗಿರುವದೆಂದಲ್ಲ. ಭಾಷೆಯನ್ನು ತಿಳಿದುಕೊಂಡು ಸ್ಪಷ್ಟವಾಗಿ ಉಪಯೋಗಿಸಲಿಕ್ಕೆ ಬರುವದರಿಂದ ಇತರ ಹಲವು ವಿಷಯುಗಳನ್ನು ಚನ್ನಾಗಿ ಅಭ್ಯಾಸಮಾಡಲಿಕ್ಕೆ ಅನುಕೂಲವಾಗುವದೆಂದೇ ಇದಕ್ಕೆ ವಿಶೇಷ ಮಹತ್ವವು ಬಂದಿರುವದು. ಆ ದೇಶದ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷದ ಅಭ್ಯಾಸವೆಂದರೆ ಇಂಗ್ಲಿಷವನ್ನು ಓದುವದಿಷ್ಟೇ ಅಲ್ಲ; ಇಲ್ಲಿ ಓದುವದು ಎಂಬದನ್ನು ಒಳ್ಳೇ ವ್ಯಾಪಕವಾದ ಅರ್ಥದಲ್ಲಿ ನಾವು ಉಪಯೋಗಿಸಿರುವೆವು. ಇಂಗ್ಲಿಷ, ನಿಬಂಧ ಲೇಖನ ಅಂದರೆ ಬರೆಹರೂಪದಿಂದ ಭಾಷೆಯನ್ನು ಉಪಯೋಗಿಸುವದರಲ್ಲಿ ಶಿಕ್ಷಣವೂ ಇಂಗ್ಲಿಷದ ಅಭ್ಯಾಸದಲ್ಲಿಯೇ ಸೇರುವದು. ಯೋಗ್ಯವಾದ ವಾಙ್ಮಯದ ಅಭ್ಯಾಸವೂ ಇದರಲ್ಲಿ ಸಮಾವೇಶವಾಗುವದು. ಇದರಲ್ಲಿ ಗದ್ಯದ ಅಭ್ಯಾಸವಷ್ಟೇ ಅಲ್ಲ, ಬಾಲಕರ ಕೋಮಲವಾದ ಮನಸ್ಸಿಗೆ ತಿಳಿಯಬಹುದಾದ ಪದ್ಯಭಾಗವೂ ಸೇರಿರುತ್ತದೆ.

ಪ್ರಾಥಮಿಕ ಶಾಲೆಗಳಲ್ಲಿ ವಾಚನವನ್ನು ಕಲಿಸುವ ಮುಖ್ಯ ಉದ್ದೇಶವೇನು? ಬಾಲಕರು ಪುಸ್ತಕಗಳನ್ನು ವಿಚಾರಪೂರ್ವಕವಾಗಿ ಉಪಯೋಗಿಸುವ ಶಕ್ತಿಯುಳ್ಳವರಾಗಬೇಕೆಂಬದೇ ವಾಚನ ಕಲಿಸುವ ಪ್ರಮುಖವಾದ ಉದ್ದೇಶವೆಂದು ಇಂಗ್ಲಂಡದ ಶಿಕ್ಷಕರು ಎಣಿಸುವರು. ಈ ಅಭ್ಯಾಸದಿಂದ ಹುಡುಗರಿಗೆ ಲಾಭವಾಗುವದಲ್ಲದೆ ಮನಸ್ಸಿಗೆ ಸಂತೋಷವೂ ಅನಿಸತಕ್ಕದ್ದು. ಅಂದರೆ ಇವೆರಡೂ

ಅವರಿಗೆ ವಾಚನಾಭ್ಯಾಸದಿಂದ ದೊರೆಯಬೇಕು. ವಾಚನ ಕಲಿಸುವದರಲ್ಲಿ ಮೇಲೆನಿಸಿದ ಪದ್ಧತಿಗಳ ಮೇರೆಗೆ ಹುಡುಗರಿಗೆ ತಮ್ಮಷ್ಟಕ್ಕೆ ತಾವಾಗಿ ಓದಿಕೊಳ್ಳಲಿಕ್ಕೆ ಬಂದಕೂಡಲೆ ಅವರು ಪ್ರತ್ಯೇಕವಾಗಿ ಪುಸ್ತಕಗಳನ್ನು ಓದಿಕೊಳ್ಳಲಾರಂಭಿಸುವರು. ಬಾಲಕರ ವರ್ಗದ ಹುಡುಗರಲ್ಲಿ ತುಸು ಮುಂದುವರಿದವರು ಅಂದರೆ ಚುರುಕು ಬುದ್ಧಿಯ ಹುಡುಗ ಹುಡಿಗೆಯರು ಆ ವಯಸ್ಸಿನ ಹುಡುಗರಿಗಾಗಿ ಬರೆದ ಮನರಂಜನವೆನಿಸುವ ವಿಷಯಗಳನ್ನೊಳಕೊಂಡ ವಾಚನ ಪುಸ್ತಕಗಳನ್ನು ತಾವಾಗಿ ಓದಿಕೊಳ್ಳಲು ಶಕ್ತರಾಗುವಂತೆ ರೂಢಿ ಮಾಡಿಸಿದ್ದನ್ನು ಆ ದೇಶದಲ್ಲಿ ನಾವು ನೋಡಬಹುದು. ಹೀಗೆ ಓದಿ ತಿಳಿದುಕೊಂಡ ಹುಡುಗರು ತಾವು ಓದಿ ತಿಳಿದುಕೊಂಡದ್ದರ ಬಗ್ಗೆ ಬಾಯಿಮಾತಿನಿಂದ ಹೇಳುವರು. ಹುಡುಗರು ಮೇಲಿನ ಇಯತ್ತೆಗಳಿಗೆ ಸಾಗಿದಂತೆ ಅಂದರೆ ವಾಚನದಲ್ಲಿ ಕಲಿಯಬೇಕಾದ ಶಬ್ದಸಂಯೋಜನೆ, ಅಘಾತ, ವಿರಾಮ ಮೊದಲಾದವುಗಳಲ್ಲಿ ಅವರು ಕುಶಲರಾಗುತ್ತ ಹೋಗುವಂತೆ, ಗಟ್ಟಿಯಾಗಿ ಓದುವ ರೂಢಿಯನ್ನು ಕಡಿಮೆಮಾಡಿ, ಮೌನ ವಾಚನಕ್ಕೆ ಹೆಚ್ಚು ವೇಳೆಯನ್ನು ಕೊಡುವ ಪರಿಪಾಠವಿರುವದು. ಪ್ರತಿಯೊಂದು ಇಯತ್ತೆಯಲ್ಲಿ ಅವರು ಓದುವ ಪುಸ್ತಕದ ಭಾಷೆಯೂ ವಿಷಯವೂ ಹೆಚ್ಚೆಚ್ಚು ಗಡಚಾದವಿರುವವು. ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳಲ್ಲಿ ಹುಡುಗರು ಸಾಮಾನ್ಯವಾದ ಕಥೆಯ ಪುಸ್ತಕಗಳನ್ನು ಅಂದರೆ ಬಾಲಕರಿಗಾಗಿ ಬರೆದ ಸುಲಭವಾದ ಕಥೆಯ ಪುಸ್ತಕಗಳನ್ನು ಸಹಜವಾಗಿ ಓದಿ ಬಿಡುವದಷ್ಟೇ ಅಲ್ಲ; ಸುಲಭ ಶೈಲಿಯಿಂದ ಬರೆಯಲ್ಪಟ್ಟ ಹೆಸರಾದ ಇಂಗ್ಲಿಷ ಕಾದಂಬರಿಕಾರರ ಪುಸ್ತಕಗಳನ್ನು ಓದುವರು. ಪ್ರಸಿದ್ಧರಾದ ಇಂಗ್ಲಿಷ ಲೇಖಕರ ಗ್ರಂಥಗಳನ್ನು ಚಿಕ್ಕಮಕ್ಕಳಿಗಾಗಿ ಸುಲಭವಾದ ಭಾಷೆಯಲ್ಲಿ ಸಂಕ್ಷೇಪವಾಗಿ ಬರೆದ ವಾಙ್ಮಯವು ಇಂಗ್ಲಿಷ ಭಾಷೆಯಲ್ಲಿ ಬೇಕಾದಷ್ಟು ಇರುವದು. ಸಾಲೆಯಲ್ಲಿ ಸಾಮಾನ್ಯವಾಗಿ ಓದುವ ಪುಸ್ತಕಗಳಿಂದಲೂ ಕಲಿಯುವ ವಿಷಯಗಳಿಂದಲೂ ಹುಡುಗರ ಜಿಜ್ಞಾಸೆಯು ತೃಪ್ತಿಹೊಂದುವದಿಲ್ಲೆಂದು ಕಂಡುಬಂದದ್ದರಿಂದ ವಿವಿಧ ವಿಷಯಗಳನ್ನೊಳಕೊಂಡ ಸಣ್ಣ ಪುಸ್ತಕ ಸಂಗ್ರಹಗಳನ್ನು ಏರ್ಪಡಿಸಿ ಆಯಾವರ್ಗಗಳ ವಿದ್ಯಾರ್ಥಿಗಳಿಗೆ ಅಣಿಮಾಡಿಕೊಟ್ಟು ಅವರ ವಾಚನಾಭಿರುಚಿಯನ್ನು ಹೆಚ್ಚಿಸುವ ಪ್ರಯತ್ನಗಳು ಆ ದೇಶದಲ್ಲಿ ಸಾಮಾನ್ಯವಾಗಿರುವವು. ಸಣ್ಣ ದೊಡ್ಡ ಪಟ್ಟಣಗಳಲ್ಲಿ ಸಾರ್ವಜನಿಕ ಪುಸ್ತಕಾಲಯಗಳು ಇರುವವು. ಈ ಪುಸ್ತಕಾಲಯಗಳಿಗೆ ಸಾಲೆಯ ವಿದ್ಯಾರ್ಥಿಗಳನ್ನು ಮೆಂಬರರಾಗಿ ಮಾಡಿಕೊಳ್ಳುವ ವ್ಯವಸ್ಥೆಯಾಗಿರುವದುಂಟು. ಇಲ್ಲವೆ ಆಯಾ ಸ್ಥಾನಿಕ ಪುಸ್ತಕಾಲಯಗಳಿಂದ ಪ್ರತಿಯೊಂದು ತಿಂಗಳಿಗೆ ಇಂತಿಷ್ಟು ಪುಸ್ತಕಗಳನ್ನು ಪ್ರತಿಯೊಂದು

ಸಾಲೆಗೆ ತರಿಸಿಕೊಳ್ಳುವ ವ್ಯವಸ್ಥೆಯೂ ಆಗಿರುವದುಂಟು. ಕೆಲವು ಸಾಲೆಗಳಿಗಾಗಿ ಸ್ಥಾನಿಕ ಸಂಘದವರು ಪೆಟ್ಟಿಗೆಗಳನ್ನು ಮಾಡಿ ಇವುಗಳನ್ನು ಸಾಲೆಯಿಂದ ಸಾಲೆಗೆ ನಿಯಮಿತ ಅವಧಿಯಲ್ಲಿ ಕಳಿಸುವ ವ್ಯವಸ್ಥೆಮಾಡಿರುವರು. ಸದ್ಯದ ವಾಚನ ಕಲಿಸುವ ಪದ್ಧತಿಯ ಪರಿಣಾಮವನ್ನು ಆ ದೇಶದ ಹುಡುಗರಿಗೆ ಸಾಮಾನ್ಯವಾಗಿರುವ ಶಬ್ದ ಜ್ಞಾನಸಂಚಯದಿಂದಲೂ ಬಹು ವಿಷಯಕ ಜ್ಞಾನದಿಂದಲೂ ಕಣ್ಣುಟ್ಟಿ ನೋಡಬಹುದಾಗಿದೆ.

ಮೇಲಿನ ಇಯತ್ತೆಯ ಹುಡುಗರು ನಿಬಂಧ ಲೇಖನದ ರೂಢಿಮಾಡಿಕೊಳ್ಳಬೇಕಾಗುವದಷ್ಟೇ. ಇದರ ತಳಹದಿಯನ್ನು ಬಾಲಕರ ವರ್ಗದಲ್ಲಿಯೇ ಸಿದ್ಧಪಡಿಸುವದುಂಟು. ಅಂದರೆ ಈ ಆರಂಭದ ಇಯತ್ತೆಯಲ್ಲಿಯೇ ಬಾಯಿ ಮಾತಿನಿಂದ ನಿಬಂಧ ರಚನೆಯ ಆರಂಭವನ್ನು ಚಿಕ್ಕಮಕ್ಕಳಿಂದ ಮಾಡಿಸುವದುಂಟು. ತೀರ ಸಣ್ಣ ಹುಡುಗರು ಸಾಲೆಗೆ ಬರುವದೇ ತಡ; ಅವರಿಗೆ ಮನಸಾದ ವಿಷಯುಗಳಬಗ್ಗೆ ಅವರಿಗೆ ಬಂದಂತೆ ಬಂದದ್ದನ್ನು ಹೇಳಲಿಕ್ಕೆ ಅವರಿಗೆ ಉತ್ತೇಜನವೂ ದೊರೆಯುತ್ತದೆ. ಈ ಹುಡುಗರು ಆರೇಳು ವರ್ಷದವರಾಗುವದರೊಳಗಾಗಿ ತಾವು ನೋಡಿದ ಸಂಗತಿಗಳಬಗ್ಗೆಯೂ ಓದಿದ ವಿಷಯುಗಳಬಗ್ಗೆಯೂ ಕ್ರಮಬದ್ಧವೂ ಸುಸಂಬದ್ಧವೂ ಇರುವ ಮಾತುಗಳನ್ನು ಹೇಳಲಿಕ್ಕೆ ಶಕ್ತರಾಗುವರು. ಇವರ ವರ್ಣನೆಗಳಲ್ಲಿ ಅತಿಶಯೋಕ್ತಿಯಾಗಲಿ ಅಲ್ಲದೆ ಕಲ್ಪನೆಗಳಾಗಲಿ ಇರುವದಿಲ್ಲ. ಅವರು ನೋಡಿದ್ದನ್ನು ಇದ್ದಕ್ಕಿದ್ದಂತೆ ವರ್ಣಿಸುವದನ್ನು ಕೇಳಿದರೆ ಸೋಜಿಗವೆನಿಸುತ್ತದೆ. ಅವರ ಮಾತಿನಲ್ಲಿ ತೊಡಕುಗಳಿರುವದಿಲ್ಲ; ಸಹಜವಾದ ಭಾಷಾಸರಣಿಯು ಇವರ ವರ್ಣನೆಗಳಲ್ಲಿ ತೋರುತ್ತಿರುತ್ತದೆ. ಈ ವರೆಗೆ ಬಾಯಿ ನಿಬಂಧಕ್ಕೆ ಹೆಚ್ಚು ಮಹತ್ವವನ್ನು ಕೊಡುವ ಪರಿಪಾಠವಿರುವದು. ಬರಹ ಮೂಲಕ ನಿಬಂಧವು ಆರಂಭವಾಗಿರುವದು, ಬಾಲಕರಿಗೆ ಬರೆಯುವ ಕಲೆಯ ಮೆಟ್ಟುಗಳನ್ನು ಅಂದರೆ ಟಾಕು ಇಡುವದು, ಅಕ್ಷರಗಳನ್ನು ಪ್ರಮಾಣಾರೂಪವಾಗಿಯೂ ಆಕಾರಕ್ಕೆ ತಕ್ಕಂತೆಯೂ ಸಾಕಷ್ಟು ತೀವ್ರವಾಗಿ ಬರೆಯುವದು ಇವನ್ನು ಕಲಿತು ಬೇಸರವಿಲ್ಲದೆ ಬರೆಯಲಿಕ್ಕೆ ಕಾಲಾವಧಿಯು ಅವಶ್ಯವಾಗಿ ಬೇಕಾಗುವದು. ಆದರೆ ಈ ಕಲೆಯಲ್ಲಿ ಅವರಿಗೆ ತಕ್ಕಷ್ಟು ಅಭ್ಯಾಸವಾದಕೂಡಲೆ ಬಾಯಿ ನಿಬಂಧದಲ್ಲಿ ಅವರು ಬೇಸರವಿಲ್ಲದೆ ಹೇಳುತ್ತಿರುವದನ್ನು ಪೆನ್ಸಿಲು ಕಾಗದಗಳನ್ನು ಉಪಯೋಗಮಾಡಿ ಬರೆಯಲಿಕ್ಕೆ ಅವರಿಗೆ ಹೇಳುವದುಂಟು. ಈ ಸಮಯದಲ್ಲಿ ಬಹುತರವಾಗಿ ಅವರಿಗೆ ಮಾತಾಡದಂತೆಯೇ ಬರೆಯಲಿಕ್ಕೆ ಅನುವು ಕೊಡುವುದುಂಟು. ಬರಹದಲ್ಲಿ ಮಾತಾಡುವಾಗ ಉಪಯೋಗಿಸುವ ಶಬ್ದ, ಪ್ರಯೋಗ, ವಾಕ್ಯಸರಣಿ ಇವು ಇರಲಾಗದೆಂದು ಅವರನ್ನುಗೊಂದಲದಲ್ಲಿ ಕೆಡವುವ

ಗೊಡವೆಗೆ ಹೋಗುವದಿಲ್ಲ. ಅಕ್ಷರ ಯೋಜನೆಯ ದೋಷಗಳಿಗೂ ವ್ಯಾಕರಣದ ಸಣ್ಣ ಪುಟ್ಟ ತಪ್ಪುಗಳಿಗೂ ವಿಪರೀತನಾದ ಮಹತ್ವವನ್ನು ಕೊಡುವದಿಲ್ಲ. ಮೇಲಿನ ಇಯತ್ತೆಗಳಲ್ಲಿ ಬಾಯಿನಿಬಂಧಕ್ಕೆ ಬಾಲಕರ ವರ್ಗದಲ್ಲಿ ಕೊಡುವಷ್ಟು ಮಹತ್ವ ವನ್ನು ಕೊಡುವದಿಲ್ಲ. ಬರಹ ಮೂಲಕ ನಿಬಂಧಕ್ಕೆ ಹೆಚ್ಚು ಮಹತ್ವವನ್ನು ಕೊಡುವದುಂಟು. ಹುಡುಗರು ತಮ್ಮ ದಿನದ ವ್ಯವಹಾರದಲ್ಲಿ ಯಾವ ಸಂಗತಿ ಗಳ ಬಗ್ಗೆ ಸಾಕಷ್ಟು ಜ್ಞಾನವನ್ನು ಪ್ರತ್ಯಕ್ಷವಾಗಿ ದೊರಕಿಸುವರೋ ಅಂಥ ವಿಷ ಯಗಳ ಬಗ್ಗೆಯೇ ನಿಬಂಧ ಬರೆಯಲಿಕ್ಕೆ ನಿಯಮಿಸುವದುಂಟು. ಅವರಿಗೆ ಪರಿಚಿತವಲ್ಲದ ವಿಷಯಗಳಬಗ್ಗೆ ನಿಬಂಧ ಬರೆಯಲಿಕ್ಕೆ ಹೇಳುವ ಪರಿಪಾಠ ವಿಲ್ಲ. 'ನಾಸುಮಾಡಿದ ಪಂತಿ' 'ನಮ್ಮ ಗಿಳಿ' "ನಿನ್ನೆ ರಾತ್ರಿಯ ಮಳೆ ಗುಡುಗು, ಇಂಥ ವಿಷಯಗಳಬಗ್ಗೆ ನಿಬಂಧ ಬರೆಯ ಹೇಳುವದುಂಟು. 'ರಾಷ್ಟ್ರ ಸಂಘ' "ವಿದ್ಯುತ್ತಿನ ದೀಪಗಳು" "ಕೂಲಿಯವರ ಕಟ್ಟಗಳು" "ಮೊದಲಾದ ಹುಡುಗರ ಅಳವಿಗೆ ಮೀರಿದ ವಿಷಯಗಳನ್ನಾಗಲಿ "ಸ್ನೇಹ" "ಭೂತದಯೆ" "ಪ್ರಸಂಗಾ ವಧಾನ" ಮೊದಲಾದ ಭಾವನಾಪರವಾದ ವಿಷಯಗಳನ್ನಾಗಲಿ ಕುರಿತು ನಿಬಂಧ ಬರೆಯಲು ಕೊಡುವದೇ ಇಲ್ಲ. ಇತ್ತಲಾಗಿ ಶಿಕ್ಷಕರು ನಿಬಂಧ ವಿಷಯ ಗಳನ್ನು ಆರಿಸುವ ಬಗ್ಗೆ ತೋರಿಸುತ್ತಿರುವ ಜಾಣ್ಮೆಯ ಮೂಲಕ ಈ ವಿಷಯದ ಬಗ್ಗೆ ಹಿಂದೆ ವಿದ್ಯಾರ್ಥಿಗಳಲ್ಲಿರುತ್ತಿದ್ದ ಬೇಸರದ ಬದಲು ಈಗ ಆದರವು ಕಂಡು ಬರುತ್ತಿರುವದೆನ್ನಲು ಸಂದೇಹವಿಲ್ಲ.

ಇಂಗ್ಲಂಡದ ಪ್ರಾಥಮಿಕ ಶಾಲೆಗಳಲ್ಲಿ ಶಾಲೆಯ ವರ್ತಮಾನಪತ್ರವು ಅಂದರೆ ಸಾಲೆಯ ಹುಡುಗರು ತಾವಾಗಿ ತಮ್ಮ ಸಾಲೆಗೂ ಸುತ್ತಲಿನ ಸಂಗತಿ ಗಳಿಗೂ ಸಂಬಂಧಿಸುವ ವಿಷಯಗಳಬಗ್ಗೆ ಬರೆದು ಪ್ರಕಟಿಸುವ ಪತ್ರಿಕೆಯು ಬಹುತರ ಸಾಲೆಗಳಲ್ಲಿ ಇರುವದು. ಇದರಲ್ಲಿ ಹುಡುಗರ ಲೇಖಗಳೇ ಹೆಚ್ಚಾಗಿ ಇರುವವು. ಶಿಕ್ಷಕರು ಇದೊಂದು ನಿಬಂಧದ ಭಾಗವೆಂದು ಬಗೆಯುವರು. ಇದು ಒಳ್ಳೇ ಸಮಾಧಾನದ ಸಂಗತಿಯು. ವಿದ್ಯಾರ್ಥಿಗಳಲ್ಲಾದರೂ ಬರೆಹದ ಬಗ್ಗೆ ಆಸ್ಥೆಯು ಉಂಟಾಗುವ ಮೂಲಕವೇ ಇದು ಚೆನ್ನಾಗಿ ನಡೆಯುವದು. ಇದ ರಿಂದ ಚಿಕ್ಕ ಬರೆಹಗಾರರ ಯೋಗ್ಯತೆಯು ಪ್ರಕಾಶಕ್ಕೆ ಬರುವದಲ್ಲದೆ, ಅನೇಕ ಹುಡುಗರಲ್ಲಿ ಬರೆಯಬೇಕೆಂಬ ಬಲವಾದ ಇಚ್ಛೆಯು ತಲೆದೋರಿ ನಿಬಂಧ ರಚನೆಗೆ ಒಳ್ಳೇ ಕಳೆಬರುವದು.

ನಮ್ಮಲ್ಲಿ ಹುಡುಗರು ಕನ್ನಡ ಕವಿತೆಗಳನ್ನು ಕಂಠಪಾಠಮಾಡುವರಷ್ಟೇ, ಇಂಗ್ಲಂಡದ ಶಾಲೆಗಳಲ್ಲಿಯೂ ಈ ಪರಿಪಾಠವು ಸಾರ್ವತ್ರಿಕವಾಗಿ ಇತ್ತು.

ಇದಕ್ಕೆ ಕವಿತೆಯ ಅರ್ಥವನ್ನು ಸಹ ಪಾಠಮಾಡುವ ರೂಢಿಯೂ ಅಲ್ಲಿ ಸಾಮಾನ್ಯವಾಗಿ ಇತ್ತು. ನಮ್ಮಲ್ಲಿಯ ಪದಚ್ಛೇದದ ಗೊಂದಲವೊಂದನ್ನು ಬಿಟ್ಟು ಅನ್ವಯಾರ್ಥ ಭಾವಾರ್ಥಗಳ ತೊಡಕುಗಳು ಕವಿತೆಯ ಪಾಠದ ಮುಖ್ಯಭಾಗಗಳಾಗಿದ್ದವು. ಆದರೆ ಆ ದೇಶದಲ್ಲಿ ಮಾತೃಭಾಷೆಯ ಅಭ್ಯಾಸದ ಸಂಕುಚಿತವಾದ ಕಲ್ಪನೆಯು ಸದ್ಯಕ್ಕೆ ಇಲ್ಲವಾಗಿದೆ. ಈ ಮೂಲಕ ಹೀಗೆ ಕಂಠಪಾಠಮಾಡಿಸಿ ಕವಿತೆಯನ್ನೂ ಕವಿತೆಯ ಅರ್ಥವನ್ನೂ ಕಲಿಸುವ ರೂಢಿಯು ಇಲ್ಲದಾಗಿದೆ. ಹುಡುಗರಿಗೆ ವಾಚನ ಪಾಠಗಳನ್ನು ಕಲಿಸುವ ಮೂಲಕ ಅವರಲ್ಲಿ ಯೋಗ್ಯವಾದ ಪುಸ್ತಕಗಳನ್ನು ಓದುವ ಹುರುಪು ಉಂಟಾಗಬೇಕೆಂಬ ವಿಚಾರವು ಅಲ್ಲಿ ಈಗ ಸಾರ್ವತ್ರಿಕವಾಗಿರುವದಷ್ಟೇ. ಅದರಂತೆಯೇ ಕವಿತೆಯ ಪಾಠಗಳನ್ನು ಕಲಿಸುವದರಿಂದ ಯೋಗ್ಯವಾದ ಕವಿತೆಗಳನ್ನು ತಿಳಿದುಕೊಂಡು ಅವುಗಳನ್ನು ಅಂದು ಆನಂದಪಡುವ ಇಚ್ಛೆಯು ಹುಡುಗರಲ್ಲಿ ತಲೆದೋರಬೇಕೆಂಬ ವಿಚಾರವು ಸಾರ್ವತ್ರಿಕವಾಗಿರುವದು. ಈಗ ಅಲ್ಲಿ ಕವಿತೆಯ ಪಾಠ ಎಂಬ ಸಂಕುಚಿತವಾದ ಹೆಸರಿನಿಂದ ಈ ವಿಷಯವನ್ನು ಹೇಳುವ ರೂಢಿಯಿಲ್ಲ. ವಾಙ್ಮಯರಸಾಸ್ವಾದ (Literature) ಎಂಬ ದೊಡ್ಡ ಹೆಸರನ್ನು ಇದಕ್ಕೆ ಕೊಡುವದುಂಟು. ಬಾಲಕರ ವರ್ಗದಿಂದ ಮೇಲಿನ ಇಯತ್ತೆಗೆ ಹೋಗಲು ತಕ್ಕವನಾದ ಹುಡುಗನಿಗೆ ಚಿಕ್ಕಮಕ್ಕಳಿಗೆ ಯೋಗ್ಯವಾದ ಕವಿತೆಗಳ ಜ್ಞಾನವು (Nursery Poems) ತಕ್ಕಮಟ್ಟಿಗೆ ಆಗಿರುವದು. ಇವುಗಳನ್ನು ನಾಲ್ವರು ಕೂಡಿ ಅಂದವಾಗಿ ಅನ್ನಲು ಅವರು ಕಲಿತಿರುವರು. ಮೊದಲಿನ ಕೆಲವು ಇಯತ್ತೆಗಳಲ್ಲಿ ಇನ್ನೂ ಹಲವು ಇಂಥ ಹಾಡುಗಳನ್ನು ಹುಡುಗನು ಕಲಿಯುವನು. ಚಿಕ್ಕಮಕ್ಕಳಿಗೆ ತಕ್ಕವೆನಿಸಿದ ಸಣ್ಣ ಕವಿತೆಗಳ ಒಂದು ಪುಟ್ಟ ಸಂಗ್ರಹವನ್ನೇ ಅವನ ಕೈಯಲ್ಲಿ ಕೊಡುವದುಂಟು. ಬಹುತರವಾಗಿ ಅವನು ಆ ಸಂಗ್ರಹದಲ್ಲಿರುವ ಎಲ್ಲ ಕವಿತೆಗಳನ್ನು ತಾನಾಗಿ ಓದಿ ಮುಗಿಸಿದಬಳಿಕ ಶಿಕ್ಷಕನ ನೆರವಿನಲ್ಲಿ ಅವುಗಳ ಭಾಗಗಳನ್ನು ಮತ್ತೆ ಓದಿ ತಿಳಿಯದಿದ್ದ ಮಾತುಗಳನ್ನು ತಿಳಕೊಂಡಿರುವನು. ಆ ಬಳಿಕ ಅವುಗಳಲ್ಲಿ ತನ್ನ ಮನಸಿಗೆ ವಿಶೇಷ ಅಂದವಾದವೆಂದು ಅನಿಸಿದವುಗಳನ್ನು ಇತರ ತನ್ನ ಓರಿಗೆಯ ವಿದ್ಯಾರ್ಥಿಗಳ ಮುಂದೆ ಓದಿ ತೋರಿಸುವನು; ಹಾಗು ಪಾಠಮಾಡಿ ಅಂದು ತೋರಿಸುವನು. ಶಿಕ್ಷಕನು ಈ ಕಾರ್ಯದಲ್ಲಿ ಅವನಿಗೆ ನೆರವಾಗುವನು. ಪ್ರಸಂಗಾನುಸಾರವಾಗಿ ಹುಡುಗರಿಗೆ ತಮ್ಮ ಪ್ರೀತಿಯ ಕವಿತೆಗಳನ್ನು ಒತ್ತಟ್ಟಿಗೆ ಬರೆಯಿಸಿ ಪ್ರತಿಯೊಬ್ಬನ ಬಳಿಗೆ ಒಂದು ವಿಶೇಷ ಕವಿತೆಗಳ ಸಂಗ್ರಹವನ್ನು ಇಟ್ಟುಕೊಳ್ಳಲಿಕ್ಕೆ ಶಿಕ್ಷಕರು ಉತ್ತೇಜನ ಕೊಟ್ಟಿರುವರು. ಈ ಕವಿತೆಗಳನ್ನು ಅಂದವಾಗಿ ಬರೆದಿಡುವಾಗ ಹುಡುಗನಿಗೆ ಅಚ್ಚುಕಟ್ಟಾಗಿಯೂ

ಸ್ವಚ್ಛವಾಗಿಯೂ ಬರೆಯುವ ರೂಢಿಯಾಗುವದು. ಈ ಕವಿತೆಗಳಲ್ಲಿ ಸಣ್ಣ ಕಥೆಗಳು ಬಂದಿದ್ದರೆ ಹುಡುಗರಿಗೆ ತೋರಿದಂತೆ ಅವುಗಳನ್ನು ಸೂಚಿಸುವ ಕಲ್ಪನೆಯ ಚಿತ್ರಗಳನ್ನು ತೆಗೆಯಲಿಕ್ಕೆ ಉತ್ತೇಜನ ಕೊಡುವರು. ಮೇಲಿನ ಇಯತ್ತೆಗಳಲ್ಲಿ ವಿದ್ಯಾರ್ಥಿಗಳು ಇಂಗ್ಲಂಡದ ಹೆಸರಾದ ಕವಿಯಾದ ಷೇಕ್ಸಪಿಯರನ ನಾಟಕಗಳನ್ನು ಅಭ್ಯಾಸಮಾಡಿ, ಅವುಗಳಲ್ಲಿರುವ ರಸವತ್ತಾದ ಕೆಲವು ಭಾಗಗಳನ್ನು ಬಾಯಿಪಾಠಮಾಡಿ, ಅವುಗಳನ್ನು ಅಭಿನಯಿಸುವದುಂಟು.

ಮೇಲಿನ ವಿವರಣವನ್ನು ಓದಿದರೆ, ಇಂಗ್ಲಂಡದ ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯ ಅಭ್ಯಾಸದಬಗ್ಗೆ ಯಾವ ಬಗೆಯ ಯೋಜನೆಗಳು ಇರುವವೆಂಬದೂ ನಮ್ಮಲ್ಲಿ ಈ ಬಗ್ಗೆ ಇನ್ನು ಎಷ್ಟು ಸುಧಾರಣೆಯಾಗಲು ಅನುವಿರುವದೆಂಬದೂ ನಮ್ಮ ಶಿಕ್ಷಕರ ಮನಸಿನಲ್ಲಿ ಬಾರದಿರದು.

ಅಂದಮಾನದ ವರ್ಣನೆ

[ಮಹಾರಾಷ್ಟ್ರಭಾಷೆಯ ಒಂದು ಗ್ರಂಥದಿಂದ ಸಂಗ್ರಹಿಸಿ ಬರೆದದು.]

ಬರಹಗಾರ:— ಶ್ರೀ. ಲಕ್ಷ್ಮಣ, ವಿಶ್ವನಾಥ, ಘಾಟಗೆ, ಅಣ್ಣೀಗೇರಿ.

ಹಿಂದೀ ಮಹಾಸಾಗರದಲ್ಲಿರುವ ಅಂದಮಾನ-ನಿಕೋಬಾರ ಹಾಗು ಲಖದೀವ-ಮಾಲದೀವ ಈ ಎರಡು ದ್ವೀಪ ಪುಂಜಗಳು ಕ್ರಮವಾಗಿ ಹಿಂದುಸ್ಥಾನದ ಪೂರ್ವ ಪಶ್ಚಿಮ ಸಮುದ್ರಗಳ ನೈಸರ್ಗಿಕ ಮಹಾದ್ವಾರಗಳಾಗಿವೆ. ಪರಚಕ್ರಗಳ ನಿವಾರಣೆಯ ದೆಸೆಯಿಂದಲೂ, ದೇಶದ ಭದ್ರತೆಗಾಗಿಯೂ ಈ ಜಲದುರ್ಗಗಳು ಭವಿಷ್ಯತ್ಕಾಲದಲ್ಲಿ ಹಿಂದುಸ್ಥಾನದ ವೈಮಾನಿಕ-ನೌಕಾ ಸೈನ್ಯಗಳ ನೆಲೆಬೀಡುಗಳಾಗತಕ್ಕವಿವೆ. ಅರ್ವಾಚೀನ ಕಾಲದಲ್ಲಿ ಹಿಂದುಸ್ಥಾನದ ಹೊರಗೆ ಹಿಂದೀ ಸಂಸ್ಕೃತಿ, ಜನಾಂಗಗಳು ಯಾವ ಭೂಖಂಡಗಳಲ್ಲಿ ತಮ್ಮ ವಾಸ್ತವ್ಯವನ್ನು ಮಾಡಿರುವವೋ, ಅವುಗಳಲ್ಲಿ ಅಂದಮಾನವು ಒಂದು ಅತಿ ಮಹತ್ವದ ಆಯಕಟ್ಟಿನ ಸ್ಥಾನವಾಗಿದೆ. ಅಂದಮಾನದ ಅದ್ಯದ ಜನವಸತಿ

ಹಾಗು ಸಂಸ್ಕೃತಿ ಇವು ಕೇವಲ ಭಾರತೀಯವೇ ಇರುವ ಮೂಲಕ ಈ ದ್ವೀಪ-ಪುಂಜವು ಹಿಂದುಸ್ಥಾನದ ಒಂದು ಭಾಗವೆಂಥಲೇ ತಿಳಿಯುವದು ಕ್ರಮಪ್ರಾಪ್ತವಾಗಿದೆ.

ಈ ದ್ವೀಪ ಪುಂಜವು ಕಲಕತ್ತೆಯಿಂದ ಸುಮಾರು ೬೦೦ ಮೈಲಿನಮೇಲೆ ಇದೆ. ಸಾಲುಗೊಂಡಿರುವ ಅನೇಕ ಚಿಕ್ಕ ಚಿಕ್ಕ ನಡುಗಡ್ಡೆಗಳ ಒಂದು ದ್ವೀಪಮಾಲೆಯೇ ಬಂಗಾಲ ಸಮುದ್ರದಲ್ಲಿ ಹಬ್ಬಿಗೊಂಡಿದ್ದು, ಅದರಲ್ಲಿ ಅಂದಮಾನದ ಗುಂಪು ಎಲ್ಲಕ್ಕೂ ದೊಡ್ಡದಾಗಿದೆ. ಆ ಗುಂಪಿನಲ್ಲಿ ಉತ್ತರ ಅಂದಮಾನ, ಮಧ್ಯ ಅಂದಮಾನ, ದಕ್ಷಿಣ ಅಂದಮಾನ, ಎಂಬ ಮೂರು ಮುಖ್ಯ ದ್ವೀಪಗಳಿವೆ. 'ಅಂದಮಾನ' ಈ ಶಬ್ದವು 'ಹನುಮಾನ' ಎಂಬ ಶಬ್ದದ ರೂಪಾಂತರವೆಂದು ಕೆಲವರು ಪ್ರತಿಪಾದಿಸುತ್ತಾರೆ. ಆದರೆ ಆ ದ್ವೀಪವು ಅಂಡಾಕೃತಿಯಿದ್ದಮೂಲಕ ಅದಕ್ಕೆ 'ಅಂದಮಾನ' ಎಂಬ ಹೆಸರು ಬಂದಿರುವದೆಂದು ಬೇರೆ ಕೆಲವರ ಮತವಿದೆ. ಉತ್ತರ ಅಂದಮಾನವು ೫೧ ಮೈಲು, ಮಧ್ಯ ಅಂದಮಾನವು ೫೯ ಮೈಲು, ದಕ್ಷಿಣ ಅಂದಮಾನವು ೪೯ ಮೈಲು ರಟಲಂಡ ದ್ವೀಪವು ೧೧ ಮೈಲು ಉದ್ದ ಇವೆ. ಈ ಗುಂಪಿಗೆ ದೊಡ್ಡ ಅಂದಮಾನವೆಂದೆನ್ನುತ್ತಾರೆ. ಇದರ ದಕ್ಷಿಣಕ್ಕೆ ೩೯ ಮೈಲಿನಮೇಲೆ ಚಿಕ್ಕ ಅಂದಮಾನ ದ್ವೀಪವಿದ್ದು ಅದು ೩೦ ಮೈಲು ಉದ್ದ, ೧೭ ಮೈಲು ಅಗಲು ಇದೆ. ಈ ನಡುಗಡ್ಡೆಗಳಲ್ಲಿ ಇಲ್ಲಿಯ ವರೆಗೆ ಸುಧಾರಿಸಿದ ಮನುಷ್ಯರ ವಸಾಹತು ಆಗದಿರುವ ಮೂಲಕ ಭೂಮಿಗೆ ಸೂರ್ಯ ಕಿರಣಗಳ ಸ್ಪರ್ಶ ಸಹ ಆಗಗೊಡದಂಥ ನಿಬಿಡವಾದ ಅರಣ್ಯಗಳೇ ಎಲ್ಲಕಡೆಗೆ ಹಬ್ಬಿವೆ. ಅದರಿಂದ ಸಮುದ್ರದ ದಂಡೆಯಿಂದ ಏರುತ್ತನಡೆದ ಗುಡ್ಡಗಳು, ಅವುಗಳಮೇಲೆ ಹಬ್ಬಿರುವ ಘೋರವಾದ ಅರಣ್ಯಗಳು ಇವುಗಳ ವಿನಹ ಆ ಪ್ರದೇಶದಲ್ಲಿ ಮತ್ತೆ ಏನಿ ರುವದೆಂಬದರ ಸ್ಪಷ್ಟ ಕಲ್ಪನೆ ಮಾಡಲು ಸಹ ಬರುವಂತೆಯಿಲ್ಲ. ಆದರೂ ಬ್ರಿಟಿಶ ಸರಕಾರದ ವನವಿಭಾಗದ ಅಧಿಕಾರಿಗಳು ಅವಿಶ್ರಾಂತ ಶ್ರಮಬಟ್ಟು, ಆ ದ್ವೀಪಗಳೊಳಗಿನ ಸ್ಥಲ-ವೃಕ್ಷ-ವಸ್ತು-ಸ್ಥಿತಿಗಳ ನಿರೀಕ್ಷಣ ಮಾಡಿ, ಶಕ್ಯವಾದಷ್ಟು ಮಾಹಿತಿಯನ್ನು ಹೊರ ಗೆಡವಿರುವರು. ಈ ದ್ವೀಪ-ಪುಂಜದೊಳಗಿನ ಗುಡ್ಡಗಳಲ್ಲಿ ಎಲ್ಲಕ್ಕೂ ಉನ್ನತವಾದ 'ಸಂಡಲಮಾಉಂಟ' ಎಂಬದೊಂದು ಶಿಖರವಿದ್ದು, ಅದು, ೩,೦೦೦ ಫೂಟ ಎತ್ತರ ವಿದೆ. ಇಲ್ಲಿ ದೊಡ್ಡ ದೊಡ್ಡ ನದಿಗಳು ಇಲ್ಲವೇ ಇಲ್ಲ. ಗುಡ್ಡಗಳ ಓರೆಗಳಲ್ಲಿ ಹರಿ ಯುವ ಚಿಕ್ಕ-ಪುಟ್ಟ ಹಳ್ಳಗಳು ಮಾತ್ರ ಹೇರಳವಾಗಿವೆ.

ಈ ಪ್ರದೇಶದಲ್ಲಿ ಹೆಚ್ಚಾಗಿ ಅರಣ್ಯವಿರುವಮೂಲಕ ಮೊದಲು ಅಲ್ಲಿ ಯಾವಾ ಗಲೂ ಒಂದೇಸವನೆ ಮಳೆಬೀಳುತ್ತಿತ್ತು. ಆದರೆ ಈಗ ಯಾವ ಭಾಗದಲ್ಲಿ ಅಡವಿಕಡಿದು, ಭೂಮಿಯನ್ನು ಸಾಗುಮಾಡಿ, ತೆಂಗಿನ ತೋಟಗಳನ್ನು ತಯಾರಿಸಿ, ಜನರು ಇರುತ್ತಿ ರುವರೋ ಅಲ್ಲಿ ಹಿಂದುಸ್ಥಾನದ ಉಷ್ಣಭಾಗದಂತೆಯೇ ಋತುಮಾನವಾಗುತ್ತ ನಡೆದಿದೆ.

ಅಂದಮಾನದಲ್ಲಿ ಮುಖ್ಯತಃ ಮಳೆಗಾಲ ಬೇಸಿಗೆ ಎಂಬ ಎರಡೇ ಋತುಗಳು ಸ್ಪಷ್ಟವಾಗಿ ಗೋಚರವಾಗುತ್ತಿದ್ದು, ಅಲ್ಲಿ ಚಳಿಗಾಲ ಮಾತ್ರ ನಡುವೆ ಬರೇ ಹಣಿಕೆಹಾಕಿದಂತೆ ಬಂದು ಹೋಗುವದು. ಈ ನಡುಗಡ್ಡೆಗಳ ನಾಲ್ಕೂಬದಿಗೆ ಸಮುದ್ರವು ವ್ಯಾಪಿಸಿರುವದರಿಂದಲೂ ಇವು ಉದ್ದಗಲಗಳ ಪರಿಮಾಣದಿಂದ ಚಿಕ್ಕವಿರುವದರಿಂದಲೂ ಅವುಗಳಲ್ಲಿ ಎಲ್ಲೆಡೆಯಲ್ಲಿಯೂ ಒತ್ತು ಆಖಾತಗಳೇ ಕಂಡುಬರುತ್ತವೆ. ಆ ಒತ್ತು-ಆಖಾತಗಳಲ್ಲಿ ಅಡವಿಯೊಳಗಿನ ಎಲೆ-ಟೊಂಗೆ-ಹೂ-ಕಾಯಿ-ರವದೆಗಳ ಕಸವು ಕೂಡಿಬಿದ್ದು, ಅಲ್ಲಿಯೇ ಕೊಳೆತು ಹೋಗುವದು. ಅದರಿಂದಲೇ ಆ ನಡುಗಡೆಗಳಲ್ಲಿ ಅತ್ಯಂತ ತ್ರಾಸದಾಯಕವಾದ 'ಮಲೇರಿಯಾ' ರೋಗ ಉದ್ಭವಿಸುವದು. ಈ ಬೇನೆಯನ್ನು ಹಬ್ಬಿಸುವ ವಿವಿಧಪ್ರಕಾರದ ನೊಣಗಳೂ ಅಲ್ಲಿ ವಿಪುಲವಾಗಿವೆ. ಕೆಲ ಸೂಕ್ಷ್ಮ ನೊಣಗಳ ಹಿಂಡುಗಳು ಒಟ್ಟುಗೂಡಿದವೆಂದರೆ ಅದೊಂದು ಹೆಣೆದು ತಯಾರಿಸಿದ ತಂತಿಯ ಜಾಳಿಗೆಯೇ ಎಂಬಂತೆ ಭಾಸವಾಗುವದು. ಕೆಲ ದೊಡ್ಡ ನೊಣಗಳು ತಮ್ಮ ಉದ್ದ ಕಾಲಮೇಲೇರಿನಿಂತು ವೇಗದಿಂದ ಜೀಕಹತ್ತಿದವೆಂದರೆ ಅದೇನು ನೊಣವೋ ಕರಿಗೆರೆಯೋ ಎಂಬದನ್ನು ಗೊತ್ತುಹಿಡಿಯುವದೇ ಕಠಿಣವಾಗುವದು.

ಈ ಮಲೇರಿಯವನ್ನು ಹಬ್ಬಿಸುವ ನೊಣಗಳ ತಮ್ಮಂದಿರಾದ 'ಜಳವಾ' ಎಂಬ ಹೆಸರಿನ ಕ್ರಿಮಿಗಳೂ ಅಲ್ಲಿಯ ಅಡವಿಗಳಲ್ಲಿ ವಿಪುಲವಾಗಿವೆ. ಕೆಸರಿನಲ್ಲಿ, ಎಲೆ-ರವದೆಗಳ ಕಸದಲ್ಲಿ, ಗಿಡದ ಬೊಡ್ಡೆ-ಟೊಂಗೆ-ಎಲೆಗಳಲ್ಲಿ ಅವು ವಾಸಿಸುತ್ತವೆ. ಬಿಸಿಲಿನ ಸಮಯದಲ್ಲಿ ಅವು ಎಲ್ಲಿಯಾದರೂ ಅಡಗುತ್ತಿದ್ದು, ಮಳೆಯು ಪ್ರಾರಂಭವಾದೊಡನೆಯೇ ಹೊರಬೀಳುವವು. ಮನುಷ್ಯನ ವಾಸನೆ, ಅವನ ಹೆಜ್ಜೆಯ ಸಪ್ಪಳ ಇವನ್ನು ಅವು ಬಹು ಬೇಗ ತಿಳಿದುಕೊಳ್ಳುವವು. ಮನುಷ್ಯನು ಬಂದದ್ದು ಗೊತ್ತಾದಕೂಡಲೆ ಆ ಕ್ರಿಮಿಗಳು ಅತ್ಯಂತ ಆನಂದದಿಂದ ಅವನಮೇಲೆ ಮುಗಿಬಿದ್ದು, ಹೊರಗೆ ಕಾಣುವ ಶರೀರದ ಸಕಲ ಭಾಗಕ್ಕೆ ಅಂಟಿಕೊಂಡು, ರಕ್ತಶೋಷಣದ ಕಾರ್ಯವನ್ನು ನಡೆಯಿಸುವವು. ಮನುಷ್ಯನು ತನ್ನ ಕೈಯಿಂದ ಅವನ್ನು ಒಂದು ಮುಷ್ಟಿಯಷ್ಟು ಕಿತ್ತೊಗೆಯುವಷ್ಟರಲ್ಲಿ ಮತ್ತೆ ಎರಡುಮುಷ್ಟಿ ಕ್ರಿಮಿಗಳು ಬಂದು, ಅವನಿಗೆ ಮುತ್ತಿಕೊಳ್ಳುವವು. ಅಂತೆಯೇ ಅಲ್ಲಿಯ ಅರಣ್ಯದಲ್ಲಿ ಹಗಲೆಲ್ಲ ಕೆಲಸಮಾಡಿ, ಸಂಜೆಗೆ ತಿರುಗಿ ಮನೆಗೆ ಬರುವ ಜನರು ಆ ಕ್ರಿಮಿಗಳ ಪ್ರತಾಪದಿಂದ ರಕ್ತದ ಮಡುವಿನಲ್ಲಿ ಮುಳುಗಿ ಎದ್ದಂತೆ ಕಾಣುವದು.

ಅಂದಮಾನದಲ್ಲಿ 'ಜಳವಾ' ಕ್ರಿಮಿಗಳಿಗಿಂತಲೂ ಹೆಚ್ಚು ಘಾತುಕವಾದ ಕೆಲ ಸರ್ಪದ ಜಾತಿಯ ಪ್ರಾಣಿಗಳಿರುತ್ತವೆ. ಒಂದು ಮೊಳ ಉದ್ದ ಒಂದು ಇಂಚು ದಪ್ಪವಿರುವ ಝುರಿಯ ಆಕಾರದ ಹುಳಗಳಿಗೆ ಅಲ್ಲಿ 'ಕಾನಖಜೂರೆ' ಎಂದು ಅನ್ನುತ್ತಾರೆ.

ಅವು ಅತ್ಯಂತ ವಿಷಮಯವಿದ್ದು, ಮನುಷ್ಯನಿಗೆ ಕಡಿದು, ಭಯಂಕರ ವೇದನೆಯನ್ನುಂಟುಮಾಡುವವು. ಇದಲ್ಲದೆ 'ವ್ಹಾ ಇಪರ' ಎಂಬ ಒಂದು ವಿಶೇಷ ವಿಷಮಯವಾದ ಸಣ್ಣ ಸರ್ಪದ ಜಾತಿ ಇರುವದು. ಕೆಲವೆಡೆಯಲ್ಲಿ ಹೆಬ್ಬಾವುಗಳೂ ಒಮ್ಮೊಮ್ಮೆ ದೃಷ್ಟಿಗೆ ಬೀಳುವವು. ಕಾನನದಲ್ಲಿ ಎಷ್ಟೋ ಶತಮಾನಗಳವರೆಗೆ ಸುಧಾರಿಸಿದ ಮನುಷ್ಯನ ಸುಳಿದಾಟವೇ ಆಗದಿರುವ ಮೂಲಕ ಈ ಎಲ್ಲ ಪ್ರಾಣಿಗಳ ವೃದ್ಧಿಯು ಸ್ವೇಚ್ಛೆಯಿಂದ ಪ್ರಮಾಣಮೀರಿ ಆಗಿರುವದು. ಇಲ್ಲಿಯ ಅರಣ್ಯಗಳಲ್ಲಿ ಹುಲಿ, ಸಿಂಹ, ಕರಡಿ ಮೊದಲಾದ ಹಿಂಸ್ರ ಪಶುಗಳು ಕಂಡುಬರುವದಿಲ್ಲ. ಕಾಡಹಂದಿಗಳು ಮಾತ್ರ ಹೇರಳವಾಗಿವೆ. ಬ್ರಿಟಿಶ ಸರಕಾರದವರು ಗಿಳಿ, ನವಿಲು, ಕೋಳಿ, ಕಾಗೆ, ಗುಬ್ಬಿ ಮೊದಲಾದ ಪಕ್ಷಿಗಳನ್ನೂ ಬೇರೆ ಕೆಲವು ಗೃಹಪಾಲಿತವಾದ ಪ್ರಾಣಿಗಳನ್ನೂ ಹಿಂದುಸ್ಥಾನದಿಂದ ತಂದು, ಇಲ್ಲಿ ಬಿಟ್ಟಿರುವದರಿಂದ ಅವುಗಳ ಪೀಳಿಗೆಯೂ ಈಗ ಅಲ್ಲಿ ಹೆಚ್ಚಾಗಿ ಬೆಳೆದಿದೆ.

ಅಂದಮಾನದ ದಂಡೆಯ ಸಮುದ್ರದಲ್ಲಿ ವಿಧವಿಧದ ಸುಂದರ ಆಕೃತಿಯ ಬೆಲೆಯುಳ್ಳ ಶಂಖ-ಶಿಂಪು-ಬಿನಕುಗಳು ದೊರೆಯುತ್ತವೆ. ಚಬಕದ ಆಕಾರದ ಇಲ್ಲವೆ ವಿದ್ಯುತ್ತಿನ ವೇದನೆಯ ಬಾಲವುಳ್ಳ ಮೀನ, ಕುದುರೆ-ಮನುಷ್ಯರ ಮುಖದ ಪ್ರಾಣಿಗಳು, ವಿಧವಿಧದ ಮೊಸಳೆಗಳು ಇವೇ ಅಲ್ಲಿ ದೊರೆಯುವ ಸೋಜಿಗದ ಜಲಾಂತರ್ಗತ ಪ್ರಾಣಿಗಳಾಗಿವೆ.

ಈ ದ್ವೀಪಮಾಲೆಯ ಉಲ್ಲೇಖವು ಮಾರ್ಕೊಪೋಲೋ, ನಿಕೋಲೋ ಮೊದಲಾದ ಯುರೋಪಿಯನ್ ಹಾಗು ಬೇರೆ ಕೆಲ ಅರಬೀ ಪ್ರವಾಸಿಗಳು ಬರೆದ ಟಿಪ್ಪಣೆಗಳಲ್ಲಿ ದೊರೆಯುವದು. ಆದರೂ ಈ ನಡುಗಡ್ಡೆಗಳೊಡನೆ ಬಹು ಪೂರ್ವಕಾಲದಿಂದ ಹಿಂದುಸ್ಥಾನದ ಸಂಬಂಧವಿರುವಂತೆ ಕಾಣುವದು. ಮಗಧದೇಶದಿಂದ ಸಿಲೋನದವರೆಗೆ ಬೇರೆ ಬೇರೆ ಸಮಯದಲ್ಲಿ ಆಗಿರುವ ಜನರ ಅನೇಕ ಸಮುದ್ರ ಪ್ರವಾಸಗಳ ಆಧಾರದಿಂದಲೂ, ಆಂಧ್ರ ತಮಿಳು ಮೊದಲಾದ ದಾಕ್ಷಿಣಾತ್ಯ ಜನರು ಬ್ರಹ್ಮದೇಶ, ಸಯಾಮ, ಪೇಗು, ಜಾವಾ, ಮೊದಲಾದ ನಾಡುಗಳ ಮೇಲೆ ಮಾಡಿದ ದಾಳಿಗಳ ವರ್ಣನೆಯಿಂದಲೂ ಆಗಿನ ಭಾರತೀಯರಿಗೆ ಅಂದಮಾನದ ಪರಿಚಯವು ಚನ್ನಾಗಿ ಆಗಿರುವಂತೆ ಸ್ಪಷ್ಟವಾಗಿ ಕಂಡುಬರುವದು. ಹನ್ನೊಂದನೆಯ ಶತಮಾನದಲ್ಲಿ ಪಾಂಡ್ಯರಾಜನು ಮಾಡಿದ ದಂಡಯಾತ್ರೆಯ ವರ್ಣನೆಯಲ್ಲಿ ಅಂದಮಾನದ ಸ್ಪಷ್ಟನಾಮನಿರ್ದೇಶವಿದೆ. ಆ ವೀರನು ಆಗ ಪೇಗು ದೇಶವನ್ನು ಜಯಿಸಿ, ಅಂದಮಾನ-ನಿಕೋಬಾರಗಳಮೇಲೆ ತಮ್ಮ ಅಧಿಕಾರವನ್ನು ಪ್ರಸ್ಥಾಪಿಸಿ, ಯಶಸ್ವಿಯಾದ ನೌಕಾಬಲದೊಡನೆ ತಿರುಗಿ ಭಾರತ ಭೂಮಿಗೆ ಬಂದರೆಂದು ತತ್ಕಾಲೀನ ಗ್ರಂಥಗಳಲ್ಲಿ ಉಲ್ಲೇಖವಿದೆ. ಆದರೆ ಹೀಗೆ ಬೇರೆ ಕಾಲದಲ್ಲಿ ಅಂದಮಾನದಲ್ಲಾಗಮಿಸಿದ ಪ್ರವಾಸಿಗಳ ಪುರಾತನ ಕುರುಹುಗಳು

ಮಾತ್ರ ಇಲ್ಲಿಯವರಿಗೆ ಅಲ್ಲಿ ಹೆಚ್ಚಾಗಿ ದೊರೆತದ್ದು ಕಂಡುಬರುವದಿಲ್ಲ. ಇದರ ಮೇಲಿಂದ ಭಾರತೀಯ ವಸತಿ ಅಧಿಕಾರಗಳು ನಡುನಡುವೆ ಕೆಲಕಾಲ ಆ ದ್ವೀಪಗಳಲ್ಲಿ ನೆಲಗೊಳ್ಳುತ್ತಿದ್ದವೆಂಬಂತೆ ಕಾಣುವದು.

ಈ ಭಾರತೀಯ ವಸತಿ ಅಧಿಕಾರಿಗಳ ಬೌದ್ಧಿಕ-ಧಾರ್ಮಿಕ ಪರಿಣಾಮವು ಅಂಡಮಾನದ ಮೂಲ ನಿವಾಸಿಗಳ ಮೇಲೆ ಒಂದು ತಿಲಾಂಶದಷ್ಟು ಸಹ ಆದಂತೆ ಕಂಡು ಬರುವದಿಲ್ಲ. ಮಧ್ಯಕಾಲದೊಳಗೆ ನಮ್ಮ ದೇಶದಲ್ಲೊದಗಿದ ಸಮುದ್ರ ಪ್ರವಾಸದ ಧಾರ್ಮಿಕ ಬಹಿಷ್ಕಾರದ ನಂತರ ಅಂಡಮಾನದಲ್ಲಿ ನೆಲೆಗೊಂಡ ಹಿಂದುಗಳ ಸಂಬಂಧವು ತಮ್ಮ ಮಾತೃಭೂಮಿಯೊಡನೆ ಹರಿದು ಹೋದಂತೆ ಕಾಣುವದು. ಅಪರಿಂದ ದೇಶ ಬಂಧುಗಳ ಹೊಸ ಸಹಾಯದ ಅಭಾವದಿಂದ ಆ ದೀನರಾದ ಜನರು ಬಹುಸಂಖ್ಯೆಯವರಾದ ಅಲ್ಲಿಯ ಮೂಲ ನಿವಾಸಿಗಳನ್ನು ಸುಧಾರಿಸುವದರ ಬದಲು ಅವರ ಪ್ರಾಬಲ್ಯದ ಮೂಲಕ ಅವರಿಗೆ ಹೆದರಿ, ಅವರಲ್ಲಿಯೇ ಬೆರತು ಹೋಗಿರಬಹುದು. ಇಲ್ಲವೆ ಆ ಮೂಲನಿವಾಸಿಗಳ ಕ್ರೂರತನಕ್ಕೆ ಬಲಿಯಾಗಿ, ಸಮೂಲ ನಷ್ಟವಾಗಿರಬಹುದು. ಯಾಕಂದರೆ ಇಂದಿಗೆ ಅಲ್ಲಿಯ ಮೂಲನಿವಾಸಿಗಳ ಸ್ಥಿತಿಯು ಜಗದೊಳಗಿನ ಬೇರೆ ಬೇರೆ ಭಾಗಗಳಲ್ಲಿರುವ ಸದ್ಯದ ... ನಿವಾಸಿಗಳ ಸ್ಥಿತಿಗೆ ಬಹು ಮಟ್ಟಿಗೆ ಸಮರಸವಾಗಿದೆ.

ಅಂಡಮಾನದ ಮೂಲನಿವಾಸಿಗಳಲ್ಲಿ 'ಜಾವರಾ' ಎಂಬ ಹೆಸರಿನ ಒಂದು ಪ್ರಮುಖ ಜಾತಿಯಿದೆ. ಆ ಜನರು ಸಾಧಾರಣ ೪—೪॥ ಫೂಟು ಎತ್ತರವಿರುವರು. ಅವರು ದಡಸು ಕೃಷ್ಣವರ್ಣದವರಿದ್ದು, ಅವರ ಕೂದಲುಗಳು ಅತ್ಯಂತ ಬಿರುಸೂ, ಲಂಡವೂ ಇರುವವು. ಅವರಿಗೆ ಮೋರೆಯ ಮೇಲೆ ಗಡ್ಡ—ಮೀಸೆಗಳ ಕೂದಲುಗಳಿರುವದಿಲ್ಲ. ಅವರು ಸಂಪೂರ್ಣ ನಗ್ನಾವಸ್ಥೆಯಲ್ಲಿರುವರು. ಬಟ್ಟೆಗಳನ್ನು ಧರಿಸುವ ಸಾಹಸವನ್ನು ಅವರು ಎಂದೂ ಮಾಡುವದಿಲ್ಲ. ಮೈಗೆ ಕೆಂಪು ಮಣ್ಣು ಬಡಿದುಕೊಂಡು, ತಮ್ಮ ಶರೀರದ ಆಚ್ಛಾದನ ಪ್ರವೃತ್ತಿಯನ್ನು ತೃಪ್ತಿಮಾಡಿಕೊಳ್ಳುವರು. ಅವರ ಸ್ತ್ರೀಯರಲ್ಲಿ ಯಾವಳೊಬ್ಬಳು ಅತ್ಯಂತ ವಿಲಾಸಲೋಲುಪಳಾಗಿ ಹೊರಟರೆ ಮಾತ್ರ ಅವಳು ಯಾವದೊಂದು ಗಿಡದ ಎಲೆಯನ್ನು ತನ್ನ ಟೊಂಕಕ್ಕೆ ಹಚ್ಚಿಕೊಳ್ಳುವಳು. ಜಾವರಾ ಜನರಿಗೆ ಎತ್ತಿನ ಬಂಡಿ, ವಸ್ತ್ರ, ನೂಲುವ ರಾಟಿ, ಪಾದರಕ್ಷೆ, ಮನೆ, ಹೊಲ, ಶಾಕಾಹಾರದ ಬೇಯಿಸಿದ ಅನ್ನ, ಮೊದಲಾದ ಮನುಷ್ಯ ಸುಧಾರಣೆಯ ಯಾವ ಪ್ರಾಥಮಿಕ ಸಾಧನಗಳ ಪರಿಚಯವೂ ಇಲ್ಲ. ಅವರು ಇನ್ನೂ ತೀರ ವನ್ಯಸ್ಥಿತಿಯಲ್ಲಿರುವರು. ಅವರಿಗೆ ಆಹಾರಾರ್ಥವಾಗಿ ವನ್ಯ ಫಲಗಳ ಶೋಧ ಮಾಡುವದು, ಮೀನಗಳನ್ನು ಹಿಡಿಯುವದು, ಹಂದಿಯ ಬೇಟೆಯನ್ನು ದೊರಕಿಸುವದು, ಇವೇ ಮೊದಲಾದ ಹೊಟ್ಟೆಯ ಕಾರ್ಯಗಳ ಚಿಂತೆಯೊಂದೇ ಇರುವದು. ಇವರು ಏಕಪತ್ನೀವ್ರತವನ್ನು ಪಾಲಿಸುತ್ತಾರೆ. ಈ ಜನರು

ತಮ್ಮೊಳಗೆ ಒಬ್ಬ ಅರಸನನ್ನು ಗೊತ್ತುಮಾಡಿಕೊಂಡು, ಅವನ ಅಧೀನರಾಗಿ ನಡೆದು ಅವನಿಗೆ ಬಹಳ ಮರ್ಯಾದೆ ಕೊಡುವರು.

ಜಾವರಾ ಜನರಿಗೆ ಇತರ ಯಾವ ಯಂತ್ರಗಳ ಜ್ಞಾನವಿಲ್ಲದಿದ್ದರೂ ಸುಮಾರ ೫॥ ಫೂಟು ಉದ್ದವಿರುವ ಧನುರ್ಯಂತ್ರವು ಮಾತ್ರ ಇವರಿಗೆ ಪೂರ್ಣ ಪ ಚಯುದ್ದಾಗಿರುವದು. ಅದರಲ್ಲಿ ಮಾಡಿದ ಅವರ ಶರಸಂಧಾನವು ಎಂದೂ ತಪ್ಪು ದಿಲ್ಲ. ಆ ಧನುರ್ಬಲದ ಮೇಲೆಯೇ ಅವರ ಇಂದಿಗೂ ತಮ್ಮ ಸ್ವಾತಂತ್ರ್ಯವನ್ನು ಕಾದುಕೊಂಡಿರುವರು. ಆದರೆ ಇನ್ನುಮೇಲೆ ರಾಯಫಲ-ಬಾಂಬು-ವಿಮಾನ ವೊ ಲಾದ ಆಧುನಿಕ ಸಾಧನಗಳ ಮುಂದೆ ಅವರ ಆಟ ನಡೆಯುವದು ಕಠಿಣವಿದೆ. ಆದರೂ ಅಕಸ್ಮಿಕವಾಗಿ ರಾತ್ರಿಯ ಹೊತ್ತಿನಲ್ಲಿ ಸರಕಾರದ ಶಿಬಿರದ ಮೇಲೆ, ಇಲ್ಲವೆ ಸೆರೆಯಾಳು ಗಳ ಮೇಲೆ, ಅಥವಾ ನಾಗರಿಕರ ಬಿಡಾರದ ಮೇಲೆ ಅಲ್ಲಿಯ ಮೂಲ ನಿವಾಸಿಗಳು ಬಂದು ಮುತ್ತಿದಾಗ ಅವರನ್ನು ಹೇಗಾದರೂ ಮಾಡಿ ಅಡವಿಗೆ ಓಡಿಸುವ ಸಾಹಸದ ವಿನಃ ಬೇರೆ ಯಾವ ಕಠೋರ ಶಾಸನದ ಕಾರ್ಯವನ್ನು ಅಲ್ಲಿಯ ಸರಕಾರದವರು ಕೈಕೊಳ್ಳು ವದಿಲ್ಲ. ಒಟ್ಟಿಗೆ ಅಲ್ಲಿಯ ಮೂಲ ನಿವಾಸಿಗಳನ್ನು ಜಯಿಸುವದು ಅತ್ಯಂತ ಕಠಿಣ ವಿದೆ. ಅಂತೆಯೇ ಅವರು ಇಂದಿಗೂ ತಮ್ಮ ಬುನಾದಿಯ ಪದ್ಧತಿಯಂತೆ ಹಸಿ ಮಾಂಸ ವನ್ನು ತಿಂದು, ಪ್ರೇತ-ಭೂತಗಳನ್ನು ಭಜಿಸುತ್ತ, ಬತ್ತಲೆಯಾಗಿ, ಅರಣ್ಯದಲ್ಲಿ ಸುಖ ದಿಂದ ಕಾಲಕಳೆ ಯುತ್ತಿರುವರು.

ಜಾವರಾ ಜನರು ನರಮಾಂಸ ಭಕ್ಷಕರಾಗಿರುವರು. ಆದರೂ ಕೆಲ ಗಟ್ಟಿಗರಾದ ಯುರೋಪಿಯನ್ ಸಾಹಸಿಗರು ಧೈರ್ಯದಿಂದ ಆ ಜನರ ಗುಂಪಿನಲ್ಲಿ ಪ್ರವೇಶಿಸಿ, ಅವ ರೊಡನೆ ಸಖ್ಯತ್ವವನ್ನು ಬೆಳೆಯಿಸಿ, ಅವರ ರೀತಿ-ಭಾಷೆಗಳ ಕೆಲ ಮನೋರಂಜಕವಾದ ಸಂಗತಿಗಳನ್ನು ಅಭ್ಯಾಸಿಸಿರುವರು. ಅಂದಮಾನದೊಳಗಿನ ಸೆರೆಮನೆಗಳಿಂದ ಅಧಿಕಾರಿ ಗಳ ಕಣ್ಣು ತಪ್ಪಿಸಿ, ಅಡವಿಗೆ ಓಡಿಹೋದ ಕೆಲ ಸೆರೆಯಾಳುಗಳೂ ಜಾವರಾ ಜನರ ಆಶ್ರಯದಲ್ಲಿದ್ದು, ಅವರ ಆದರಾತಿಥ್ಯದ ಭೋಜನವನ್ನುಂಡು, ಸರಳವಾಗಿ ಅಲ್ಲಿಂದ ಬಿಡು ಗಡೆ ಹೊಂದಿದ ಅನೇಕ ಉದಾಹರಣೆಗಳಿವೆ. ಇದರ ಮೇಲಿಂದ ತಮಗೆ ಶರಣಾಗ ರಾದವರನ್ನು ಆ ಜನರು ಸಹಸಾ ಕೊಲ್ಲುವದಿಲ್ಲವೆಂಬಂತೆ ಕಾಣುವದು. ಆದರೂ ಆಂಗ್ಲ ಅಧಿಕಾರಿಗಳನ್ನೂ, ಅಲ್ಲಿ ನೆಲಸಿದ ಹಿಂದೀ-ಯುರೋಪಿಯನ್ ನಾಗರಿಕರನ್ನೂ ಆ ವನ್ಯ ಜನರು ತಮ್ಮ ನೈಸರ್ಗಿಕ ಶತ್ರುಗಳೆಂದು ತಿಳಿಯುವರು. ಒಬ್ಬಿಬ್ಬ ಮಾನ ವರು ಎಲ್ಲಿಯಾದರೂ ಅಪ್ಪಿತಪ್ಪಿ ಸಿಕ್ಕರೆ ಅವರನ್ನು ಆ ಮೂಲ ನಿವಾಸಿಗಳು ಕೊಂದು ಅವರ ದೇಹದೊಳಗಿನ ಹಸಿ ಮಾಂಸವನ್ನು ಅಲ್ಲಿಯೇ ತಿಂದುಬಿಡುವರು. ಬೆಳಗ್ಗೆ ಎದ್ದ ಕೂಡಲೆ ಎಲ್ಲ ಜಾವರಾ ಜನರು ಕೈಯಲ್ಲಿ ಧನುರ್ಬಾಣಗಳನ್ನು ತೆಗೆದುಕೊಂಡು

ಬೇಟೆಗೆ ಹೊರಡುವರು. ಅವರ ಹೆಂಗಸರು ಮೀನ ಹಿಡಿಯಲಿಕ್ಕೆ ಸಮುದ್ರದ ಧಡಕ್ಕೆ ಹೋಗುವರು. ಈ ಜನರು ಎಲ್ಲರೂ ಒಟ್ಟಾಗಿ ಒಂದೇ ಚಪ್ಪರದ ಕೆಳಗೆ ಇರುವರು. ಬೇಟೆಯಲ್ಲಿಸಿಕ್ಕ ದೊಡ್ಡದೊಡ್ಡ ಪ್ರಾಣಿಗಳನ್ನು ಸಾಮೂಹಿಕ ಆಹಾರವೆಂದು ತಿಳಿಯು ವರು. ವನ್ಯಫಲ, ಮೀನ, ಜೇನುತುಪ್ಪ ಇವುಗಳನ್ನು ತಮ್ಮವು ತಾವೇ ತಿನ್ನುವರು. ಹಗಲೆಲ್ಲ ಆಹಾರದ ದೆಸೆಯಿಂದ ತಿರುಗಾಡಿ, ರಾತ್ರಿ ಎಲ್ಲರೂ ಒತ್ತಟ್ಟಿಗೆ ಕೂಡಿ, ದೊಡ್ಡ ಪ್ರಮಾಣದಿಂದ ಬೆಂಕಿಯನ್ನು ಹೊತ್ತಿಸಿ, ಅದರ ಮೇಲೆ ಆ ಸಾಮೂಹಿಕವಾಗಿರುವ ಬೇಟೆಗಳನ್ನು ತೂಗಬಿಡುವರು. ಕೆಲ ಹೊತ್ತಿನ ಮೇಲೆ ಅವು ಉರಿಯ ಝಳದಿಂದ ಚನ್ನಾಗಿ ಬೆಂದ ಮೇಲೆ ಅವನ್ನು ಎಲ್ಲರೂ ಹಂಚಿಕೊಂಡು ತಿನ್ನುವರು. ಆ ಮೇಲೆ ಎಲ್ಲರೂ ಅಲ್ಲಿಯೇ ಆ ಬೆಂಕಿಯ ಸುತ್ತಲು ನಗ್ನಾವಸ್ಥೆಯಿಂದ ಮಲಗಿಕೊಳ್ಳುವರು. ಒಂದೊಂದು ದಿವಸ ಮಲಗುವ ಪೂರ್ವದಲ್ಲಿ ಎಲ್ಲ ಸ್ತ್ರೀ-ಪುರುಷರು ಸಮ್ಮಿಲಿತರಾಗಿ, ಆನಂದದಿಂದ ಒಂದು ಬಗೆಯ ನಾಚು ಮಾಡುವರು. ಜಾವರಾ ಜನರು ತಮ್ಮಲ್ಲಿ ಮೃತಪಟ್ಟವರ ದೇಹವನ್ನು ಗಿಡಕ್ಕೆ ತೂಗ ಹಾಕುವರು. ಮುಂದೆ ಕೆಲವು ದಿವಸಗಳ ನಂತರ ಕಲ್ಲು ಹೊಡೆದು ಅದನ್ನು ಭೂಮಿಗೆ ಕೆಡವುವರು.

ಜಾವರಾ ಜನರೊಳಗಿನ ಒಂದು ಉಪಜಾತಿಯು ಕೆಲವು ವರ್ಷಗಳ ಕೆಳಗೆ ಬ್ರಿಟಿಶ ಸರಕಾರಕ್ಕೆ ಶರಣುಬಂದು, ಅವರ ಆಶ್ರಯದಲ್ಲಿರಹತ್ತಿದೆ. ವನ್ಯ ಜಾವರಾ ಜನರು ಈ ಪಂಗಡದವರನ್ನೂ ಆಧುನಿಕ ಮನುಷ್ಯರೆಂದು ತಿಳಿದು, ಹೆಚ್ಚಾಗಿ ದ್ವೇಷಿಸು ವರು. ಇಂಗ್ಲೀಷರ ಆಶ್ರಯದಲ್ಲಿರುವ ಈ ಜಾವರಾ ಜನರು ಜೇನುತುಪ್ಪ-ಮೀನಗ ಳನ್ನೂ, ಸಮುದ್ರದಲ್ಲಿ ದೊರೆಯುವ ಸುಂದರವಾದ ಶಂಖ-ಸಿಂಪು-ಬೆನಕಗಳನ್ನೂ ಸಂ ಗ್ರಹಿಸಿ ತಂದು, ಬ್ರಿಟಶರ ಶಿಬರದಲ್ಲಿ ಹಾಕಿ, ತಮ್ಮ ದೆಸೆಯಿಂದ ಕಟ್ಟಿಸಿದ ಬಿಡಾರಗಳಲ್ಲಿ ಕೆಲವು ದಿವಸ ಇದ್ದು, ಸರಕಾರದ ಆದರಾತಿಥ್ಯವನ್ನನುಭವಿಸಿ, ತಾವು ತಂದ ಒಡವೆಗ ಳಿಗೆ ಪ್ರತಿಯಾಗಿ ಕಾಚಿನ ಆಟಿಗೆ, ಸಕ್ಕರಿ, ತಂಬಾಕ ಈ ವಸ್ತುಗಳನ್ನು ತೆಗೆದುಕೊಂಡು, ಮತ್ತೆ ತಮ್ಮ ಪ್ರೀತಿಯ ಅಭೇದ್ಯವಾದ ಅರಣ್ಯದಲ್ಲಿ ಪ್ರವೇಶಿಸಿ, ಅದೃಶ್ಯರಾಗುವರು. ಆ ಮೇಲೆ ಆ ವನ್ಯಜನರು ತಂದು ಹಾಕಿದ ಎಲ್ಲ ವಸ್ತುಗಳನ್ನು ಸರಕಾರದವರು ಪರ ದೇಶಗಳಿಗೆ ಮಾರಾಟಕ್ಕೆ ಕಳುಹಿಸುವರು. ಅವರು ತಂದ ಶಂಖಗಳನ್ನು ಚನ್ನಾಗಿ ತಿಕ್ಕಿ, ಅವುಗಳಿಗೆ ಬೆಳ್ಳಿ-ಬಂಗಾರಗಳ ತಗಡುಗಳನ್ನು ಆಚ್ಛಾದಿಸಿ, ಅವನ್ನು ಬಹಳ ಬೆಲೆಗೆ ಮಾರುವರು. ಈ ಸುಧಾರಿಸಿದ ಜಾವರಾ ಜನರು ಈಗ ತಮ್ಮ ಮರ್ಯಾದೆಯನ್ನು ಮುಚ್ಚಿಕೊಳ್ಳುವದಕ್ಕಾಗಿ ಚಿಕ್ಕದೊಂದು ಲಂಗೋಟಿಯನ್ನು ಹಾಕಿಕೊಳ್ಳಹತ್ತಿರುವರು. ಅವರ ಸ್ತ್ರೀಯರು ಒಂದು ಎಲೆಯನ್ನಾಗಲಿ ಇಲ್ಲವೆ ಎಲೆಗಳ ಒಂದು ಸರವನ್ನಾಗಲಿ ತಮ್ಮ ಟೊಂಕಕ್ಕೆ ಸುತ್ತಿಕೊಳ್ಳಲಾರಂಭಿಸಿರುವರು. ವಸಾಹತಿನ ಜನರೊಡನೆ ಈ

ಜಾವರಾ ಜನರ ಸಂಬಂಧವು ಈಗ ಹೆಚ್ಚಾಗಹತ್ತಿರುವ ಮೂಲಕ ಅವರಲ್ಲೊಂದು ಮಿಶ್ರ ಜನಾಂಗವು ಇತ್ತಿತ್ತ ಉತ್ಪನ್ನವಾಗಹತ್ತಿದೆ. ಯುರೋಪಿಯನ್ ಹಾಗು ಹಿಂದೀ ಪುರುಷರ ಸಂಸರ್ಗದಿಂದ ಜಾವರಾ ಸ್ತ್ರೀಯರಲ್ಲುತ್ಪನ್ನವಾದ ಗೌರಕಾಯದ ಇಲ್ಲವೆ ಅರ್ಧಮರ್ಧ ಗೌರಕಾಯದ ಬಾಲ-ಬಾಲಕಿಯರು ಈಗ ಹೆಚ್ಚಾಗಿ ದೃಷ್ಟಿಗೆ ಬೀಳಹತ್ತಿರುವರು. ಅವರೊಳಗಿನ ಕೆಲ ತರುಣ-ತರುಣಿಯರಿಗೆ ಶಿಕ್ಷಣವನ್ನು ಕೊಟ್ಟು ಅವರನ್ನು ಸರಕಾರದ ಚಾಕರಿಯಲ್ಲಿ ಸಹ ತೆಗೆದುಕೊಳ್ಳುವ ಪ್ರಯತ್ನವು ಸದ್ಯಕ್ಕೆ ಅಲ್ಲಿ ಆರಂಭವಾಗಿದೆ.

ಜಾವರಾ ಜನರನ್ನು ಹೊರ್ತು ಪಡಿಸಿ, ಅಂದಮಾನದಲ್ಲಿ ಮತ್ತೊಂದು ಬಗೆಯ ವನ್ಯ ಜಾತಿಯಿದ್ದದ್ದು ಕಂಡುಬರುತ್ತದೆ. ಆದರೆ ಆ ಜಾತಿಯು ಅಷ್ಟೊಂದು ಕಾಡು ಸ್ಥಿತಿಯಲ್ಲಿರದೆ ಹೆಚ್ಚು ಪ್ರಗತಿಪರವಾಗಿದೆ. ಬಹುಶಃ ಇದು ಪೂರ್ವಕಾಲದಲ್ಲಿ ಇಲ್ಲಿ ಬಂದು ವಸಾಹತು ಮಾಡಿದ ಹಿಂದುಗಳ ಹಾಗು ಅಲ್ಲಿಯ ವನ್ಯ ಜನರ ಮಿಶ್ರಣದಿಂದ ಹುಟ್ಟಿದ ಜನಾಂಗವಿರಬಹುದೆಂದು ಬಲ್ಲವರ ಅಭಿಪ್ರಾಯವಿದೆ.

ಅಂದಮಾನದ ಅರ್ವಾಚೀನ ಕಾಲದ ಸುಸಂಗತವಾದ ಇತಿಹಾಸವು ಸಾಧಾರಣತಃ ೧೭೬೬ ನೆಯ ಇಸವಿಯಿಂದ ಆರಂಭವಾಗುತ್ತದೆ. ಅದಕ್ಕೂ ಮೊದಲು ಹಿಂದುಸ್ಥಾನದೊಳಗಿನ ಬ್ರಿಟಿಶ ಕಂಪನೀ ಸರಕಾರದವರು ಕರಿ ನೀರಿನ ಶಿಕ್ಷೆ ಹೊಂದಿದ ಸೆರೆಯಾಳುಗಳನ್ನು ಸಿಂಗಾಪೂರ, ಪೆನಾಂಗ, ಮಲಕ್ಕಾ, ಟೆನಾಸರಿಮ ಮೊದಲಾದ ಭಾಗಗಳಿಗೆ ಕಳಿಸಿಕೊಡುತ್ತಿದ್ದರು. ಇಂಜಿನಿಯರ ಕೊಲಬ್ರೂಕ ಮತ್ತು ಕ್ಯಾಪಟನ್ ಬ್ಲೇಅರ ಈ ಉಭಯತರು ಸಾಹಸಿಗಳು ೧೭೬೬ ರಲ್ಲಿ ಮೊಟ್ಟಮೊದಲು ಅಂದಮಾನದಲ್ಲಿ ವಸಾಹತು ಮಾಡುವ ಪ್ರಯತ್ನ ನಡೆಯಿಸಿದರು. ಕ್ಯಾಪಟನ್ ಬ್ಲೇಅರನು ವಸಾಹತಿನ ಉದ್ಯೋಗವನ್ನು ಆರಂಭಿಸಿದಾಗ ಅಂದಮಾನದ ಹವಾಮಾನವು ಜನರ ಆರೋಗ್ಯಕ್ಕೆ ತೀರ ಮಾರಕವಾಗಿತ್ತು. ಮೊದಮೊದಲು ಅಲ್ಲಿ ಬಂಧು ಅಪರಾಧಿಗಳಲ್ಲಿ ಯಾರೂ ಬಹಳ ದಿವಸ ಬದುಕಲಿಲ್ಲ. ಈ ಬ್ಲೇಅರ ಸಾಹೇಬರ ಹೆಸರಿನಿಂದಲೇ ಅಂದಮಾನದ ಸದ್ಯದ ರಾಜಧಾನಿಯು ಹಾಗು ಬಂದರವು 'ಪೋರ್ಟಬ್ಲೇಅರ, ಎಂದು ಕರೆಯಲ್ಪಡುತ್ತದೆ. ಸನ್ ೧೮೫೭।೫೮ ರಲ್ಲೊದಗಿದ ಹಿಂದುಸ್ಥಾನದೊಳಗಿನ ಕ್ರಾಂತಿ-ಯುದ್ಧದಲ್ಲಿ ಸೆರೆ ಸಿಕ್ಕ ಲಕ್ಷಾಂತರ ಹಿಂದೀ ಸೈನಿಕರಿಗೆ ಆಗಿನ ಬ್ರಿಟಿಶ ಕಂಪನೀ ಸರಕಾರದವರು ದ್ವೀಪಾಂತರದ ಶಿಕ್ಷೆಯನ್ನು ವಿಧಿಸಿ, ಅವರನ್ನು ಅಂದಮಾನಕ್ಕೆ ಕಳಿಸಿದರು. ಅಂದಿನಿಂದ ಇಲ್ಲಿ ವ್ಯವಸ್ಥಿತವಾಗಿ ವಸಾಹತು ನೆಲೆಗೊಳ್ಳಲಿಕ್ಕೆ ಪ್ರಾರಂಭವಾಯಿತು. ಖೂನು, ದರವಡೆ, ಬಂಡು, ದಂಗೆ, ಕ್ರಾಂತಿ ಇಂಥ ಘೋರ ಕರ್ಮ ಮಾಡಿದ ಹಿಂದೀ ಅಪರಾಧಿಗಳನ್ನು ಹಿಂದುಸ್ಥಾನ ಸರಕಾರದವರು ಅಂದಿನಿಂದ ಅಂದಮಾನಕ್ಕೆ ಕಳಿಸಹತ್ತಿದರು.

ವಂಗ ಭಂಗದ ವಿಪ್ಲವದ ನಂತರ ಹಾಗು ಪ್ರಪಂಚದ ಮಹಾಯುದ್ಧವು ಆರಂಭವಾದ ಮೇಲೆ ನಮ್ಮ ದೇಶದಲ್ಲಿ ಬ್ರಿಟಿಶ ಸರಕಾರದ ವಿರುದ್ಧವಾಗಿ ಕೊಲೆ-ಒಳಸಂಚುಗಳನ್ನು ನಡೆಯಿಸಿದ ಅಸಂಖ್ಯ ಕ್ರಾಂತಿಕಾರಕರಿಗೆ ಅಂದಮಾನದ ಕಾರಾಗೃಹವಾಸವೇ ಪ್ರಾಪ್ತವಾಯಿತು. ಸದ್ಯಕ್ಕೆ ಬಂಗಾಲ ಪ್ರಾಂತದಲ್ಲಿ ಸರಕಾರದ ವಿರುದ್ಧ ಸಶಸ್ತ್ರ ರೀತಿಯಿಂದ ಗಲಭೆ ಎಬ್ಬಿಸಿದ ಬಂಗಾಲೀ ಕ್ರಾಂತಿಕಾರಕರಿಗೂ ಹಿಂದುಸ್ಥಾನ ಸರಕಾರದವರು ಅಂದಮಾನದ ಸೆರೆಮನೆಗಳಿಗೆ ಕಳಿಸುತ್ತಿರುವರು.

ಅಂದ ಮಾನದಲ್ಲಿ ಸರಕಾರದವರು ಮೊದಮೊದಲು ಅಪರಾಧಿಗಳನ್ನು ದುಡಿದು ಹೊಟ್ಟೆ ತುಂಬಿಕೊಳ್ಳಿರೆಂದು ಹಾಗೆಯೇ ಸ್ವತಂತ್ರವಾಗಿ ಬಿಟ್ಟು ಬಿಡುತ್ತಿದ್ದರು. ಮುಂದೆ ಆ ಪದ್ಧತಿಯನ್ನು ನಿಲ್ಲಿಸಿ, ಸೆರೆಯಾಳುಗಳನ್ನು ಕೆಲವೊಂದು ಅವಧಿಯ ವರೆಗೆ ದುಡಿಸಿಕೊಂಡು, ಆ ಮೇಲೆ ಅವರನ್ನು ಅಲ್ಲಿಯೇ ಸ್ವತಂತ್ರವಾಗಿ ಬಿಡುವ ಪರಿಪಾಠ ಆರಂಭವಾಯಿತು. ಇತ್ತಿತ್ತಲಾಗಿ ಅಪರಾಧಿಗಳನ್ನು ಆದಷ್ಟು ಬಂದುಕಟ್ಟಿನಲ್ಲಿಡುವದೇ ಉಚಿತವೆಂದು ಕಂಡು ಬಂದದ್ದರಿಂದ ಅಂದಮಾನದಲ್ಲಿ ಅಸಂಖ್ಯ ಸೆರೆಮನೆಗಳು ಕಟ್ಟಲ್ಪಟ್ಟಿವೆ. 'ಸಿಲವ್ಹರ ಜೇಲ' ಎಂಬದು ಅವುಗಳೊಳಗಿನ ಒಂದು ಹೆಸರಾದ ಸೆರೆಮನೆಯಾಗಿದೆ.

ಅಂದಮಾನದಲ್ಲಿ ಸದ್ಯಕ್ಕೆ ನಮ್ಮ ದೇಶ-ಸಂಸ್ಕೃತಿ ಧರ್ಮದವರಾದ ಸುಮಾರು ೧೦,೦೦೦ ಜನರು ನೆಲಸಿರುವರು. ಇವರೆಲ್ಲರು ಅಲ್ಲಿ ಸ್ವತಂತ್ರರಾಗಿ ಉಳಿದ ಸೆರೆಯಾಳುಗಳ ವಂಶಜರಾಗಿರುವರು. ಇವರಿಗೆ ಅಲ್ಲಿ 'ಫ್ರೀ' ಎಂದು ಅನ್ನುತ್ತಾರೆ. ಸದ್ಯಕ್ಕೆ ಇವರಲ್ಲಿ ಎಷ್ಟೋ ಸುಶಿಕ್ಷಿತರಾದ ಸಜ್ಜನರು ಉದಯ ವಾಗಿರುವರು. ಬತ್ತದ ಗದ್ದೆಗಳನ್ನು ಸಾಗು ಮಾಡುವದೇ ಇವರ ಮುಖ್ಯ ವ್ಯವಸಾಯವಾಗಿದೆ. ಇವರಲ್ಲಿ ಹಿಂದೂ ಧರ್ಮದವರೇ ಹೆಚ್ಚಾಗಿರುವರು. ಅಂದಮಾನದಲ್ಲಿ ಉರ್ದು ಭಾಷೆಯೇ ಜನ ಸಾಮಾನ್ಯರ ಭಾಷೆಯಾಗಿದ್ದು, ಅಲ್ಲಿಯ ಶಿಕ್ಷಣವೆಲ್ಲವು ಅದೇ ಭಾಷೆಯಲ್ಲಿ ನಡೆಯುತ್ತದೆ. ಆದರೆ ಇದರಿಂದ ಅಲ್ಲಿ ನೆಲಸಿದ ಹಿಂದುಗಳು ಮಾತ್ರ ತಮ್ಮ ಧರ್ಮ-ಸಂಸ್ಕೃತಿಗಳಿಗೆ ಪೂರ್ಣ ವಿಸ್ಮೃತರಾಗಹತ್ತಿದ್ದಾರೆ. ಆದುದರಿಂದ ಹಿಂದುಗಳ ಮಟ್ಟಿಗೆಯಾದರೂ ಅಲ್ಲಿ ದೇವನಾಗರೀ ಲಿಪಿಯಲ್ಲಿ ಹಿಂದೀ ಭಾಷೆಯ ಶಿಕ್ಷಣ ದೊರೆಯುವಂತೆ ವ್ಯವಸ್ಥೆಯಾಗುವದು ಅತ್ಯವಶ್ಯವಿದೆ.

ಅಂದಮಾನದಲ್ಲಿ ಈಗ ೭೦।೭೫ ವರ್ಷಗಳಿಂದ ಮುಖ್ಯತಃ ಹಿಂದೀ-ಬ್ರಹ್ಮೀ ಸೆರೆಯಾಳುಗಳೇ ನೆಲಸಿರುವ ಮೂಲಕ ಅಲ್ಲಿಯ ಜನ ಸಮೂಹವು ಸಂಪೂರ್ಣ ಭಾರತೀಯವೇ ಆಗಿದೆ. ಆದರೆ ನಿಕೋಬಾರದಲ್ಲಿ ಮಾತ್ರ ಬ್ರಹ್ಮೀ—ಮಲಾಯೀ ಜನರ ವಸತಿಯುಂಟಾಗಿ, ಅಲ್ಲಿ ಹಿಂದೀ ಜನರ ಅಭಾವವಾಗಿದೆ.

ಸರಕಾರದವರು ಅಂದಮಾನವನ್ನು ಕೆಲವು ಜಿಲ್ಹೆಗಳಲ್ಲಿ ವಿಭಾಗಿಸಿದ್ದು, ಪ್ರತಿಯೊಂದು ಜಿಲ್ಹೆಯಲ್ಲಿ ಒಂದೊಂದು ನೆರಿಮನೆಯೂ, ಒಂದೊಂದು ಕಾರಖಾನೆಯೂ ಇವೆ. ಫಿನಿಕ್ಸಬೇ ಎಂಬಲ್ಲಿ ಕಬ್ಬಿಣ, ಹಿತ್ತಾಳಿ, ಶಿಂಪು, ಆವೆಯ ಮೈಮೇಲಿನ ಚಿಪ್ಪು ಮೊದಲಾದವುಗಳಿಂದ ಅನೇಕ ಸುಂದರವಾದ ಪದಾರ್ಥಗಳನ್ನು ತಯಾರಿಸುವ ಶಿಲ್ಪ ಶಾಲೆಯಿದೆ. ನೇವ್ಹಿಬೇ ಎಂಬಲ್ಲಿ ಕಾಯಿಪಲ್ಲೆಗಳ ಮೇಲಾದ ತೋಟಗಳಿವೆ. ಚಥನು ಎಂಬಲ್ಲಿ ಅಡವಿಯೊಳಗಿನ ಕಟ್ಟಿಗೆ ಕೊರಿದು ಹಲಿಗೆಗಳನ್ನು ತಯಾರಿಸುವ ದೊಡ್ಡದೊಂದು ಕಾರಖಾನೆಯಿದೆ. ಕಾಲಾಟಾಂಗ ಎಂಬಲ್ಲಿ ಹೆಸರಾದ ಚಹದ ತೋಟವಿದೆ.

ಅಪರಾಧಿಗಳನ್ನು ದ್ವೀಪಾಂತರಕ್ಕೆ ಕಳಿಸುವ ಧೋರಣವನ್ನು ಹಿಂದೀ ಜನತೆಯು ಬಹು ದಿವಸ ಒಂದೇಸವನೆ ಏಕಮತದಿಂದ ನಿಷೇಧಿಸ ಹತ್ತಿದ ಮೂಲಕ ಮಧ್ಯಂತರದಲ್ಲಿ ಅಂದಮಾನಕ್ಕೆ ಸೆರೆಯಾಳುಗಳನ್ನು ಕಳಿಸುವ ಉದ್ಯೋಗವನ್ನು ಹಿಂದುಸ್ತಾನ ಸರಕಾರದವರು ಸಂಪೂರ್ಣ ನಿಲ್ಲಿಸಿದ್ದರು. ಆಗ ಅಲ್ಲಿಯ ಭೂಭಾಗದ ತುಂಡುಗಳನ್ನೂ, ಸರಕಾರದವರು ತಾವಾಗಿ ಅಡಿವೆಯನ್ನು ಸಾಗುಮಾಡಿಸಿ, ತಯಾರಿಸಿದ ತೆಂಗು-ಅಡಿಕೆಗಳ ತೋಟಗಳನ್ನೂ, ಬಹಳ ಅಲ್ಪ ಬೆಲೆಗೆ ಅಲ್ಲಿಯ ಅಧಿಕಾರಿಗಳು ಮಾರಲಿಕ್ಕೆ ಸಿದ್ಧರಾಗಿದ್ದರು. ಅಡಿವೆ ಕಡಿದು ಭೂಮಿಯನ್ನು ಸಾಗುಮಾಡಿಕೊಳ್ಳಲಿಕ್ಕೂ ಅವರು ಒಳ್ಳೇ ಸುಲಭವಾದ ಅನುಕೂಲತೆಗಳನ್ನು ಕೊಟ್ಟಿದ್ದರು. ಆದರೆ ಹಿಂದೀ ಧನಿಕರಿಗೂ, ವರ್ತಕರಿಗೂ ಇದರ ಯಾವ ಕಲ್ಪನೆಯೇ ಇಲ್ಲದಮೂಲಕ ಬಹುತರ ಎಲ್ಲ ಭೂಮಿ-ತೋಟ-ಅರಣ್ಯಗಳನ್ನು ಅಲ್ಲಿ ನೆಲಿಸಿದ ಯುರೋಪಿಯನ್, ಆಂಗ್ಲೋಇಂಡಿಯನ್ ಧನಿಕರೇ ಕೊಂಡು ಕೊಂಡಿರುವರು. ಕೆಲ ಸಾಹಸಿಗರಾದ ಹಿಂದೀ ವರ್ತಕರು ಅವುಗಳೊಳಗಿನ ಕೆಲವು ಚಿಕ್ಕ ಭಾಗಗಳನ್ನು ಕೊಂಡು ಕೊಂಡಿದ್ದರೂ ಹಿಂದುಸ್ಥಾನದಿಂದ ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಯೋಗ್ಯ ಶ್ರಮ-ಜೀವಿ ಜನರು ದೊರೆಯದಿರುವ ಮೂಲಕ ಅವರ ಧನಾರ್ಜನೆಯ ಕೆಲಸವು ಅಲ್ಲಿ ಸರಿಯಾಗಿ ಸಾಗದಂತಾಗಿದೆ. ಒಂದೆರಡು ಕ್ರಿಸ್ತೀ ಧರ್ಮ ಸಂಸ್ಥೆಯವರು ಹಿಂದುಸ್ತಾನದಿಂದ ಸಂತಾಳ ಮೊದಲಾದ ಮೂಲ ನಿವಾಸಿಗಳನ್ನು ಅಲ್ಲಿ ಒಯ್ದು, ಅವರಿಗೆ ಕ್ರಿಸ್ತೀ ಧರ್ಮದ ದೀಕ್ಷೆಯನ್ನು ಕೊಟ್ಟು ಅವರಿಂದ ಅಲ್ಲಿಯ ಅಡಿವೆಯನ್ನು ಕಡಿಸಿ, ಅವರದೊಂದು ಕ್ರಿಸ್ತೀ ವಸಾಹತು ಸ್ಥಾಪಿಸುವ ಯೋಜನೆ ನಡೆಯಿಸಿರುವರು. ಆದರೆ ಹಿಂದೀ ಧನಿಕರೂ, ವರ್ತಕರೂ ಅಂದಮಾನದೊಳಗೆ ಹೆಚ್ಚಾಗಿ ಭೂಮಿಯನ್ನು ಕೊಂಡು, ಅಲ್ಲಿ ದೊಡ್ಡ ಪ್ರಮಾಣದಿಂದ ವಸಾಹತು ಮಾಡದಿರುವದು ಅತ್ಯಂತ ಶೋಚನೀಯವಾದ ಸಂಗತಿಯಾಗಿದೆ.

ಅಂದಮಾನದಲ್ಲಿ ಚಹ, ರಬ್ಬರ, ಕಬ್ಬು, ತೆಂಗು, ಅಡಿಕೆ ಇವುಗಳ ಬನಗಳನ್ನು ಬೆಳೆಯಿಸಲಿಕ್ಕೆ ಭೂಮಿ-ನೀರು-ಹವೆಗಳ ಒಳ್ಳೇ ಅನುಕೂಲತೆಯಿದೆ. ಇನ್ನೂ ಅಲ್ಲಿ

ಸಾಗು ಆಗತಕ್ಕ ಭಾಗವು ಬಹಳವಿದೆ. ಇಷ್ಟು ವರ್ಷಗಳ ದೀರ್ಘ ಪರಿಶ್ರಮದಿಂದ ತೀರ ಸ್ವಲ್ಪ ಭಾಗದಲ್ಲಿಯೇ ಜನರು ಒಕ್ಕಲಾಗಿರುವರು. ಕಾನನಗಳಿಂದಲೂ ಬಹಳ ಉತ್ಪನ್ನವು ಹೊರಡುವಂತಿದೆ.

ಅಂದಮಾನದಲ್ಲಿ ಮೊದಲು ಬರೇ ಘೋರಕರ್ಮಿಗಳಾದ ಅಪರಾಧಿಗಳೇ ನೆಲಸಿದಾಗ ಸಾಮಾನ್ಯ ಜನರಿಗೆ ಅಲ್ಲಿ ಹೋಗಿ ವಸಾಹತು ಮಾಡುವದು ಪರಮ ಕಷ್ಟಕರುವಾದ ಕೆಲಸವಾಗಿತ್ತು. ಆದರೆ ಈಗ ಬೇರೆ ಬೇರೆ ಜನರು ಅಲ್ಲಿ ಹೋಗಿ ಒಕ್ಕಲಾಗಿರುವ ಮೂಲಕ ಹೊಸದಾಗಿ ವಸಾಹತು ಮಾಡಲಿಚ್ಛಿಸುವ ನಮ್ಮ ಜನರಿಗೆ ಆ ದ್ವೀಪಪುಂಜದಲ್ಲಿ ಯಾವ ಪ್ರಕಾರದ ಹೆಚ್ಚಿನ ತೊಂದರೆಯಾಗುವ ಸಂಭವವಿಲ್ಲ. ಅಂದಮಾನದ ಚೀಫ ಕಮೀಶನರ ಸಾಹೇಬರಿಂದ ಅಲ್ಲಿಯ ಎಲ್ಲ ಬಗೆಯ ಮಾಹಿತಿ ದೊರೆಯುತ್ತದೆ. ಹಿಂದೀ ಧನಿಕರೂ, ಸಾಹಸಿಗರೂ ಇದರ ಲಾಭವನ್ನು ತೆಗೆದುಕೊಂಡು, ಅಲ್ಲಿ ವಸಾಹತು ಮಾಡಲುಜ್ಜುಗಿಸುವದು ಅತ್ಯಂತ ಯೋಗ್ಯವು.

ಸಕ್ಕರೆ

—(೦)—

(ಇಂಗ್ಲಿಷ ಲೇಖದ ಆಧಾರದಿಂದ ಬರೆದದ್ದು.)

ಸಕ್ಕರೆಯನ್ನು ಮಾಡುವ ಉದ್ಯೋಗವು ಹಿಂದುಸ್ಥಾನದಲ್ಲಿ ಈಗ ಒಳ್ಳೆಯ ಭರದಿಂದ ಬೆಳೆಯುತ್ತಲಿದೆ; ಆದರೆ ಈ ಬೆಳವಣಿಗೆಯ ಭರವು ಒಳ್ಳೇ ಎತ್ತರದಲ್ಲಿರುವದರಿಂದಲೇ ಮುಂದೆ ಇದೇ ಪ್ರಕಾರ ನಡೆಯಲಾರದೆಂದು ತಿಳಿಯುವದು. ೧೯೩೧–೧೯೩೨ ರಲ್ಲಿ ಒಟ್ಟಿಗೆ ಸಕ್ಕರೆ ತೆಗೆಯುವ ಯಂತ್ರಾಲಯಗಳು ೪೩ ಇದ್ದವು. ಇವು ೧೯೩೨-೧೯೩೩ ರಲ್ಲಿ ೧೨೮ ಆದವು. ಅಂದರೆ ಈ ಕಾರಖಾನೆಗಳ ಸಂಖ್ಯೆಯು ೧೦೦ ಕ್ಕೆ ೧೦೦ ರಂತೆ ಬೆಳೆದಂತಾಯಿತೆಂದು ಗೊತ್ತಾಗುತ್ತದೆ. ಅವುಗಳಲ್ಲಿ ಸಿದ್ಧವಾದ ಸಕ್ಕರೆಯು ೧೯೩೦–೩೧ ರಲ್ಲಿ ೩.೫೧ ಲಕ್ಷ ಟನ್ನು, ೧೯೩೧–೧೯೩೨ ರಲ್ಲಿ ೪.೭೮ ಲಕ್ಷ ಟನ್ನು, ೧೯೩೨–೧೯೩೩ ರಲ್ಲಿ ೬.೨೬ ಲಕ್ಷ ಟನ್ನು ಇದ್ದಿತು. ೧೯೩೩–೧೯೩೪ ರಲ್ಲಿ ೮.೮೬ ಲಕ್ಷ ಟನ್ನ ಆಗಬಹುದೆಂದು ಅಂದಾಜು ಅದೆ. ಮುಂದೆ ೯.೪೬ ಲಕ್ಷ ಟನ್ನು ಆಗುವದೆಂದು ಹೇಳಬಹುದು.

೩—೩೬೪೯

ಸಕ್ಕರೆಯ ಪೂರೈಕೆಯು ಹೀಗೆ ಹೆಚ್ಚಾದದ್ದರ ಕಾರಣಗಳು:— ಹೊರದೇಶದಿಂದ ಬರುವ ಸಕ್ಕರೆಗೆ ೧೯೩೧ನೆಯ ಇಸ್ವಿಯಿಂದ ಹೆಚ್ಚಿಗೆ ಸುಂಕವನ್ನಿಟ್ಟರು. ಪುನಃ ೧೯೩೨ರಲ್ಲಿ ಮತ್ತೆ ಈ ಕರವನ್ನು ಹೆಚ್ಚಿಗೆ ಬೆಳೆಯಿಸಿ ೧ ಹಂಡ್ರೆಡ್ವೇಟ ಸಕ್ಕರೆಗೆ ರು. ೯—೧ ಆ. ಕರವನ್ನು ಮಾಡಿದ್ದಾರೆ. ಜಾವಾದ್ವೀಪದಿಂದ ಬರುವ ಸಕ್ಕರೆಗೆ ಸಹ ೧೦೦ ಕ್ಕೆ ೨೦ ರಂತೆ ಕರ ಬೆಳೆದದೆ. ಈ ಪ್ರಕಾರವಾಗಿ ಹಿಂದುಸ್ತಾನದ ಸಕ್ಕರೆಯ ಉದ್ಯೋಗಕ್ಕೆ ಉತ್ತೇಜನ ದೊರೆತಿದೆ. ಇದರ ಸಂಗಡವೇ ಕಬ್ಬಿನ ಉದ್ಯೋಗಕ್ಕೆ ತಕ್ಕ ಮಟ್ಟಿಗೆ ಉತ್ತೇಜನ ದೊರೆದಿರುವದು ಸ್ವಾಭಾವಿಕವು. ಈ ಸಾಗುವಳಿಯು ಕಳೆದ ೪ ವರ್ಷಗಳಲ್ಲಿ ೨·೬೫ ಇಷ್ಟು ಮಿಲಿಯನ್ ಎಕರೆಯಿಂದ ೩·೪೧ ಮಿಲಿಯನ್ ಎಕರೆಯ ವರೆಗೆ ಬೆಳೆದಿರುತ್ತದೆ. ಈ ಭೂಮಿಯಲ್ಲಿ ಬೆಳೆದ ಕಬ್ಬು ೩ ಕೋಟಿ ಟನ್ನಿನಿಂದ ೫ ಕೋಟಿ ಟನ್ನಿನ ವರೆಗೆ ಬೆಳೆದದೆ. ಇಷ್ಟೇ ಅಲ್ಲದೆ ಹೊಲಗಳಲ್ಲಿ ಉತ್ತಮ ತರದ ರಸವುಳ್ಳ ಬೇರೆ ಬೇರೆ ತರದ ಕಬ್ಬುಗಳ ಸಾಗುವಳಿಯು ಆರಂಭವಾಗಿದೆ.

ಈ ರೀತಿಯಾಗಿ ಕಬ್ಬಿನ ಬೆಳೆಯು ಹೆಚ್ಚಾಗಿ ಬೆಳೆದದ್ದರಿಂದ ಧಾರಣೆಯು ಅಗ್ಗವಾಗತೊಡಗಿದೆ. ಮೊದಲು ೧ ಮಣ ಕಬ್ಬಿಗೆ ೮ ಆಣೆ ಇದ್ದದ್ದು ಈಗ ೫ ಆಣೆ ಆಗಿದೆ. ಕಬ್ಬಿನ ಗಿರಣಿಗಳಿಗೆ ಸರ್ವಸಾಧಾರಣವಾಗಿ ೧೦೦ ಕ್ಕೆ ೧೦, ಅದಕ್ಕಿಂತ ಹೆಚ್ಚು ಲಾಭವಾಗಿದೆ.

ಉದ್ಯೋಗಗಳಿಗೆ ದೊರೆಯುವ ರಕ್ಷಣೆಯು ನಿಯಮಿತವಾಗಿರುವದಿಲ್ಲ. ಅದರಿಂದ ರೈತರ ಕಬ್ಬಿನ ದಾರಣೆಗೆ ಆ ರಕ್ಷಣೆಯ ಉಪಯೋಗವಾಗುವದಿಲ್ಲ. ಆದರಿಂದ ಹೆಚ್ಚಿನತರದ ಕಬ್ಬು ಬೆಳೆಯುಸಲಿಕ್ಕೆ ಉತ್ತೇಜನ ದೊರೆಯುವದಿಲ್ಲ. ಇತ್ತಿತ್ತಲಾಗಿ ಸಕ್ಕರೆಯ ಯಂತ್ರಾಲಯಗಳು ಇಳಿತರದ ಲಕ್ಷಣಕ್ಕೆ ಬರಲಾರಂಭಿಸಿವೆ. ಹಳೆಯ ಎಷ್ಟೋ ಯಂತ್ರಾಲಯಗಳು ಹೆಚ್ಚು ಕಬ್ಬನ್ನು ನುರಿಸಿ ಹೆಚ್ಚುಲಾಭ ಮಾಡಿಕೊಳ್ಳುವ ವಿಚಾರದಲ್ಲಿವೆ. ಈ ತರಹದ ಪದ್ಧತಿಯು ಆರಂಭವಾದರೆ ಒಟ್ಟು ಯಂತ್ರಾಲಯಗಳ ಸಾಮೂಹಿಕ ಯೋಗ್ಯತೆಯು ಇಳಿಯುವದು. ಮತ್ತು ಉದ್ಯೋಗ ರಕ್ಷಣೆಯು ಕಡಿಮೆಯಾದರೆ ಹೊರಗಿನ ವ್ಯಾಪಾರಿಗಳಕೂಡ ಮೇಲಾಟ ಮಾಡಲಿಕ್ಕೆ ಶಕ್ತಿಯು ಉಳಿಯಲಾರದು. ಈಗ ಎರಡು ವರ್ಷಗಳಿಂದ ಸಿದ್ಧವಾಗುವ ಸಕ್ಕರೆಯ ಗುಣವು ಕಡಿಮೆ ಪ್ರತಿಯದಾಗಿದೆಯೆಂದು ಗೊತ್ತಾಗಿದೆ. ಮತ್ತು ಯಂತ್ರಾಲಯದವರು ಒಂದೇ ಯೋಗ್ಯತೆಯ ಸಕ್ಕರೆಯನ್ನು ಹೊರಡಿಸುವದಿಲ್ಲ. ಒಂದೇ ತರದ ಸಕ್ಕರೆಯು ಸಿದ್ಧವಾಗುತ್ತಿದ್ದರೆ ದೂರಿನ ಪೇಟೆಗಳಲ್ಲಿ ಗುರುತಿಸಲಿಕ್ಕೆ ಆಸ್ಪದ ದೊರೆತು ವ್ಯಾಪಾರದ ಬೆಳವಣಿಗೆಗೆ ಸಹಾಯವಾಗುತ್ತಿತ್ತು. ಡಚ್ಚರು ಜಾವಾದ್ವೀಪದ ಸಕ್ಕರೆಯಲ್ಲಿ ಬೇರೆಬೇರೆ ಪ್ರಕಾರಗಳನ್ನು ಮಾಡಿದಂತೆ ಇವರೂ ಮಾಡಲಿಕ್ಕೆ ಬಿಗಿಯಾಗಲಿಕ್ಕಿಲ್ಲ. ಈ ತರಹದ ಉಪಾ

ಯುಗಳನ್ನು ಕೈಕೊಳ್ಳದಿದ್ದರೆ ಮೇಲಾಟ ಮಾಡುವದು ಬಿಗಿಯಾಗುವದು. ನೂತನ ಯಂತ್ರಾಲಯಗಳು ಸಕ್ಕರೆಯ ಮಾರಾಟದಲ್ಲಿ ಬಹಳ ಸುಧಾರಣೆಯನ್ನು ಬೇಡುತ್ತವೆ. ಅಲ್ಪ ಭಂಡವಲವುಳ್ಳ ಯಂತ್ರಾಲಯಗಳು ಮೇಲಿನ ದರಕ್ಕೆ ಸಕ್ಕರೆಯು ಮಾರಾಟವಾಗದ್ದರಿಂದ ಯಂತ್ರಗಳ ಖರ್ಚನ್ನು ಕಳೆಯುವದಕ್ಕಾಗಿ ಕಡಿಮೆಪ್ರತಿಯ ಸಕ್ಕರೆಯನ್ನು ತಯಾರಿಸಿ ಕಡಿಮೆ ಬೆಲೆಗೆ ಮಾರಾಟ ಮಾಡಹತ್ತಿದ್ದಾರೆ. ಇದರಿಂದ ನಿಶ್ಚಿತ ಧಾರಣೆಯು ನಿಲ್ಲದಂತಾಗಿದೆ. ಬೇರೆ ಬೇರೆ ಯಂತ್ರಾಲಯಗಳು ಬೇರೆ ಬೇರೆ ಧಾರಣೆ ಮಾಡಿದ್ದರಿಂದ ನಿಯಮಿತ ಧಾರಣೆಯು ನಿಲ್ಲಲೊಲ್ಲದು. ಸಕ್ಕರೆಯ ಮಾರಾಟವನ್ನು ಸಂಘಗಳ ಮುಖಾಂತರವಾಗಿ ಮಾಡಿದರೆ ಸಕ್ಕರೆಯ ಉದ್ಯೋಗಕ್ಕೆ ಸಹಾಯವಾಗುವದು. ಯಂತ್ರಾಲಯಗಳಲ್ಲಿ ಸಕ್ಕರೆಯನ್ನು ವ್ಯವಸ್ಥಿತವಾಗಿ ಇಡಲಿಕ್ಕೆ ಚಲೋ ಸ್ಥಳದ ಅಭಾವವು ಎಷ್ಟೋಕಡೆಯಲ್ಲಿ ಕಂಡುಬರುವದು. ಅದನ್ನು ತಕ್ಕಂತೆ ಇಡುವ ಪದ್ಧತಿಗಳು ಅವರಿಗೆ ಗೊತ್ತಿಲ್ಲ. ಹಳೆಯ ಯಂತ್ರಾಲಯಗಳಲ್ಲಿ ಹೆಚ್ಚು ಸಕ್ಕರೆಯನ್ನು ಹೊರಡಿಸತೊಡಗಿರುವದರಿಂದ ಅವಕ್ಕೆ ಸಾಕಾಗುವಷ್ಟು ಸ್ಥಳವು (ವಖಾರವು) ಇರುವದಿಲ್ಲ. ಅದರಿಂದ ಮಾರ್ಕೇಟಿಗೆ ಒಯ್ಯುವವರೆಗೂ ಸುರಕ್ಷಿತವಾಗಿ ಇಡಲಿಕ್ಕೆ ಬರುವಂತಿಲ್ಲ. ಸಕ್ಕರೆಯನ್ನು ದೊಡ್ಡದೊಡ್ಡ ಚೀಲಗಳಲ್ಲಿ ಒತ್ತಿ ತುಂಬಿ ಒತ್ತಟ್ಟಿಗೆ ಏರಿಸಿ ಇಡುವದರಿಂದ ಹವೆಯಲ್ಲಿ ತುಸು ಉಷ್ಣತೆಯು ಏರಿದರೆ ಸಕ್ಕರೆಯು ನೀರೊಡೆಯುತ್ತದೆ. ಈ ತೊಂದರೆಯ ಅನುಭವವೂ ಅದನ್ನು ಸರಿಯಾಗಿಡುವ ಪದ್ಧತಿಯೂ ಅವರಿಗೆ ಗೊತ್ತಿರುವದಿಲ್ಲ. ಈಗ್ಗೆ ಎರಡು ಮೂರು ವರ್ಷಗಳ ಹಿಂದೆ ಸ್ಥಾಪಿತವಾದ ಯಂತ್ರಾಲಯದವರಿಗೆ ಈ ಸಂಗತಿಯೇ ಗೊತ್ತಿದ್ದಿಲ್ಲ. ಕೆಲಕೆಲವು ಯಂತ್ರಾಲಯಗಳಲ್ಲಿ ತಕ್ಕಂಥ ಡಿರೆಕ್ಟರರು ಇರುವದಿಲ್ಲ. ವ್ಯಾಪಾರದಲ್ಲಿ ಹೆಚ್ಚು ನುರಿತವರೂ ಮಿತವ್ಯಯಿಗಳೂ ಆದ ಡಿರೆಕ್ಟರ ಜನರಿದ್ದರೆ ಯಂತ್ರಾಲಯಕ್ಕೆ ಅವರಿಂದ ಯೋಗ್ಯ ಉಪಯೋಗವಾಗುವದು. ಸಕ್ಕರೆಯ ಉದ್ಯೋಗವು ಮೊದಲು ಒಳ್ಳೆಯ ಭರದಿಂದ ಆರಂಭವಾಗಿದ್ದರೂ ಮೇಲಿನ ಎಲ್ಲ ತೊಂದರೆಗಳ ಮೂಲಕ ಎಲ್ಲಕ್ಕೂ ಮೊದಲು ಹೇಳಿದಂತೆ ಈ ಭರವು ಚಿರಸ್ಥಾಯಿಯಾಗಿ ನಿಲ್ಲುವದು ಸಂಶಯಯುಕ್ತವಾಗಿದೆ. ಮೇಲಾಟ ಮಾಡುವದಕ್ಕಿಂತ ಮೊದಲು ಸಿದ್ಧವಾದ ಸಕ್ಕರೆಯೆಲ್ಲವೂ ಖರ್ಚಾಗುವಂತೆ ನೋಡಿಕೊಳ್ಳಬೇಕಾಗಿದೆ. ಒಕ್ಕಲಿಗರು ಉತ್ತಮ ಕಬ್ಬು ಬೆಳೆಯಲಿಕ್ಕೂ ಯೋಗ್ಯವಾದ ಧಾರಣೆಯು ಅವರಿಗೆ ದೊರೆಯುವಂತೆಯೂ ಯಂತ್ರಾಲಯದವರು ನೋಡಿಕೊಳ್ಳಲಿಕ್ಕೆ ಬೇಕು. ಅವರಿಗೆ ಉತ್ತಮವಾದ ಕಬ್ಬಿನ ಬೀಜಗಳು ದೊರೆಯುವಂತೆ ಅವರಿಗೆ ಸಹಾಯವನ್ನೂ ಉತ್ತೇಜನವನ್ನೂ ದೊರಕಿಸಿ ಕೊಡಬೇಕು. ಯಂತ್ರಾಲಯದವರು ಇನ್ನುಮುಂದೆ ಜಾವಾ ಮತ್ತು ಹವಾಯಿ ದ್ವೀಪಗಳಲ್ಲಿಯ ಸಂಘಗಳನ್ನು ನಿರೀಕ್ಷಿಸಿ ತಕ್ಕ ಅಭ್ಯಾಸವನ್ನು ಮಾಡಬೇಕಾಗಿದೆ. ಆ ಉದ್ಯೋಗದ ತಜ್ಞರಿಗೆ ದುಡ್ಡಿನ ಸಹಾಯ ಮಾಡಬೇಕು. ಇನ್ನುಮುಂದೆ ಸಕ್ಕರೆಯ

ಕಮಿಟಿಯವರು ಶೋಧಮಾಡುವ ಕಾರ್ಯಕ್ಕಾಗಿ ೧೬೭೩೪೮೦ ರೂ. ಗಳನ್ನು ೫ ವರ್ಷ ಗಳವರೆಗೆ ಹೆಚ್ಚುಮಾಡಬೇಕೆಂದು ಗೊತ್ತು ಮಾಡಿದ್ದಾರೆ. ಸಂಯುಕ್ತ ಪ್ರಾಂತದಲ್ಲಿ ಇಂಥ ದೊಂದು ಸಂಘವು ಸ್ಥಾಪನವಾಗುವದದೆ. ಸಕ್ಕರಿ ಕಮೀಟಿಯವರು ಸಕ್ಕರಿ ಸಿದ್ಧಪಡಿಸುವ ಕೆಲಸದಲ್ಲಿ ನೈಪುಣ್ಯಹೊಂದುವದಕ್ಕೆ ತಕ್ಕ ಶಿಕ್ಷಣವನ್ನು ಹುಡುಗರಿಗೆ ಕೊಡಬೇಕೆಂದು ನಿರ್ಧಾರಮಾಡಿದ್ದಾರೆ. ಇಂಥ ಸಂಸ್ಥೆಗಳೂ ಕಮೀಟಿಗಳೂ ಯೋಗ್ಯರೀತಿಯಿಂದ ನಡೆದು ಶೋಧಕರೂ ಡಿರೆಕ್ಟರರೂ ತಮ್ಮ ಶಕ್ತ್ಯನುಸಾರವಾಗಿ ಪೂರ್ಣ ಮನಸು ಗೊಟ್ಟು ಕೆಲಸಮಾಡಿ ಸಕ್ಕರೆಯ ಉದ್ಯೋಗವನ್ನು ಬೆಳೆಯಿಸುವರೆಂದು ಆಶಿಸುತ್ತೇವೆ.

ಮಾನಸಶಾಸ್ತ್ರವು

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಒಂದು ವೇಳೆ ಇದಕ್ಕೆ ವಿರುದ್ಧವಾಗಿ, ರೋಗವು ಭಯಂಕರವಾದದ್ದು, ಇದರೊಳಗಿಂದ ಪಾರಾದರೆ, ಪೂರ್ವದ ಪುಣ್ಯವೇ ಸರಿ. ಎಂಬ ವಿಷತುಲ್ಯವಾಕ್ಯಗಳನ್ನು ರೋಗಿಗೆ ಹೇಳಿದರೆ, ಆ ರೋಗಿಯು ಅಂತ್ಯವಾಯಿತೆಂತಲೇ ತಿಳಿಯಬೇಕು. ವೈದ್ಯರ ಉತ್ಸಾಹಜನಕ, ಆಶಾಜನಕ ಸಜೀವವಿಚಾರಗಳಿಂದ ಎಷ್ಟು ಸುಪರಿಣಾಮವಾಗುತ್ತದೆಂಬದನ್ನು ಬೇರೆ ಹೇಳಬೇಕಾದುದಿಲ್ಲ. ಮಾನಸಿಕ ಆರೋಗ್ಯವೇ ಶಾರೀರಿಕ ಆರೋಗ್ಯದ ತಳಹದಿಯಾಗಿದೆ. ಹಲ್ಲಿಯನ್ನು ನುಂಗಿರುವೆನೆಂಬ ಸಂಶಯಪಿಶಾಚಿಯಿಂದ ಪೀಡಿತನಾಗಿ, ಕೃಶಾಂಗನಾದ ಮನುಷ್ಯನಿಗೆ, ವಾಂತಿಯುಂಟಾಗುವಂತೆ ಮಾಡಿ, ಅದರಲ್ಲಿ ಹಲ್ಲಿಯನ್ನು ಬೇರೆ ಕಡೆಯಿಂದ ತಂದುಹಾಕಿ ತೋರಿಸಿದ ಸಂಗತಿಯು ಎಲ್ಲರಿಗೂ ಗೊತ್ತಾಗಿದೆ. ಆಗ ಅವನ ಮನಸ್ಸಿನಲ್ಲಿ ಆನಂದವುಂಟಾಗಿ ದಿನೇ ದಿನೇ ಅವನ ಶಾರೀರಕ ಶಕ್ತಿಯು ಬೆಳೆದುದನ್ನಾದರೂ ಬಲ್ಲರು. ಇದಕ್ಕೆ ಮಾನಸಿಕ ಆರೋಗ್ಯವೇ ಕಾರಣವಲ್ಲವೇ ?

ಮಾನಸಿಕ ಆರೋಗ್ಯತೆಯುಂಟಾಗಬೇಕಾದರೆ, ಯಾವಾಗಲೂ, ಉತ್ಸಾಹಜನಕ, ಆನಂದದಾಯಕ ವಿಚಾರಗಳನ್ನು ಮನಸ್ಸಿನಲ್ಲಿ ತರಬೇಕು. ಪ್ರತಿಯೊಂದು ಕಾರ್ಯದಲ್ಲಿಯೂ ಈ ನಿಯಮವು ಉಪಯೋಗಬೀಳುವದು. ಆನುವಂಶಿಕ ಕ್ಷಯರೋಗದ ಕುಟುಂಬದಲ್ಲಿ ಜನಿಸಿದ ಒಬ್ಬ ಎಳೆಯ ಕುವರಿಗೆ ನಿನ್ನ ಮನೆಯವರಿಗೆಲ್ಲ ಕ್ಷಯರೋಗವಿದೆ, ನಿನಗಾದರೂ ಆ ರೋಗವುಂಟು; ಆದುದರಿಂದ ಥಂಡಿಯಲ್ಲಿ ಅಡ್ಡಾಡಬೇಡ

ಇಲ್ಲವೆ ಹೆಚ್ಚಿಗೆ ಶ್ರಮವನ್ನಾದರೂ ವಹಿಸಬೇಡ ಎಂದು ಹೇಳಹತ್ತಿದರೆ, ಆ ಕೋಮಲೆಯ ಹೃತ್ಪಟಲದ ಮೇಲೆ ಆ ವಾಕ್ಯಗಳು ಬಿಂಬಿಸಿ, ಕ್ಷಯರೋಗದ ದುಷ್ಪರಿಣಾಮವಾಗದೆ ಇರದು.

ಮನಸ್ಸಿಗೆ ದುಃಖವಾದರೆ, ಅನ್ನಪಚನವೂ, ರಕ್ತಾಭಿಸರಣಕ್ರಿಯೆಯೂ, ಚೆನ್ನಾಗಿ ನಡೆಯಲಾರವೆಂದು ಪ್ರಯೋಗಗಳಿಂದ ಕಂಡುಹಿಡಿದಿರುವರು. ಹಗಲಿರುಳು, ದುಃಖ ರೋಗ ಇವುಗಳ ಕಡೆಗೆ ದೃಷ್ಟಿಯನ್ನಿಟ್ಟರೆ, ಆಯುಷ್ಯವು ಕ್ಷೀಣವಾಗುತ್ತದೆ. ಇದಕ್ಕೆ ವಿಪರೀತವಾಗಿ ಸುಖ ಆರೋಗ್ಯಗಳ ಕಡೆಗೆ ದೃಷ್ಟಿಯನ್ನಿಟ್ಟರೆ, ಆಯುಷ್ಯವು ಬೆಳೆಯುತ್ತದೆ. "ಚಿಂತೆಯೇ ಮುಪ್ಪು ಸಂತೋಷವೇ ಯೌವ್ವನ" ಎಂಬ ಮಾತಿನ ಗೂಢವಾದರೂ ಇದೇ.

ನಮ್ಮಲ್ಲಿರುವ ಆನಂದಮಯಸ್ಥಿತಿ, ಗುಪ್ತಕ್ರಿಯಾಶಕ್ತಿ ಇವುಗಳ ಮೇಲೆ ವಿಶ್ವಾಸವಿಲ್ಲಿಂದೇ ಅನೇಕ ದುಃಖಗಳನ್ನು ಅನುಭವಿಸಬೇಕಾಗಿ ಬಂದದೆ. ಕೆಲ ಜನರು ಇಲ್ಲದ ದುಃಖಗಳನ್ನು ತಂದುಕೊಂಡು ಅನುಕರಿಸಲಿಕ್ಕೆ ಹೋಗಿ, ಕಷ್ಟಗಳನ್ನು ತಂದುಕೊಳ್ಳುತ್ತಾರೆ. ತಮ್ಮ ವಿಚಾರಗಳು ತಮಗೇ ಇರಲಿಕ್ಕೆಬೇಕು. ಎರಡನೆಯವರ ವಿಚಾರವು ಉಪಯೋಗಬೀಳುವಂತಿದ್ದರೆ ಮಾತ್ರ ಸ್ವೀಕರಿಸಬಹುದು.

ನಿರೋಗಿಗಳೂ ಸದೃಢರೂ ಆಗಬೇಕೆಂಬ ಇಚ್ಛೆಯುಳ್ಳ ಪುರುಷರು ಮೊದಲು ತಮ್ಮ ನಿರೋಗತೆಯ ಸದೃಢತೆಯ ಮಾನಸಿಕ ಚಿತ್ರವನ್ನು ಯಥಾರ್ಥವಾಗಿ ಸೂಚಿಸುವದರಲ್ಲಿ ತಮ್ಮ ಸರ್ವಶಕ್ತಿಯನ್ನುಪಯೋಗಿಸಬೇಕು. ಕೆಲವು ದಿವಸಗಳ ಮೇಲೆ ಆ ಸದೃಢತೆಯ ಚಿತ್ರವು ಈ ಜಡಶರೀರದಲ್ಲಿ ಬಂಪದ್ದು ಕಂಡುಬರುತ್ತದೆ. ಎಲ್ಲಿ ಆ ಮಾನಸಿಕ ಚಿತ್ರವಿಲ್ಲವೋ ಅಲ್ಲಿ ಆರೋಗ್ಯವಾದರೂ ಇಲ್ಲ. ಎಲ್ಲಿಯ ವರೆಗೆ ನಾವು ಅಶಕ್ತರಿದ್ದೇವೆ, ನಮ್ಮಲ್ಲಿ ಆನುವಂಶಿಕ ರೋಗವದೆ, ನಮ್ಮ ಶಕ್ತಿಯು ಮರ್ಯಾದಿತವಿದೆ, ಈ ರೋಗದಿಂದಲೇ ಸಾಯುವದು ನಮ್ಮ ಹಣೆಬರಹದಲ್ಲಿದೆ ಎಂದು ಮನಸ್ಸಿನಲ್ಲಿ ಬರುತ್ತಿದೆಯೋ ಆ ವರೆಗೆ ರೋಗದಾರಿದ್ರ್ಯ ದುಃಖ ಇವುಗಳು ಬೆನ್ನುಹತ್ತಿದವುಗಳೇ.

ಮೇಲಿನ ವಿವೇಚನದಿಂದ ಹೊಸ ಪದ್ಧತಿಯ ಶಿಕ್ಷಣಕ್ರಮದಲ್ಲಿ ಮಾನಸಿಕ, ಶಾರೀರಿಕ, ನೈತಿಕ, ಎಂಬ ಮೂರು ಪ್ರಕಾರಗಳಾಗಿರುವವು. ಇವು ಒಂದರಿಂದೊಂದು ಭಿನ್ನವಾಗಿರದೆ ಪರಸ್ಪರಸಂಬಂಧವುಳ್ಳವುಗಳಾಗಿರುವವು. ಮಾನಸಿಕ ಶಕ್ತಿಗಳ ವಿಕಾಸವು ಸುಯಂತ್ರಿತವಾಗಿ ಆಗಬೇಕಾದರೆ, ಶರೀರವು ಆರೋಗ್ಯವುಳ್ಳದ್ದೂ ಸದೃಢವಾದದ್ದೂ ಇರಲಿಕ್ಕೆಬೇಕು. ಈ ಕಾರಣದಿಂದ ಶಾರೀರ ಶಿಕ್ಷಣಕ್ಕೆ ಪ್ರಾಧಾನ್ಯವು ಬಂದಿರುವದು. ಶರೀರವು ಆರೋಗ್ಯವಾಗಿರಬೇಕಾದರೆ, ಮನಸ್ಸಿನಲ್ಲಿ ಸುವಿಚಾರಗಳು ಹುಟ್ಟಿ ಚಿತ್ತಶುದ್ಧಿಯಾಗಬೇಕು, ನೈತಿಕ ಶಿಕ್ಷಣದಿಂದ ಚಿತ್ತಶುದ್ಧಿಯಾಗುತ್ತದೆಂಬದಕ್ಕೆ ಸಂದೇಹವಿಲ್ಲ.

ಇಂದ್ರಿಯಗಳ ವಿಕಾಸವೂ ಅವುಗಳ ಶಿಕ್ಷಣವೂ

ಇಂದ್ರಿಯಗಳ ವಿಕಾಸವು ಮುಖ್ಯತಃ ಬಾಲಕರ ನೈಸರ್ಗಿಕ ಒಲವು ಹಾಗು ಸ್ಥಿತಿಗಳನ್ನು ಅವಲಂಬಿಸಿರುವದು. ಚಿತ್ರಗಾರರ ಮನೆಯಲ್ಲಿ ಹುಟ್ಟಿದ ಹುಡುಗನಿಗೆ ಇತರ ಹುಡುಗರಿಗಿಂತ ಪದಾರ್ಥಗಳ ಬಂಣ ಆಕಾರ ಇವುಗಳ ಜ್ಞಾನವು ಬಹು ಬೇಗ ಆಗುತ್ತದೆ. ಯಾಕಂದರೆ ಹುಟ್ಟಿದಂದಿನಿಂದ ಅವನ ನೇತ್ರೇಂದ್ರಿಯಕ್ಕೆ ಒಂದು ತರದ ವಿಶೇಷ ಶಿಕ್ಷಣವು ದೊರೆಯುವದು. ಅದರಂತೆ ಅಡವಿಯಲ್ಲಿರುವ ಕಾಡು ಜನರ ಹುಡುಗರ ಶ್ರೋತ್ರೇಂದ್ರಿಯವು ಸ್ವಭಾವತಃ ತೀಕ್ಷ್ಣವಾಗಿರುವದು. ಕಾಡು ಮೃಗಗಳ ಸ್ವರದ ಜ್ಞಾನವು ಅವರಿಗೆ ಬಹು ಬೇಗ ಆಗುವದು. ಆನುವಂಶಿಕತೆಯ ತತ್ವದಂತೆ ತಂದೆಯಂತೆ ಮಗನು ಆಗುವದು ಸ್ವಾಭಾವಿಕವು. ಆದರೂ ಹುಡುಗರಲ್ಲಿ ನೈಸರ್ಗಿಕ ಒಲವುಗಳು ಇದ್ದಾಗ್ಯೂ ಅವರ ಇಂದ್ರಿಯಗಳ ವಿಕಾಸಕ್ಕೆ ಬಹು ಮಟ್ಟಿಗೆ ಪರಿಸ್ಥಿತಿಯೇ ಕಾರಣವಾಗಿರುವದು, ಚಿತ್ರಕಾರರ ಹುಡುಗರನ್ನು ಹುಟ್ಟಿದಕೂಡಲೆ ಒಂದು ಕತ್ತಲೆಯ ಕೋಣೆಯಲ್ಲಿ ಇಟ್ಟು ಜೋಪಾನಮಾಡಹತ್ತಿದರೆ; ಅವನಲ್ಲಿರುವ ನೈಸರ್ಗಿಕ ಗುಣವು ನಷ್ಟವಾಗಿ ಕಣ್ಣಿನಿಂದ ಆಕೃತಿ ಬಣ್ಣಗಳನ್ನು ತಿಳಿದುಕೊಳ್ಳುವದು ದುಸ್ಸಾಧ್ಯವಾಗುವದು. ಇದರಂತೆ ಒಬ್ಬ ಭಿಲ್ಲ ಹುಡುಗನನ್ನು ಹುಟ್ಟಿದಕೂಡಲೆ ಯಾವತರದ ಧ್ವನಿಯೂ ಕೇಳಬರದಂಥ ಕೋಣೆಯಲ್ಲಿಟ್ಟು ಜೋಪಾನಮಾಡಿದರೆ ತುಸುವರ್ಷಗಳಲ್ಲಿ ಅವನು ಕಿವುಡನಾಗಿ ಮೂಕನಾಗುವನು. ಇದರಿಂದ ಪರಿಸ್ಥಿತಿಯ ಮಹತ್ವವು ಎಷ್ಟಿರುವದೆಂಬದು ಗೊತ್ತಾಗುವದು.

ಬಾಲಕರ ಇಂದ್ರಿಯ ವಿಕಾಸವಾಗುವ ಕ್ರಮವು ಕೆಳಗೆ ಕೊಟ್ಟಂತೆ:—

(೧) ಸ್ಪರ್ಶೇಂದ್ರಿಯ, (೨) ನೇತ್ರ, (೩) ಶ್ರೋತ್ರೇಂದ್ರಿಯ, (೪) ರಸನೇಂದ್ರಿಯ, (೫) ಘ್ರಾಣೇಂದ್ರಿಯ.

ಈ ಕ್ರಮವನ್ನು ಹೇಳುವಾಗ ಒಂದು ಇಂದ್ರಿಯದ ವಿಕಾಸವಾದ ಮೇಲೆ ಮತ್ತೊಂದು ಇಂದ್ರಿಯದ ವಿಕಾಸವು ಪ್ರಾರಂಭವಾಗುತ್ತದೆಂದು ಮಾತ್ರ ತಿಳಿಯಲಾಗದು. ಬಾಲ್ಯಾವಸ್ಥೆಯಲ್ಲಿಯೂ ಕೂಡ ಚಿಕ್ಕ ಬಾಲಕರಿಗೆ ಎಲ್ಲ ಇಂದ್ರಿಯಗಳ ವಿಕಾಸವು ಆಗಹತ್ತುವದು. ಆದರೆ ಅವುಗಳ ಪ್ರಗತಿಯು ಅತಿ ಮಂದವೇಗದಿಂದ ನಡೆಯುವದು. ತೀರ ಸಂಣ ಕೂಸುಗಳ ಸ್ಪರ್ಶೇಂದ್ರಿಯವು ತೀಕ್ಷ್ಣವಾಗಿದ್ದು ನೇತ್ರೇಂದ್ರಿಯಕ್ಕಿಂತ ಮೊದಲು ಹೆಚ್ಚು ವಿಕಾಸ ಹೊಂದಹತ್ತುವದು. ಮೊಟ್ಟಮೊದಲು ನುಗುವು ತಾಯಿಯ ಗುರುತನ್ನು ಆಕೆಯ ಬೆರಳು ಹಿಡಿದು ಮಾಡಿಕೊಳ್ಳುವದು. ಕ್ರಮ ಕ್ರಮದಿಂದ ತಾಯಿಯ

ಮೋರೆಯನ್ನು ನೋಡಿ ಗುರ್ತುಮಾಡಿಕೊಳ್ಳುವದು. ಆಮೇಲೆ ಆಕೆಯ ಧ್ವನಿಕೇಳಿ ಗುರ್ತು ಹಿಡಿಯುವದು. ಮಗುವು ತನ್ನ ಕೈಕಾಲು ಅವಯವಗಳ ಜ್ಞಾನವನ್ನು ಮುಟ್ಟಿ ನೋಡಿ ಮಾಡಿಕೊಂಡು ಆ ಜ್ಞಾನವು ನಿಜವಾಗಿದೆಯೊ ಇಲ್ಲವೊ ಎಂಬದನ್ನು ಕಣ್ಣಿನಿಂದ ನೋಡಿ ಪರೀಕ್ಷಿಸಿಕೊಳ್ಳುವದು. ಹುಟ್ಟಿದಾಗ ಪ್ರಕಾಶವು ಶಿಶುವಿನ ಕಣ್ಣುಗಳಿಗೆ ಅಸಹ್ಯವಾಗುವದರಿಂದ ಅದು ಕಣ್ಣು ಮುಚ್ಚಿಕೊಂಡು ಕೆಲವು ದಿವಸಗಳವರೆಗೆ ಇರುವದು. ಅದರಿಂದ ಅದು ಕತ್ತಲೆಯಲ್ಲಿ ಕಣ್ಣು ತೆರೆದು ಬೆಳಕು-ಕತ್ತಲೆಗಳ ಭೇದವನ್ನು ಅರಿತುಕೊಳ್ಳುವದು. ಕ್ರಮ ಕ್ರಮದಿಂದ ಹತ್ತರಿದ್ದ ವಸ್ತುಗಳ ಜ್ಞಾನವನ್ನು ನೋಡಿ ಮಾಡಿಕೊಳ್ಳುವದು. ಮುಂದೆ ಅದು ದೊಡ್ಡದಾದಮೇಲೆ ಸ್ವಾನುಭವದಿಂದಲೂ ಪದಾರ್ಥಗಳ ಅಂತರ ಆಕಾರ ಮೊದಲಾದವುಗಳನ್ನು ಗೊತ್ತುಮಾಡಿಕೊಳ್ಳುವದು. ಹಸುಗೂಸುಗಳ ಶ್ರೋತ್ರೇಂದ್ರಿಯಗಳು ಮದಡಾಗಿರುವದರಿಂದ ದೊಡ್ಡ ಸಪ್ಪಳವು ಮಾತ್ರ ಕೆಲಮಟ್ಟಿಗೆ ಕೇಳಬರುತ್ತದೆ. ಆದರೆ ನಾನಾತರದ ನಾದಗಳ ಜ್ಞಾನವು ಅದಕ್ಕೆ ಆಗಲಾರದು. ಕ್ರಮೇಣ ತಾಯಿಯ ಧ್ವನಿಯನ್ನು ಕೇಳಿ ಕೇಳಿ ಅದರ ಗುರ್ತು ಹಿಡಿದು ಬೇರೆ ಜನರ ದನಿಯಿಂದ ಅದನ್ನು ಬೇರ್ಪಡಿಸುವದು. ಕಿವಿಯು ಚುರುಕಾಗಬೇಕಾದರೆ ಮಗುವಿಗೆ ವಿಚಾರಶಕ್ತಿಯು ಉಂಟಾಗಬೇಕು. ಹೀಗಾಗಲಿಕ್ಕೆ ಅದು ತನ್ನ ಸುತ್ತುಮುತ್ತಲಿರುವ ಜನರು ಮಾತಾಡುವದನ್ನೂ ನೋಡಿ ಅದರಂತೆ ಅನುಕರಣಮಾಡಿ ಬಾಯಲ್ಲಿ ಅಸ್ಪಷ್ಟವಾಗಿ ನುಡಿಯಹತ್ತುವದು. ಉಳಿದ ಎರಡು ಇಂದ್ರಿಯಗಳ ವಿಕಾಸವು ಶೈಶವಾವಸ್ಥೆಯಲ್ಲಿ ಆಗುವದಿಲ್ಲವೆಂದರೂ ಸಲ್ಲುವದು.

ಇಂದ್ರಿಯ ಶಿಕ್ಷಣ: — ಇಂದ್ರಿಯಗಳ ಶಿಕ್ಷಣವೆಂದರೆ ಒಂದೊಂದು ಬಗೆಯ ಇಂದ್ರಿಯಕ್ಕೆ (ಇಂದ್ರಿಯದ ಕಾರ್ಯಕ್ಕೆ) ಅವಶ್ಯವಾದ ಉತ್ತೇಜಕಗಳನ್ನು ಒದಗಿಸಿಕೊಟ್ಟು ಆ ಇಂದ್ರಿಯಗಳ ವ್ಯಾಪಾರವು ಸುವ್ಯವಸ್ಥಿತವಾಗಿ ನಡೆಯುವಂತೆ ಮಾಡಿ ಆ ವ್ಯಾಪಾರಗಳ ಮುಖಾಂತರ ಉಂಟಾದ ಇಂದ್ರಿಯ ಜನ್ಯ ಸಂಸ್ಕಾರಗಳು ಒಂದೊಂದು ಬಗೆಯ ಬೋಧೆಯಾಗಿ ಪರಿಣಮಿಸುವಂತೆ ಮಾಡುವದು. ಈ ತರದ ಬೋಧೆಗಳಿಂದ ತಜ್ಜನ್ಯ ಕಲ್ಪನೆಗಳೂ ವಿಚಾರವೂ ತರ್ಕನಿರ್ಣಯ ಮೊದಲಾದ ಮಾನಸಿಕ ಶಕ್ತಿಗಳೂ ಕ್ರಮೇಣ ಹುಟ್ಟುತ್ತ ಹೋಗುವವು.

ಶಿಕ್ಷಣ ಕಾರ್ಯದಲ್ಲಿ ಇಂದ್ರಿಯಗಳ ಮಹತ್ವವು ಹೇಳಕೂಡದಷ್ಟು ಇರುವದು. ಬಾಹ್ಯಸೃಷ್ಟಿಯ ಸಂಬಂಧದಿಂದ ನಮಗಾಗುವ ಜ್ಞಾನವು ಇಂದ್ರಿಯಗಳ ಮುಖಾಂತರವೇ ಆಗುವದು. ಹಾಗು ಉಚ್ಚತರದ ಮಾನಸಿಕ ವ್ಯಾಪಾರಗಳಾದ ಕಲ್ಪನೆ, ಭಾವನೆ, ವಿಚಾರ ಮೊದಲಾದವುಗಳಿಗೆ ಬೇಕಾಗುವ ಕಾರಣ ಸಾಧನಗಳನ್ನು ಇಂದ್ರಿಯಗಳೇ ಒದಗಿಸಿಕೊಡುವವು. ಇಂದ್ರಿಯಗಳಿಂದ ದೊರಕಿಸಿದ ಜ್ಞಾನವು ಅಪೂರ್ಣವಿದ್ದರೆ ಅದನ್ನ

ವಲಂಬಿಸಿದ ಮನೋವ್ಯಾಪಾರಗಳಾದರೂ ಅಪೂರ್ಣವಾಗಿರುವವು. ಬಗೆಬಗೆಯ ತರದ ಕಚ್ಚಾಮಾಲನ್ನು ದೊರಕಿಸಿಕೊಳ್ಳುವ ಉದ್ದೇಶದಿಂದ ಚಿಕ್ಕಬಾಲಕರಿಗೆ ೭ ವರ್ಷಗಳಾಗುವ ವರೆಗೆ ಅವರ ಬುದ್ಧಿಗಿಂತ ಇಂದ್ರಿಯುಗಳೇ ಹೆಚ್ಚು ತೀಕ್ಷ್ಣವಾಗಿರುವವು. ಈ ಕಾರಣದಿಂದಲೇ ಬಾಲಕರ ಶಿಕ್ಷಣ ಕ್ರಮದಲ್ಲಿ ಅವರ ಇಂದ್ರಿಯಗಳ ಶಿಕ್ಷಣಕ್ಕೆ ಪ್ರಾಧಾನ್ಯವನ್ನು ಕೊಡಬೇಕೆಂದು ಹೊಸ ಪದ್ಧತಿಯ ಶಿಕ್ಷಣ ಶಾಸ್ತ್ರ ಮತವಿರುವದು. ಈ ತರದ ಶಿಕ್ಷಣ ಕ್ರಮದಲ್ಲಿ ವಿದ್ಯಾರ್ಥಿಗಳು ಮಾಡತಕ್ಕ ಕೆಲಸವೇ ಹೆಚ್ಚಾಗಿದ್ದು ಶಿಕ್ಷಕನ ಕರ್ತವ್ಯವು ಮೂರು ವಿಧವಾಗಿರುವದು.

(೧) ವಿದ್ಯಾರ್ಥಿಗಳ ಇಂದ್ರಿಯುಗಳ ವಿಕಾಸಕ್ಕೆ ಬೇಕಾಗಿರುವ ವಸ್ತುಗಳನ್ನು ತಕ್ಕ ಕಾಲಕ್ಕೆ ಅವರಿಗೆ ಒದಗಿಸಿಕೊಟ್ಟು ಅವರಲ್ಲಿ ಆಸ್ಥೆಯನ್ನುಂಟುಮಾಡಿ ಅವರು ಆ ವಸ್ತುಗಳನ್ನು ನಿರೀಕ್ಷಿಸುವಂತೆ ಮಾಡಬೇಕು.

(೨) ವಿದ್ಯಾರ್ಥಿಗಳು ಸುಲಭವಾದ ಸಂಗತಿಗಳಿಂದ ಗಡಚಾದ ಸಂಗತಿಗಳನ್ನು ತಿಳಕೊಳ್ಳುವಂತೆ ಕಲಿಸುವ ಕ್ರಮದಲ್ಲಿ ಪದ್ಧತಿ ಇರುವಂತೆ ಮಾಡಬೇಕು. ಹುಡುಗರು ತಪ್ಪಿ ಅಡ್ಡದಾರಿ ಹಿಡಿದಾಗ ಅವರಿಗೆ ತಪ್ಪುಗಳನ್ನು ತೋರಿಸಿ ಅವರನ್ನು ದಾರಿಗೆ ಹಚ್ಚಬೇಕು. ಈ ಸಂಗತಿಗಳನ್ನರಿಯದ ಶಿಕ್ಷಕರು ಬರೇ ಬಾಯಿಮಾತಿನಿಂದಲೇ ವಸ್ತುಗಳ ಜ್ಞಾನವನ್ನು ಮಾಡಿಕೊಟ್ಟು ಅವರು ಶಬ್ದಕ್ಕೆ ಪ್ರತಿ ಶಬ್ದವನ್ನು ಹೇಳಿದರೆ ಜಾಣರಾದರೆಂದು ತಿಳಿದುಕೊಳ್ಳುವ ರೂಢಿಯುಂಟು. ಒಂದೊಂದು ವಸ್ತುವಿಗೆ ಸಂಬಂಧಿಸಿದ ಒಂದೊಂದು ಶಬ್ದವಿರುವದೆನ್ನೋ ನಿಜ. ಆದರೆ ಬಾಲಕರಿಗೆ ಆ ಶಬ್ದಕ್ಕೆ ಸಂಬಂಧಿಸಿರುವ ವಸ್ತುವಿನ ಜ್ಞಾನವಾಗಿರುವದೋ ಇಲ್ಲವೋ ಎಂಬದನ್ನು ಪರೀಕ್ಷಿಸಬೇಕಾದರೆ ಬಾಲಕರ ಮುಂದೆ ಪ್ರತ್ಯಕ್ಷ ವಸ್ತುಗಳನ್ನಿಟ್ಟು ಅವರ ಬಾಯಿಂದ ಸಾಧ್ಯವಿದ್ದಮಟ್ಟಿಗೆ ಆ ವಸ್ತುವಿನ ಹೆಸರನ್ನು ಹೊರಡಿಸಬೇಕು. ಅದು ಅವರಿಗೆ ಗೊತ್ತಿರದಿದ್ದರೆ ಹೇಳಿಕೊಡಬೇಕು. ವಸ್ತುಗಳು ದೊರಕದ ಪಕ್ಷದಲ್ಲಿ ಅವುಗಳ ಚಿತ್ರವನ್ನಾದರೂ ಹುಡುಗರಿಗೆ ತೋರಿಸಬೇಕು. ಹುಡುಗರಲ್ಲಿ ಚಟುವಟಿಕೆಯು ಹೆಚ್ಚಾಗಿರುವದರಿಂದ ಅವರು ಕೆಲಸಮಾಡುತ್ತ ಕಲಿಯಬೇಕೆಂದು ಫ್ರೋಬೆಲ್ಲನು ಬಾಲೋದ್ಯಾನದ ವ್ಯವಸಾಯಗಳನ್ನು ಶಿಕ್ಷಣ ಪದ್ಧತಿಯಲ್ಲಿ ಸೇರಿಸಿರುವನು. ಈ ತರದ ಪದ್ಧತಿಗೆ ನಾವು ವಸ್ತುಪಾಠದ ಪದ್ಧತಿಯೆಂದು ಹೆಸರಿಡಬಹುದು. ಇಂದ್ರಿಯುಗಳ ವಿಕಾಸವನ್ನು ವಸ್ತುಗಳ ಮುಖಾಂತರ ಮಾಡಿಕೊಡುವಾಗ ಆಯಾ ಇಂದ್ರಿಯುಗಳ ಮಹತ್ವವನ್ನು ಲಕ್ಷಿಸಿ ಅವುಗಳ ವಿಕಾಸವಾಗುವಂತೆ ಮಾಡಬೇಕು. ಜ್ಞಾನ ಸಂಪಾದನೆಯಲ್ಲಿ ತ್ವಗಿಂದ್ರಿಯ ಹಾಗು ನೇತ್ರೇಂದ್ರಿಯದ ಮಹತ್ವವು ಹೆಚ್ಚಾಗಿರುವದರಿಂದ ಅವುಗಳ ವಿಕಾಸವು ಆಗುವಂತೆ ಶಿಕ್ಷಣಕ್ರಮವಿರಬೇಕು. ಹುಡುಗರಿಗೆ ಭಾಷಾಜ್ಞಾನವು ಚನ್ನಾಗಿ ಆದಮೇಲೆ ಶ್ರೋತ್ರೇಂದ್ರಿಯದ ಮುಖಾಂತರ ಅದರ

ಜ್ಞಾನವನ್ನು ಬೆಳೆಸಲಿಕ್ಕೆ ಹತ್ತಬೇಕು. ಇನ್ನು ಈ ಇಂದ್ರಿಯಗಳ ವಿಕಾಸಕ್ಕೆ ಸಹಾಯಕವಾದ ವಿಷಯಗಳು ಯಾವವೆಂಬದನ್ನು ವಿಚಾರಿಸುವಾ:—

(೧) **ತ್ವಗಿಂದ್ರಿಯದ ವಿಕಾಸಕ್ಕೆ ಅವಶ್ಯವಾದ ವಿಷಯಗಳು:**— ಚಿತ್ರ ತೆಗೆಯುವದು ಹಾಗು ಲೇಖನ, ಇವಕ್ಕೆ ಆವಶ್ಯವಾದ ಸಂಗತಿಯೆಂದರೆ ಮುಂಗೈ ನರಗಳಿಗೆ ಪ್ರಾಣವುಂಟಾಗಿ ಹಸ್ತವನ್ನು ಎಲ್ಲ ಕಡೆಗೆ ತಿರುಗುವಂತೆ ಮಾಡುವದು. ಈ ತರದ ವ್ಯಾಯಾಮವು ಆಗಬೇಕಾದರೆ ವಿದ್ಯಾರ್ಥಿಗಳು ಹವೆಯಲ್ಲಿ ಅಕ್ಷರಗಳನ್ನು ಬರೆಯುವ ಕ್ರಮದಿಂದ ಕೈ ತಿರುಗುವಂತೆ ಮಾಡಬೇಕು. ಅಂದರೆ ಕೈ ಮೇಲೆ ಸ್ವಾಮಿತ್ವವು ಬರುವದು. ಹಾಗು ಅವುಗಳ ಬಿಂಬವು ಮಿದುಳಿನಲ್ಲಿ ಉಂಟಾಗುವದು. ಈ ತರದ ವ್ಯವಸಾಯಕ್ಕೆ ಮಣ್ಣಿನಿಂದ ಆಟಿಕೆ ಮಾಡೋಣ, ಕಾಗದ ಕತ್ತರಿಸೋಣ, ಚಾಪೆ ಹೆಣೆಯೋಣ ಮುಂತಾದವು ಸಹಾಯಕಾರಿಯಾಗಿರುವವು. ಆದರೆ ಹಸ್ತ ಶಿಕ್ಷಣದಂತೆ ಕಲಿಸುವ ಸ್ಲಾಯಿಡ್, ಕಾಗದಮಡಿಚೋಣ, ಕಾಗದ ಕತ್ತರಿಸೋಣ, ಕ್ಲೇಮಾಡ್ಲಿಂಗ ಮೊದಲಾದ ವ್ಯವಸಾಯಗಳಲ್ಲಿ ಹುಡುಗರು ಅಳತೆಗೆ ಸರಿಯಾಗಿ ಕೆಲಸ ಮಾಡಬೇಕಾಗುವದರಿಂದ ಬಹು ಬೇಗ ಬೇಸರಿಯುವರು. ಆದ್ದರಿಂದ ಚಿಕ್ಕ ಬಾಲಕರಿಗೆ ಇಂಥವುಗಳನ್ನು ಕಲಿಸಬಾರದು. ವಸ್ತುಪಾಠದ ಸಹಾಯದಿಂದ ಪದಾರ್ಥಗಳಲ್ಲಿರುವ ಮಿದುವು, ಬಿರುಸು, ನುಣುಪು, ಹುರಬರಕು, ಭಾರ, ಹಗುರು ಮುಂತಾದವುಗಳನ್ನು ಕಲಿಸುವದು.

ನೇತ್ರೇಂದ್ರಿಯ:— ಬಣ್ಣಗಳು ವಿಶೇಷವಾಗಿ ಮೂಲ ಬಣ್ಣಗಳು (ಕೆಂಪು ಹಳದಿ, ನೀಲಿ) ಬಹು ಮೋಹಕವಾಗಿರುವದರಿಂದ ಹುಡುಗರ ಮನಸನ್ನು ಎಳಕೊಳ್ಳುವವು. ಆದ್ದರಿಂದ ಈ ಬಣ್ಣಗಳ ಚಂಡು ಗುಂಡು ಮೊದಲಾದವುಗಳನ್ನು ತೋರಿಸಿ ಅವುಗಳ ಜ್ಞಾನಮಾಡಿಕೊಡಬೇಕು. ಕ್ರಮೇಣ ಮಿಶ್ರ ಬಣ್ಣಗಳನ್ನು ಕಲಿಸಬೇಕು. ಆದರೆ ಮಿಶ್ರ ಬಣ್ಣಗಳಲ್ಲಿ ಸಾವಿರಾರು ತರಹಗಳಾಗುವವೆಂಬದನ್ನು ಮಾತ್ರ ಮರೆಯುಕೂಡದು.

ಪದಾರ್ಥಗಳರೂಪ ಆಕಾರ:— ಇವನ್ನು ಕಲಿಸಲಿಕ್ಕೆ ಬಾಲೋದ್ಯಾನದ ವ್ಯವಸಾಯ, ಚಿತ್ರಕಲೆ, ಅಕ್ಷರ ಬರೆಯೋಣ, ಬರೆದ ಅಕ್ಷರಗಳನ್ನು ಓದೋಣ; ವಸುಪಾಠಗಳು ಹಾಗು ನಕಾಶ ಮಾಡೆಲುಗಳ ಸಹಾಯದಿಂದ ಕಲಿಸುವ ಭೂಗೋಲ.

ಕಣ್ಣಿನಿಂದ ಅಂತರಜ್ಞಾನ ಮಾಡಿಕೊಳ್ಳುವದು:— ಇದಕ್ಕಾಗಿ ವಸ್ತುಗಳನ್ನು ಬೇರೆ ಬೇರೆ ಅಂತರದಮೇಲೆ ಇಟ್ಟು ಆ ವಸ್ತುಗಳು ತಮ್ಮಿಂದ ಎಷ್ಟು ದೂರವಿರುವವೆಂಬದನ್ನು ಅವರು ಅಳತೆಯ ಕಟ್ಟಿಗೆಯಿಂದ ಅಳೆದು ನೋಡಬೇಕು. ಆ ನಂತರ ಬರೇ ಕಣ್ಣಿನಿಂದ ಅಳೆದು ಪದಾರ್ಥಗಳ ಅಂತರವನ್ನು ಅಳೆಯಲಿಕ್ಕೆ ಹಚ್ಚಬೇಕು.

ಶ್ರೋತ್ರೇಂದ್ರಿಯ:—ಹುಡುಗರಿಗೆ ಓದಿದ್ದರ ಅರ್ಥವಾಗದಿದ್ದದರಿಂದ ಅವರು ಬೇಕಾದ ಹಾಗೆ ಓದುವರು. ಆದ್ದರಿಂದ ಶಿಕ್ಷಕರು ಅರ್ಥವಾಗುವಂತೆ ತಾವು ಓದಿ

ತೋರಿಸಿ, ಓದುವಾಗ ಯಾವ ಶಬ್ದವನ್ನು ಗಟ್ಟಿಸಿ ನುಡಿಯಬೇಕು, ಎಲ್ಲಿ ನಿಲ್ಲಬೇಕು, ಮುಂತಾದ್ದನ್ನು ಹೇಳಿಕೊಡಬೇಕು. ಕಿವಿಗೆ ಯೋಗ್ಯವಾದ ಶಿಕ್ಷಣವು ಸಂಗೀತದಿಂದ ದೊರಕುವದು. ಆದರೆ ಎಲ್ಲ ಹುಡುಗರಿಗೆ ಈ ತರದ ಜ್ಞಾನವಾಗುವದು ದುಃಸ್ಸಾಧ್ಯವು. ಕೆಲವರಿಗೆ ಈ ವಿಷಯದ ಬಗ್ಗೆ ನೈಸರ್ಗಿಕ ಒಲವೇ ಇರುವದಿಲ್ಲ.

ಇಂದ್ರಿಯ ಮುಖಾಂತರ ಜ್ಞಾನಮಾಡಿಕೊಡುವಾಗ ಒಂದೇ ಇಂದ್ರಿಯಕ್ಕೆ ವಿಶೇಷ ಜ್ಞಾನವಾಗದಂತೆ ಮಾಡಬೇಕು. ಯಾಕಂದರೆ ಶಾಲೆಯಲ್ಲಿ ಬಾಲಕರಿಗೆ ಶಿಕ್ಷಣ ಕೊಡುವದರ ಉದ್ದೇಶವು ಅವರಿಗೆ ಅಂಥ ಇಂಥ ವಿಷಯವು ಅಷ್ಟು ಇಷ್ಟು ಬರಬೇಕೆಂಬದಿರದೆ ಅವರು ಮುಂದೆ ಕಲಿಯುಲಿಕ್ಕೆ ಬೇಕಾಗಿರುವ ಎಲ್ಲ ಇಂದ್ರಿಯಗಳ ವಿಕಾಸವು ಆಗುವಂತೆ ಮಾಡುವದೇ. ಈ ಕಾರಣದಿಂದ ಅವರು ಒಂದು ಇಂದ್ರಿಯಕ್ಕೆ ಸಂಬಂಧಿಸಿದ ವಿಷಯುವನ್ನು ಕಲಿಸುತ್ತಿರುವಾಗ ಉಳಿದ ಇಂದ್ರಿಯಗಳ ಸಹಾಯವನ್ನು ಮಾಡಿಕೊಳ್ಳುವಂತೆ ವ್ಯವಸ್ಥೆ ಇರಬೇಕು. ಇಂದ್ರಿಯಗಳ ಶಿಕ್ಷಣವು ನಿಜವಾದ ಶಿಕ್ಷಣವಿರದೆ ಹುಡುಗರು ದೊಡ್ಡವರಾದಬಳಿಕ ದೊರಕಿಸಿಕ್ಕೊಳ್ಳುವ ಶಿಕ್ಷಣದ ಸಾಧನವಾಗಿದೆ. ಅದರಿಂದ ಪ್ರಬುದ್ಧರಾದವರಿಗೆ ವಸ್ತು ಪಾಠಗಳನ್ನು ಕಲಿಸಹೋದರೆ ಬೇಸರಬರುವದು.

ಅವಧಾನ:—ಪಂಚೇಂದ್ರಿಯಗಳ ಮುಖಾಂತರ ಮನೋವಿಕಾಸವಾಗಹತ್ತಿದ ಮೇಲೆ ಮನಸಿಗೆ ಒಂದೊಂದು ತರದ ಶಕ್ತಿಯು ಬರಹತ್ತಿ ಆ ಶಕ್ತಿಗಳ ವಿಕಾಸವು ಕ್ರಮದಿಂದ ಆಗ ಹತ್ತುವದು. ಆ ಕ್ರಮವು ಹ್ಯಾಗಂದರೆ,—

ಆರಂಭದಲ್ಲಿ ಬಾಹ್ಯಸೃಷ್ಟಿಯಲ್ಲಿರುವ ವಸ್ತುಗಳ ಸಹಾಯದಿಂದ ಇಂದ್ರಿಯ ಜನ್ಯ ಜ್ಞಾನವು ಮಿದುಳಿನ ಕೋಶಗಳಿಗೆ ಹೋಗಿ ಮುಟ್ಟಲು ಆ ಕೋಶಗಳಲ್ಲಿ ಒಂದು ತರದ ವಿಕೃತಿ (ವಿಕಾರ) ಉಂಟಾಗಿ ಮಿದುಳಿಗೆ ಆಯಾ ವಸ್ತುಗಳ ಸಂಬಂಧದ 'ಭೋಧೆ' ಎಂಬ ವಿಶೇಷ ಜ್ಞಾನವಾಗುವದು. ಆ ಜ್ಞಾನವು ವಸ್ತುವಿನ ಬಿಂಬದಂತೆ ಧಾರಣಾ ಶಕ್ತಿಯ ಸಹಾಯದಿಂದ ಸ್ಮರಣದಲ್ಲಿ ಉಳಿಯಲು ಮಿದುಳಿಗೆ ಸ್ಮರಣ ಶಕ್ತಿಎಂಬ ಹೊಸ ಶಕ್ತಿಯುಂಟಾಗಿ ಅದರ ಸ್ಮರಣೆಯು ಬೇಕಾದಾಗ ಸಹಜವಾಗಿ ಇಲ್ಲವೆ ಪ್ರಯತ್ನಪೂರ್ವಕವಾಗಿ ನಮಗೆ ಉಂಟಾಗುವದು. ಸ್ಮರಣ ಶಕ್ತಿಯಿಂದ ಕಲ್ಪನಾಶಕ್ತಿಯು ಹುಟ್ಟುವದು. ವಯೋಮಾನವು ಬೆಳೆದಂತೆ ಹುಡುಗರ ಅನುಭವವೂ ಜ್ಞಾನಸಂಚಯವೂ ಬೆಳೆಯುತ್ತ ಹೋಗುವದರಿಂದ ಉಚ್ಚತರದ ಬೌದ್ಧಿಕ ವ್ಯಾಪಾರಗಳಾದ ವಿಚಾರ, ಅನುಮಾನ, ನಿರ್ಣಯ ಮೊದಲಾದವುಗಳು ತಲೆದೋರಹತ್ತುವವು. ಇಂಥ ಬೌದ್ಧಿಕ ವ್ಯಾಪಾರಗಳಿಗೆ ಅವಶ್ಯವಾದ ಮಾನಸಿಕ ಸ್ಥಿತಿಗೆ ಅವಧಾನವು ಆಧಾರಭೂತವಾಗಿರುವದರಿಂದ ಅವಧಾನವೆಂದರೇನೆಂಬದನ್ನು ವಿಚಾರಿಸುವಾ:—

ನಮ್ಮ ಎಲ್ಲ ಬಗೆಯ ಮನೋ ವ್ಯಾಪಾರಗಳು. (೧) ಬುದ್ಧಿ. (೨) ಪ್ರವರ್ತಕ ಎರಡು ವರ್ಗಗಳಾಗಿ ವಿಂಗಡಿಸಲ್ಪಡುವವು. ಅವಧಾನವೆಂಬದು ಪ್ರವರ್ತಕ ಮನೋ ್ಯಾಪಾರಗಳಲ್ಲಿ ಬರುವದು, ಕೆಲವು ಶಾಸ್ತ್ರಜ್ಞರು ಅವಧಾನವು ಮನಸಿನ ಒಂದು ಕಾರದ ಸ್ಥಿತಿಯೆಂದೂ, ಬೇರೆ ಕೆಲವರು ಅವಧಾನವು ಮನಸಿನ ಒಂದು ಶಕ್ತಿಯೆಂದೂ ಳುವರು. ಅದು ಹೇಗೇ ಇರಲಿ, ಅವಧಾನದಿಂದ ಮನಸಿಗೆ ಒಂದುತರದ ಏಕಾಗ್ರತೆ ಉಂಟಾಗುವದೆಂಬದಕ್ಕೆ ಸಂದೇಹವಿಲ್ಲ. ನಮ್ಮ ಚೈತನ್ಯಸ್ಥಿತಿಯು ಯಾವಾಗಲೂ ಗ್ರತಾವಸ್ಥೆಯಲ್ಲಿ ಇರುತ್ತದೆಂದು ಹೇಳಲಿಕ್ಕೆ ಬರುವದಿಲ್ಲ. ಎಷ್ಟೋ ಸಾರೆ ನಾವು ೋಡುವ ವಸ್ತುಗಳ, ಕೇಳುವ ಸಪ್ಪಳಗಳ, ಮುಟ್ಟಿನೋಡುವ ಪದಾರ್ಥಗಳ ಅರಿವು ಸಿಗೆ ಇರುವದಿಲ್ಲ. ಹೀಗಾಗುವ ಕಾರಣವೇನೆಂದರೆ, ಇಂದ್ರಿಯಗಳ ಮುಖಾಂತರ ಂಟಾದ ಜ್ಞಾನವು ವಿಶಾಲವಾದ ಚೈತನ್ಯ ಕ್ಷೇತ್ರದಲ್ಲಿ ಹರವಿಹೋಗಲು ಅದರ ತೀವ್ರ ತು ಗೋಚರವಾಗದಷ್ಟು ಆಗುವದು. ಆದರೆ ಆ ಚೈತನ್ಯ ಕ್ಷೇತ್ರವನ್ನು ಪ್ರಯತ್ನ ರ್ವಕವಾಗಿ ಮರ್ಯಾದಿತವಾಗುವಂತೆ ಮಾಡಹತ್ತಲು ಅಂದರೆ ಆ ಜ್ಞಾನವನ್ನು ತನ್ನ ತಟದಿಂದ ಚೈತನ್ಯ ಕೇಂದ್ರಕ್ಕೆ ಬರುವಂತೆ ಮಾಡಿದರೆ ನಿಜವಾದ ಅರಿವು ಉಂಟಾ ವದು. ಇದರಿಂದ ಸೂರ್ಯಕಾಂತ ಕಲ್ಲಿನಿಂದ ಪ್ರಕಾಶ ಕಿರಣಗಳನ್ನು ಒಟ್ಟುಗೂಡಿಸಿ ಕಿರಣಗಳ ಪರಿಣಾಮವು ಒಂದು ಬಿಂದುವಿನ ಮೇಲೆ ಉಂಟಾಗುವ ಹಾಗೆ ಮಾಡಲಿಕ್ಕೆ ಸುವಂತೆ ಚೈತನ್ಯವು ಕೇಂದ್ರರತವಾಗುವಂತೆ ಮಾಡಲಿಕ್ಕೆ ಬರುವದು. ಇದಕ್ಕೆ ನಾವು ಕಾಗ್ರತೆಯೆನ್ನಬಹುದು, ಅಥವಾ ಎಲ್ಲಕಡೆಗೆ ಹರಿಯುತ್ತಿದ್ದ ಮನಸಿನ ಚಂಚಲತ್ವವನ್ನು ೋಧಿಸಿ ಮನಸ್ಸು ಯಾವದೊಂದು ವಿವಕ್ಷಿತ ವಸ್ತುವಿನ ವಿಷಯವಾಗಿ ಏಕಾಗ್ರತೆ ಳಿಯುವಂತೆ ಮಾಡುವದೇ ಅವಧಾನವು. ಅವಧಾನವಿಲ್ಲದೆ ತಿಳಿಯಾದ ತಿಳುವಳಿಕೆ, ಟವಾದ ಭಾವನೆ, ಮನಸ್ಸುಗೊಟ್ಟು ಕೆಲಸಮಾಡುವ ಇಚ್ಛಾಶಕ್ತಿ ಮೊದಲಾದವು ಟ್ಟಲಾರವು. ಅವಧಾನವೇ ಜ್ಞಾನದೀಪನೆಂದು ಹೇಳಬಹುದು. ಕತ್ತಲೆಯಲ್ಲಿದ್ದ ಸ್ತುಗಳು ದೀಪದ ಸಹಾಯವಿಲ್ಲದಿದ್ದರೆ ನಮಗೆ ಯಾವ ತರದ ಜ್ಞಾನವಾದರೂ ಗಲಾರದು. ಇದರಂತೆ ದೀಪವು ಮಿಣುಕು ಮಿಣುಕಾಗಿದ್ದರೆ ನಮಗೆ ಪದಾರ್ಥ ಳು ಅಸ್ಪಷ್ಟವಾಗಿ ಕಾಣುವಂತೆ ನಾವು ಅಪೂರ್ಣ ಲಕ್ಷದಿಂದ ನೋಡಿದ ವಸ್ತು ಜ್ಞಾನವು ಮಸ ಮಸಕಾಗಿ ಆಗುವದು.

ಮೇಲಿನ ವಿವೇಚನದಿಂದ ಅವಧಾನದ ಕಾರ್ಯವು ಮೂರುವಿಧವಾಗಿದೆ.

(೧) ಮನಸ್ಸು ಚೈತನ್ಯ ಕ್ಷೇತ್ರವನ್ನು ಮರ್ಯಾದಿತವಾಗುವಂತೆಮಾಡಿ ತನ್ನ ಲ್ಲ ಶಕ್ತಿಯು ಲಕ್ಷಿಸತಕ್ಕ ವಸ್ತುವಿನಮೇಲೆ ಒಟ್ಟುಗೂಡುವಂತೆ ಮಾಡುವದು.

(೨) ಆ ವಸ್ತುವಿನಮೇಲೆ ಏಕಾಗ್ರವಾದ ಶಕ್ತಿಯನ್ನು ಇತರ ವಸ್ತುಗಳ ಕಡೆಗೆ ರಿಯುವಂತೆ ವಿರೋಧಿಸುವದು.

(೩) ಆ ತರದ ಸ್ಥಿತಿಯು ಕೆಲವು ಅವಧಿಯವರೆಗೆ ಉಳಿಯುವಂತೆ ಮಾಡು; ಹೀಗಾಗಬೇಕಾದರೆ ಯಾವದೊಂದು ಆರಿಸಿಕೊಂಡ ವಸ್ತುವಿನಮೇಲೆ ಲಕ್ಷ್ಯ ಟ್ಟಾಗ ಇತರ ವಸ್ತುಗಳ ಸಂಬಂಧದ ಲಕ್ಷ್ಯವು ಪೂರ್ಣ ಅಭಾವವುಳ್ಳದ್ದಾಗಬೇ ಅವಧಾನ ಶಕ್ತಿಯನ್ನು ಪ್ರಯತ್ನಪೂರ್ವಕವಾಗಿ ಬೆಳೆಸಿದರೆ ಒಂದೇಕಾಲಕ್ಕೆ ಅ ವಸ್ತುಗಳ ಕಡೆಗೆ ಲಕ್ಷ್ಯಕೊಡಲಿಕ್ಕಾಗುವದು. ಅಷ್ಟಾವಧಾನಿ ಶತಾವಧಾನಿಗಳಲ್ಲಿ ಕ ಬರುವ ವಿಲಕ್ಷಣ ಶಕ್ತಿಯು ಅವರ ಪ್ರಯತ್ನದಫಲವೇ ಆಗಿರುವದು.

ಅವಧಾನದಲ್ಲಿ ಐಚ್ಛಿಕ ಅವಧಾನ, ಅನೈಚ್ಛಿಕ ಅವಧಾನಗಳೆಂಬ ಎರಡು ಗಳುಂಟು. ಐಚ್ಛಿಕ ಅವಧಾನದಲ್ಲಿ ನಾವು ಇಚ್ಛಾಶಕ್ತಿಯನ್ನು ಮನಸಿನಮೇಲೆ ಯೋಗಿಸಿ ಬಲಾತ್ಕಾರದಿಂದ ಅದನ್ನು ಯಾವದೊಂದು ವಿಷಯದಕಡೆಗೆ ಹಚ್ಚುತ್ತೆ ನಮಗೆ ಬೇಸರಬರುವಂಥ ಒಂದು ವಿಷಯವು ಪರೀಕ್ಷೆಯ ಸಲುವಾಗಿ ನೇಮಿಸಲ್ಪಟ್ಟ ನಾವು ಬಲಾತ್ಕಾರದಿಂದ ನಮ್ಮ ಲಕ್ಷ್ಯವನ್ನು ಕೆಲವೊಂದು ಉದ್ದೇಶದಿಂದ ಆ ವಿಷ ಕಡೆಗೆ ಹಚ್ಚುತ್ತೇವೆ. ಅನೈಚ್ಛಿಕ ಅವಧಾನದಲ್ಲಿ ಮನಸಿನಮೇಲೆ ಇಚ್ಛೆಯೆಂಬ ರ್ತನ ಶಕ್ತಿಯ ಬಲಾತ್ಕಾರವು ಬೇಕಾಗಿಲ್ಲ. ನಾವು ಓದುವದರಲ್ಲಿ ನಿಮಗ್ನರಾಗಿ ಒಮ್ಮಿಂದೊಮ್ಮೆ ಓಣಿಯಲ್ಲಿ ತಾಸೆಯ ಸಪ್ಪಳವಾದರೆ ನಮ್ಮ ಲಕ್ಷವು ಸಪ್ಪಳದ ತನ್ನಷ್ಟಕ್ಕೆ ತಾನೇ ಹೋಗುವದು. ಅಂದರೆ ಅನೈಚ್ಛಿಕ ಅವಧಾನವು ಬಾಹ್ಯ ಜಕದ ತೀವ್ರತೆಗೆ ಕೇವಲ ಆಧೀನವಾಗಿರುವದು. ಅನೈಚ್ಛಿಕ ಅವಧಾನಕ್ಕೆ ಅವಶ್ಯ ಸಂಗತಿಗಳು:—

(೧) ಅನೈಚ್ಛಿಕ ಅವಧಾನದ ತೀವ್ರತೆಯು ಬಾಹ್ಯ ಉತ್ತೇಜಕದ ತೀವ್ರತೆ ಪರಮಾಣುವನ್ನು ಅವಲಂಬಿಸಿರುವದು. ಬಾಲಕರ ಲಕ್ಷವು ಕೋಲ್ಮಿಂಚು ಇಲ್ಲವೆ ಗಿನ ಕಡೆಗೆ ಒಮ್ಮೆಲೆ ಹೋಗುವದು. ಆದರೆ ಮಂದವಾದ ಪ್ರಕಾಶ-ಧ್ವನಿಗಳು ಲಕ್ಷಕ್ಕೆ ಬರುವದಿಲ್ಲ.

(೨) ಉತ್ತೇಜಕದಲ್ಲಿ ಅದಲು ಬದಲಾಗುವದು. ಕತ್ತಲೆಯ ಕೋಣೆ ಅಳುತ್ತಿದ್ದ ಕೂಸು ಬೆಳಕಿಗೆ ತಂದಕೂಡಲೆ ಸುಮ್ಮನಾಗುವದು. ಮೆಲ್ಲನೆ ಡುವ ಶಿಕ್ಷಕನು ಒಮ್ಮೆಲೆ ಗಟ್ಟಿ ದನಿಯಿಂದ ಒದರ ಹತ್ತಿದರೆ ಹುಡುಗರು ಮಾಡುವದನ್ನು ಬಿಟ್ಟು ಅವನ ಕಡೆಗೆ ನೋಡಹತ್ತುವರು. ಆದರೆ ಯಾವಾ ಗಟ್ಟಿ ದನಿಯಿಂದ ಒದರಿ ಮಾತಾಡುವ ಶಿಕ್ಷಕನು ಎಷ್ಟು ಒದರಿ ಮಾತಾಡಿದರೂ ನಿ ವಾಗುವದು.

ಪುಸ್ತಕಪರಿಚಯ

ಹಳ್ಳಿಯ ಹಾಡುಗಳು

ಸಂಗ್ರಾಹಕರು:— ವಿ. ವೆಂ. ತೊರ್ಕೆ, ಉಪಶಿಕ್ಷಕರು ಕನ್ನಡಸಾಲೆ ತೊರ್ಕೆ
ಪುಟ–೩೮ ಪದ್ಯಗಳು—೧೫೦.

ಹಳ್ಳಿಯ ಹೆಣ್ಣುಮಕ್ಕಳು ತಮ್ಮ ಬಾಳುವೆಯಲ್ಲಿನ ಆಕಾಂಕ್ಷೆಗಳು, ಸುಖ ಖಗಳು, ಮನೆಗೆಲಸಗಳು, ವ್ಯವಹಾರದ ಅನುಭವಗಳು, ಅತ್ತೆ ಅತ್ತಿಗೆ ಭಾವ ೃದುನ ಮೊದಲಾದವರ ಸಂಬಂಧಗಳು ಮೊದಲಾದವನ್ನು ಕುರಿತು ತಮ್ಮ ಹಜ ಭಾಷೆಯಲ್ಲಿ ಹಾಡಿದ ಹಾಡುಗಳು-ಪದ್ಯಗಳು—ಈ ಚಿಕ್ಕ ಪುಸ್ತಕದಲ್ಲಿ ಗ್ರಹಿಸಲ್ಪಟ್ಟಿವೆ. ಈ ಹಾಡುಗಳಲ್ಲಿ ಒಡಮೂಡಿದ ಹೆಣ್ಣುಮಕ್ಕಳ ಆಶೆಗಳು, ಕ್ಕಳ ವಿಷಯವಾದ ವಾತ್ಸಲ್ಯ, ಬಳಗದವರಲ್ಲಿರುವ ಮಮತೆ ಮೊದಲಾದ ವಿಚಾರ ಳು ಒಳ್ಳೆಯವೂ ಮೇಲು ತರಗತಿಯವೂ ಆಗಿವೆ. ಉದಾ:—

ಸಿರಿ ಬಂದಕಾಲಕ್ಕೆ ತಲೆವಾಗಿ ನಡೆಯಮ್ಮ।
ಮನೆಗೆ ಬಂದವರ ಕೂಡ್ರುಹೇಳು ಮಕ್ಕಳ।
ಒಡನೆ ಬಂದರ್ಗೆ ಊಟಹಾಕು ॥ ೪೨ ॥
ಕೊಟ್ಟು ಕುದಿಯುಬೇಡ ಮಾಡಿ ಹಂಗಿಸಬೇಡ।
ಇಷ್ಟುಂಡರೆಂದ್ಮು ಅನಬೇಡ ಮೂರು ಮಾತು।
ಮುಟ್ಟುವವು ಶಿವನ ಬಳಿಯಲ್ಲಿ ॥ ೭೫ ॥

ಈ ಸಂಗ್ರಹದ ಹಾಡುಗಳ ಹಾಡುಗಾರ್ತಿಯರು ಹಲವರಾಗಿರುವುದರಿಂದ ಲವು ವಿಚಾರಗಳು ಸಾಮಾನ್ಯವಾಗಿಯೂ ಕೀಳಾಗಿಯೂ ಇರುವುದು ಸಹಜ. ಉದಾ:—

ಠಾಕು ಠೀಕಿನ ಕಟ್ಟು ಅದಕೆ ಚಿನ್ನದ ಕಟ್ಟು।
ಸಾಕೊ ಅಣ್ಣಯ್ಯ ದೌಲತ್ತು ನಿನ್ನ ಸೂಳೆ।
ಬೇಕಾದರೆ ಮನೆಗೆ ಬರುವಳು ॥ ೪೭ ॥
ಅತ್ತೆಯು ಸಾಯಲಿ ಹತ್ತೆಮ್ಮೆ ಕರೆಯಲಿ।
ಹಿತ್ತಲದ ಜೋಳ ಬೆಳೆಯಲಿ ನಮ್ಮನೆಯ।
ಅತ್ತಿಗೆಯ ಕಣ್ಣು ಒಡೆಯಲಿ ॥ ೪೮ ॥

ಸಂಗ್ರಾಹಕರಾದ ಮಿ. ತೊರ್ಕೆಯವರು— "ನನ್ನ ಹಳ್ಳಿಯ ಅಕ್ಕತಂಗಿ ಯರು ಹಾಡುವ ಹಾಡುಗಳಲ್ಲಿರುವ ಕೆಲವು ತೊಡಕಿನ ನುಡಿಗಳನ್ನು ಬದಿಗಿರಿಸಿ

ಕೈಯಿಂದ ನಾಲ್ಕು ನುಡಿಗಳನ್ನು ಬದಲಾಗಿರಿಸಿ ಈ ಹೊತ್ತಿಗೆಯಲ್ಲಿರುವ ರ
ತಂದು ಕನ್ನಡಮ್ಮಗೆ ಅರ್ಪಿಸಿದ್ದೇನೆ" ಎಂದು ಈ ಹಾಡುಗಳನ್ನು ಪರಿಷ್ಕ
ಕೆಲಸದಲ್ಲಿ ತಾವು ಪಟ್ಟ ಶ್ರಮವನ್ನು ಮುನ್ನುಡಿಯಲ್ಲಿ ಸೂಚಿಸಿದ್ದಾರೆ.
ಪರಿಷ್ಕರಣ ಕಾರ್ಯವು ಕಷ್ಟವಾದದ್ದೇನೋ ಸರಿಯೆ. ಆದರೂ ಈ ಹಾ
ಭಾಷೆ ಕೆಲವೆಡೆ ಪ್ರಾದೇಶಿಕವಾಗಿರುವುದರಿಂದ ಅರ್ಥವಾಗುವದಕ್ಕೆ ಗಡಚ
ಒಟ್ಟನಲ್ಲಿ ಈ ಸಂಗ್ರಹವು ಒಳ್ಳೆಯದಾಗಿದ್ದು ಜನಪದಸಾಹಿತ್ಯದ ಅಭಿಮಾನಿ
ಆದರಣೀಯವಾಗಿದೆ.

ಇಂತಹ ಹಾಡುಗಳ ದೊಡ್ಡ ಸಂಗ್ರಹವನ್ನು ಪ್ರಕಟಿಸುವ ವಿಚಾರ
ಸಂಗ್ರಾಹಕರು ಮುನ್ನುಡಿಯಲ್ಲಿ ಸೂಚಿಸಿರುವದು ಶ್ಲಾಘ್ಯವಾದುದೇ ಸರಿ.
ಸಾಧ್ಯವಾದರೆ ವಿಷಯ ವಿಭಾಗದೊಡನೆ ಈ ಹಾಡುಗಳನ್ನು ಕ್ರಮಗೊಳಿ
ಒಳ್ಳೆಯದಾಗುವದೆಂದು ಹಾರೈಸುತ್ತೇವೆ.

ಟ್ರೇ. ಕಾ.
ತಾ|| ೨೦-೧೧-೩೩ } ಪೂಜಾರ

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು.

ಈ ಪರೀಕ್ಷೆಯು ೧೯೩೪ ನೇ ಇಸ್ವಿಯ ಮಾರ್ಚ ತಿಂಗಳ ೭ ನೇ ತಾರೀಖಿನ (ಬುಧವಾರ) ದಿವಸ ಧಾರವಾಡ, ಹುಬ್ಬಳ್ಳಿ, ಗದಗ, ಬೆಳಗಾವ, ವಿಜಾಪೂರ, ಕಾರವಾರ, ಕೊಲ್ಹಾಪುರ ಸೆಂಟರುಗಳಲ್ಲಿ ಪ್ರಾರಂಭವಾಗಿ ತದುತ್ತರದ ದಿವಸಗಳಲ್ಲಿ ನಡೆಯುವದು. ಉಮೇದವಾರರು ತಮ್ಮ ಅರ್ಜಿಗಳನ್ನು ೩ ರೂ. ಫೀಯೊಡನೆ ಆಯಾ ಡಿಸ್ಟ್ರಿಕ್ಟ ಚೇಅರಮನ್ನರ ಕಡೆಗೆ ಅವರಲ್ಲಿ ಬೆಲೆಯಿಲ್ಲದೆ ಸಿಗುವ ಛಾಪೀ ಅರ್ಜಿ ಫಾರ್ಮುಗಳಲ್ಲಿ ತುಂಬಿ ೧ ನೆಯ ಫೆಬ್ರುವರಿ ೧೯೩೪ ಈ ದಿವಸದ ಒಳಗಾಗಿ ಮುಟ್ಟುವಂತೆ ಕಳಿಸಿ ಕೊಡಬೇಕು. ಸದರ ಉರ್ದು ಪರೀಕ್ಷೆಯು ಅದೇ ವೇಳೆಯಲ್ಲಿ ಮೇಲೆ ಹೇಳಿದ ಸೆಂಟರುಗಳಲ್ಲಿ ನಡೆಯುವದು.

ಹುಬ್ಬಳ್ಳಿ ಸೆಂಟರಿಗೆ ಪರೀಕ್ಷೆಗೆ ದಾಖಲಾಗುವವರು ತಮ್ಮ ಅರ್ಜಿ ಫೀಗಳನ್ನು ಹೆಡ್‌ಮಾಸ್ತರ ಆಂಗ್ಲೋ ಉರ್ದು ಹಾಯಸ್ಕೂಲ ಇವರ ಕಡೆಗೆ ಕಳಿಸಬೇಕು. ಕೊಲ್ಹಾಪೂರ ಸೆಂಟರಿನವರು ಆ ಭಾಗದ ಚೇಅರಮನ್ನರಿಗೆ (ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ಕೊಲ್ಹಾಪೂರ) ತಮ್ಮ ಅರ್ಜಿ, ಫೀಗಳನ್ನು ಕಳಿಸಿ ಕೊಡಬೇಕು.

೧ ನೇ ಫೇಬ್ರುವರಿ ೧೯೩೪ ಈ ಅವಧಿ ಮೀರಿಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ.

ಎಜ್ಯುಕೇಶನಲ್ ಇನಸ್ಪೆಕ್ಟರರ
ಧಾರವಾಡ.
೪-೫-೧೯೩೩

ವ್ಹಿ. ಡಿ. ಘಾಟೆ.
ಎ. ಇ. ದಕ್ಷಿಣಭಾಗ

ಬರೆದು ಬಂದ ಪತ್ರದ ಸಾರಾಂಶ

ಅಲದಗೇರಿ ಶಾಲಾ ಕೋಡತಾಲೂಕ-ಇಲ್ಲಿಯ ಸ್ಕೂಲಪಂಚರು ಹಾಗು ಕೆಲವರು ಮೆಂಬರರು ೧೯-೧೨-೧೯೩೩ನೇ ದಿವಸ ವ್ಹಿಜಿಟ್ ಮಾಡಿದರು. ಶಾಲೆಯ ನೆಲವು ಮಳೆಯಿಂದ ಹಸಿಯಾಗಿತ್ತು. ಆಗಲೇ ಇವರು ೪-೪॥ ರೂ॰ ಖರ್ಚುಮಾಡಿ ಹುಡುಗರಿಗೆ ಶೀತವಾಗದಂತೆ ಬತ್ತದಹುಲ್ಲು ಹರವಿ ಅದರಮೇಲೆ ಚಾಪೇ ಹಾಕಿಸಿ ಕೊಡಲಿಕ್ಕೆ ವ್ಯವಸ್ಥೆ ಮಾಡಿಸಿಕೊಟ್ಟರು. ೩-೪ ತಿಂಗಳಗಳ ಕೆಳಗೆ ೧೦ ರೂಪಾಯಿಯ ಜಾಂಗಟೆ ಕೊಟ್ಟಿದ್ದರು. ಮುಂದೆ ಹಾರ್ಮೋನಿಯಂ ಪೆಟ್ಟಿಗೆಯನ್ನು ಕೊಡುವೆವೆಂದು ವಚನ ಕೊಟ್ಟಿದ್ದಾರೆ. ಇದು ಇವರಿಗೆ ಭೂಷಣವು ಎಂದು ಹೆಡ್‌ಮಾಸ್ತರ ಶಾಲಾ ಅಲದಗೇರಿ ಇವರು ತಿಳಿಸುತ್ತಾರೆ.

ಪ್ರ ಕ ಟ ನೆ

೧೯೩೪ ನೆಯ ಇಸ್ವಿಯ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ (ಕನ್ನಡ, ಮರಾಠಿ, ಉರ್ದು) ವೇಳಾಪತ್ರಿಕೆ.

ತಾರೀಖು	ಸ್ಟ್ಯಾಂಡರ್ಡ ಟಾಯಿಮ್ ಇಂದ	ಸ್ಟ್ಯಾಂಡರ್ಡ ಟಾಯಿಮ್ ವರಿಗೆ	ವಿಷಯಗಳು	ಗುಣಗಳು
ಬುಧವಾರ ೭-೩-೧೯೩೪	೧೦	೧೦-೩೦	ಉಮೇದವಾರರ ಹೆಸರು ಹಚ್ಚಿಕೊಳ್ಳುವದು.	
,,	೧೧ ರಿಂದ	೨ ಘ. ವರಿಗೆ	ಮೊದಲನೆಯ ಸದರು (ಬ) ಹಾಗು (ಕ) ದೇಶಭಾಷಾ.	(ಬ) ೪೫ (ಕ) ೩೦
,,	೩ ,,	೫ ,,	೨ನೆ ಸದರು (ಬ) ಮತ್ತು (ಅ) ಉಕ್ತಲೇಖನ ಹಾಗು ನಿಬಂಧ ಮತ್ತು ಕೈ ಬರಹ.	(ಬ) ೧೫ (ಅ) ೬೦
ಗುರುವಾರ ೮-೩-೧೯೩೪	೧೧ ,,	೧ ,,	೫ನೆ ಸದರು ಇತಿಹಾಸ	೭೫
,,	೨ ,,	೪ ,,	೬ನೆ ಸದರು ಆರೋಗ್ಯಶಾಸ್ತ್ರ.	೭೫
ಶುಕ್ರವಾರ ೯-೩-೧೯೩೪	೧೧ ,,	೨ ,,	೩ನೆ ಸದರು (ಅ) ಮತ್ತು (ಬ) ಗಣಿತ ಮತ್ತು ಮನೆಯ ಜಮಾಖರ್ಚು.	(ಅ) ೮೦ ಮತ್ತು (ಬ) ೨೦
,,	೩ ,,	೫ ,,	೪ನೆ ಸದರು ಭೂಗೋಲ.	೭೫
ಶನಿವಾರ ೧೦-೩-೧೯೩೪	೧೧ ,,	೨ ,,	೭ನೆ ಸದರು ಹೆಣಿಕೆ ಕೆಲಸ.	೧೦೦
	೩ ,,	೫ ,,	೮ನೆ ಸದರು ಐಚ್ಛಿಕ ವಿಷಯ (ಡ್ರಾಯಿಂಗ, ಪ್ರಕೃತಿ ವಿಮರ್ಶ, ಗಾಯನ.	೭೫

ಸೂಚನೆ—ಉಮೇದವಾರರು ಒಂದು ಐಚ್ಛಿಕ ವಿಷಯ ತೆಗೆದುಕೊಳ್ಳಲೇಬೇಕು. (೨) ಬಾಯಿಪರೀಕ್ಷೆಯನ್ನು ೧ ನೆಯ ಸದರು (ಅ) ಮತ್ತು (ಡ) ಬರಹದ

Reg. No. B. 2567

ಜಾಹೀರಾತು

ಸರಕಾರದಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಟೆಕ್ಸ್ಟ ಬುಕ್ಕಾಗಿ ಮಂಜೂರಾದ

ಗಣಿತ ಶಿಕ್ಷಕ

ಲೇಖಕ:—ಹಿರೇಮಠ ಮ್ಯು. ಕನ್ನಡ ಶಾಲಾ ಮಾಸ್ತರ ವಿಜಾಪುರ.

ಈ ಪುಸ್ತಕದಲ್ಲಿ ಕನ್ನಡ ೫, ೬,.೭, ಹಾಗು ವ್ಹ. ಫಾಯಿನಲ್ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಪ್ರತಿಯೊಂದು ಪ್ರಕರಣದಲ್ಲಿ ವ್ಯವಹಾರಿಕ ಲೆಖ್ಖಗಳನ್ನೂ, ವಾರಲೋನ, ಕ್ಯಾಶ ಸರ್ಟಿಫಿಕೇಟು ಮುಂತಾದ ಪ್ರಚಲಿತ ಠೇವುಗಳ ಲೆಖ್ಖಗಳನ್ನೂ ಹಾಕಿದೆ. ಮೊದಲು ಮಾದರಿಗಾಗಿ ಒಂದು ಲೆಖ್ಖವನ್ನು ಬಿಡಿಸಿ ತೋರಿಸಿ, ತರುವಾಯ ಪ್ರತಿಯೊಂದು ಅದೇ ಮಾದರಿಯ ಹಲವು ಲೆಖ್ಖಗಳನ್ನು ರೂಢಿಗಾಗಿ ಸೇರಿಸಿದೆ. ಲೆಖ್ಖವು ಮನದಟ್ಟಾಗುವಂತೆ ಈ ಪುಸ್ತಕದಲ್ಲಿ ವಿದ್ಯಾರ್ಥಿಗಳಿಗೆ ಉಪಯೋಗವಾಗುವಷ್ಟೇ ವಿಷಯಗಳನ್ನು ಕೊಟ್ಟಿದ್ದರಿಂದ ಬೆಲೆಯಾದರೂ ಕಡಿಮೆಯಾಗಿ ಪ್ರತಿಯೊಬ್ಬರು ಸಂಗ್ರಹಿಸಲು ತಕ್ಕದ್ದಾಗಿದೆ. ಬೆಲೆ ೧೪ ಆಣೆ.

ಪುಸ್ತಕಗಳು ದೊರೆಯುವ ಸ್ಥಳ:—

ಬಸಪ್ರಭಯ್ಯ ದುಂಡಯ್ಯ ಹಿರೇಮಠ,

ಮ್ಯು. ಕನ್ನಡ. ಶಾಲಾ ಮಾಸ್ತರ ವಿಜಾಪೂರ.

ಮತ್ತು ಎಲ್ಲ ಮುಖ್ಯ ಬುಕ್ಕಶೇಲರರಲ್ಲಿ ಶಿಗುವವು.

ಸ್ಯಾಂಪಲ್] [ಫುಕ್ಕಟೆ

ಉತ್ತಮ ಮಸೀ ಚೀಟುಗಳು

ನೀಲೀಕಪ್ಪು, ಕೆಂಪು, ಜಾಂಬಳಿ ಮಸಿಯ ಚೀಟುಗಳು ಈ ಕಂಪನಿಯು ಬಹಳ ಜನರಿಂದ ಶಿಫಾರಸ ಪಡೆದು ಮೆಡಲ್ಲುಗಳನ್ನು ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭—೬
೫೦೦	,,	೧—೧೪ ೦
೧೦೦೦	,,	೩—೦—೦
೧೦೦೦೦	,,	೨೭—೮—೦ (ರೇಲ್ವೆ ಫ್ರೀ)

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರಮಾಡಿರಿ.

ಕರ್ನಾಟಕ ಇಂಕ ಕಂಪನಿ,

ಬಾಗಲಕೋಟ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— FEBRUARY 1934 —

ಸಂಪಾದಕ— ವೆಂಕಟೇಶ ನರಸಿಂಗರಾವ ಮಗದಾಳ ಬಿ. ಎ.,

ಸಂಪುಟ ೭೦] ಫೇಬ್ರುವರಿ ೧೯೩೪ [ವ. ೫ ಸಂ. ೧೧

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ಕನ್ನಡ ಸಾಹಿತ್ಯ	೧
೨.	ಅಸ್ಪೃಶ್ಯನ ಗೋಳು (ಕವಿತೆ) ...	೨೦
೩.	ಮಾನಸಶಾಸ್ತ್ರ	೨೪
೪	ಗಣಿತ	೩೦
೫	ಪ್ರಕಟನೆ	೩೨

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head Master, Training School, Dharwar, at his Office.

ಮಾರಾಟಕ್ಕೆ ಸಿದ್ಧವಾಗಿದೆ] [ಬೆಲೆ ೫ ಆಣೆ

ಕರ್ನಾಟಕದ ಕಥಾಮಯ ಇತಿಹಾಸ

(ಕನ್ನಡ ಲನೆಯ ಇಯತ್ತೆಗಾಗಿ)

ಲೇಖಕ:— ಗೋ. ಅ. ಜೋಗಳೇಕರ, ಸ್ಕೂಲ್‌ಮಾಸ್ತರ ಗದಗ

ನಮ್ಮಿಂದ ರಚಿಸಲ್ಪಟ್ಟ "ಕರ್ನಾಟಕಾಚಾ ಗೋಷ್ಟೀರೂಪ ಇತಿಹಾಸ" ಎಂಬ ಮರಾಠಿ ಪುಸ್ತಕವು ಮುಂಬಯಿ ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾಗಿದೆ. ಅದರ ಕನ್ನಡ ಭಾಷಾಂತರವು ಮಾರಾಟಕ್ಕೆ ಸಿದ್ಧವಾಗಿದೆ. ಇದರಲ್ಲಿ ಐತಿಹಾಸಿಕ ಕಾಲದಿಂದ ಈಗಿನವರೆಗಿನ ಕರ್ನಾಟಕದ ಇತಿಹಾಸವು ಚಿಕ್ಕಮಕ್ಕಳಿಗೆ ತಿಳಿಯಬಹುದಾದ ಸುಲಭ ಭಾಷೆಯಲ್ಲಿ ೩೨ ಕಥೆಗಳ ರೂಪದಿಂದ ಬರೆಯಲ್ಪಟ್ಟಿದೆ. ಬಾಲಕರಲ್ಲಿ ಸ್ಫೂರ್ತಿಯೂ, ಸ್ವಾಭಿಮಾನವೂ ಹುಟ್ಟುವಂತೆ ಇದರ ರಚನೆಯಿದೆ. ಎರಡು ನಕಾಶೆಗಳೂ, ಅಲ್ಲಲ್ಲಿ ಬೇಕಾಗುವ ಚಿತ್ರಗಳೂ ಸೇರಿಸಲ್ಪಟ್ಟಿವೆ. ಇಂಥ ಉಪಯುಕ್ತವಾದ ಪುಸ್ತಕಕ್ಕೆ ಸ್ಕೂಲ್‌ಬೋರ್ಡುಗಳೂ, ಶಿಕ್ಷಕರೂ ಉತ್ತೇಜನಕೊಟ್ಟು ಬಾಲಕರಿಗೆ ನಿಜವಾದ ಇತಿಹಾಸಜ್ಞಾನವನ್ನು ಮಾಡಿಕೊಡಬೇಕೆಂದು ಹಾರೈಸುವೆವು.

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವವು. ಶಿಕ್ಷಕರಿಗೂ ಪುಸ್ತಕವ್ಯಾಪಾರಿಗಳೂ ಯೋಗ್ಯ ಕಮೀಶನು ಕೊಡಲಾಗುವದು.

ಗೋ. ಅ. ಜೋಗಳೇಕರ,

ಸ್ಕೂಲ್‌ಮಾಸ್ತರ, ಗದಗ ಮ್ಯುನಿಸಿಪಾಲಿಟಿ, ಗದಗ.

ಟೆಕ್‌ಸ್ಟ ಬುಕ್ ಎಂದು ಮಂಜೂರಾಗಿದೆ.

ಪ್ರದೇಶ ಪದ್ಧತಿಯಿಂದ ಬರೆಯಲ್ಪಟ್ಟ

ಲನೆಯ ಇಯತ್ತೆಯ

ಸಚಿತ್ರ—ಭೂವರ್ಣನೆ

ಬೆಲೆ: ೭ ಆಣೆ] [ಬೆಲೆ: ೭ ಆಣೆ

ಲನೆಯ ಇಯತ್ತೆಯ

ಸಚಿತ್ರ—ಜಮಾಖರ್ಚು

ಬೆಲೆ: ೩ ಆಣೆ] [ಬೆಲೆ: ೩ ಆಣೆ

ಬೆಳಗಾಂವ ಜಿಲ್ಹೆಯ

ಸಚಿತ್ರ—ಭೂವರ್ಣನೆ

ಬೆಲೆ: ೫ ಆಣೆ] ಬೆಲೆ: ೫ ಆಣೆ

ನಮ್ಮ ಎಲ್ಲ ಪುಸ್ತಕಗಳು ಎ. ಆರ್. ಶಿವನಾಗಪ್ಪಾ ಬುಕ್-ಡಿಪೋ ಹುಬ್ಬಳ್ಳಿ ಹಾಗು ಕರ್ನಾಟಕದ ಎಲ್ಲ ಬುಕ್-ಡಿಪೋಗಳಲ್ಲಿ ದೊರೆಯುವವು.

ವಿಳಾಸ: — ಶ್ರೀ ಬಲಭೀಮ ಸ್ಟೋಅರ್ಸ, ಕಾಗವಾಡ. ಜಿ. ಬೆಳಗಾಂವ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,

ಸಂಪುಟ ೨೦ ||| ಫೇಬ್ರುವರಿ ೧೯೩೪ ||| ವರ್ಷ ೫ ಸಂ. ೧೧

ಕನ್ನಡ ಸಾಹಿತ್ಯ

ಕಳೆದ ಡಿಸೆಂಬರ ತಿಂಗಳ ನಾತಾಳಿಯ ಸೂಟಿಯಲ್ಲಿ ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿ ಸಭೆ ಸಮ್ಮೇಲನಗಳ ಸೂರೆಯಾಯಿತು. ನಾತಾಳಿಯ ಸೂಟಿಯಲ್ಲಿಯೇ ನಮ್ಮ ದೇಶದ ಸುಶಿಕ್ಷಿತರು ಒಂದೆಡೆಗೆ ಕಲೆತು ತಮ್ಮ ಹಿತಗೋಷ್ಠಿಗಳನ್ನು ಕುರಿತು ವಿಚಾರವಿನಿಮಯ ಮಾಡಿ ಗೊತ್ತುವಳಿಗಳನ್ನು ನಿಶ್ಚಯಿಸುವದಕ್ಕೆ ಸಾಕಷ್ಟು ಅವಕಾಶವು ದೊರೆಯುವದು. ದೇಶದ ಜನರ ಜೀವನಕ್ಕೆ ಸಂಬಂಧಿಸುವ ಬಹುತರ ಎಲ್ಲ ಪ್ರಶ್ನಗಳ ಬಗ್ಗೆ ಆಯಾ ವಿಷಯಗಳಲ್ಲಿ ದುಡಿಯುತ್ತಿರುವವರೂ ನುರಿತವರೂ ಆದ ವಿದ್ವಜ್ಜನರು ಅಧಿಕಾರವಾಣಿಯಿಂದ ತಮ್ಮ ಅಭಿಪ್ರಾಯಗಳನ್ನು ತಜ್ಞರ ಮುಂದೆ ಇರಿಸಿ, ಮುಂದುವರಿಯುವ ಮಾರ್ಗಗಳನ್ನು ನಿಷ್ಕರ್ಷಿಸಿ, ಕಾರ್ಯಪ್ರವೃತ್ತರಾಗುವ ಹುರುಪಿನಿಂದ ತಮ್ಮ ತಮ್ಮ ನಾಡುಗಳಿಗೆ ಮರಳಿ ಬರುವದುಂಟು. ಈ ಅಲ್ಪ ಅವಧಿಯಲ್ಲಿ ಮಾತುಗಳೇ ಬಹಳ ಆಗುವವೆಂದೂ ಮುಂದೆ ವರ್ಷಾಂತ್ಯದಲ್ಲಿ ಮತ್ತೆ ಸಮ್ಮೇಲನಗಳು ನೆರೆಯುವವರೆಗೆ ಕಾರ್ಯವು ತೀರ ಸ್ವಲ್ಪವಾಗುವದೆಂದೂ ಈ ಸಮ್ಮೇಲನಗಳ ಬಗ್ಗೆ ಟೀಕೆಯು ಬರುವದುಂಟು. ಇರಲಿ. ಮೊನ್ನಿನ ನಾತಾಳಿಯ ಸೂಟಿಯಲ್ಲಿ ಉತ್ತರ ಕರ್ನಾಟಕದಲ್ಲಿ ಜರುಗಿದ ಸಮ್ಮೇಲನಗಳಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಲನವು ಒಳ್ಳೇ ಮಹತ್ವದ್ದಾಗಿತ್ತೆಂದು ಧಾರಾಳವಾಗಿ ಹೇಳಬಹುದು. ನಮ್ಮ ನಾಡಿನ ವ್ಯಾಪಾ

ರೋದ್ಯೋಗಗಳ ಕೇಂದ್ರವಾದ ಹುಬ್ಬಳ್ಳಿಯಲ್ಲಿ ಈ ಸಾರೆ ಈ ಸಮ್ಮೇಲನವು ವಿಜೃಂಭಣೆಯಿಂದ ಜರುಗಿತು. ಕನ್ನಡ ನಾಡಿನ ಹಲವು ಭಾಗಗಳಿಂದ ಬಂದ ಪ್ರತಿನಿಧಿಗಳೂ ಸಾಹಿತ್ಯ ಭಕ್ತರೂ ಅಲ್ಲಿ ಕಲೆತಿದ್ದರು. ನಮ್ಮ ಇಲಾಖೆಯ ಶಿಕ್ಷಣಮಂತ್ರಿಗಳಾದ ನಾಮದಾರ ದಿವಾನಬಹದ್ದೂರ ಸಿದ್ದಪ್ಪ ತೋಟಪ್ಪ ಕಂಬಳಿ ಬಿ. ಎ., ಎಲ್‌ಎಲ್. ಬಿ., ಎಮ್. ಎಲ್. ಸಿ., ಜೆ. ಪಿ. ಇವರು ಮುಂಬಯಿ ಯಿಂದ ಹುಬ್ಬಳ್ಳಿಗೆ ಬಂದು ಈ ಸಮ್ಮೇಲನವನ್ನು ಆರಂಭಿಸುವ ಗೌರವದ ಕಾರ್ಯವನ್ನು ನೆರವೇರಿಸಿದರು. ಹುಬ್ಬಳ್ಳಿಯ ಹೆಸರಾದ ವಕೀಲರೂ ಕನ್ನಡ ಸಾಹಿತಿಗಳೂ ಆದ ಶ್ರೀಯುತ ಘಾವಟೆ ಇವರು ಸ್ವಾಗತಾಧ್ಯಕ್ಷರಾಗಿ ಸಭಿಕರನ್ನೆಲ್ಲ ಸ್ವಾಗತ ಮಾಡಿದರು. ಬಳ್ಳಾರಿ ಪ್ರಾಂತದ ಶ್ರೀಯುತ ನಾಗೇಶ ಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಸಮ್ಮೇಲನದ ಕಾರ್ಯಕಲಾಪಗಳನ್ನು ಯಥೋ ಚಿತವಾಗಿ ಸಾಗಿಸಿ ಸಾಂಗಗೊಳಿಸಿದರು. ಕನ್ನಡ ಸಾಹಿತ್ಯದ ಹಲವು ಅಂಗಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಮ್ಮೇಲನದಲ್ಲಿ ಚರ್ಚೆಯಾಯಿತು. ಕವಿಗಳು ತಮ್ಮ ಕವಿತೆಗಳನ್ನು ಸಭಿಕರ ಮುಂದೆ ಹಾಡಿತೋರಿಸಿದರು. ಲಾವಣೆಗಳನ್ನು ತಜ್ಞರಿಂದ ಅನಿಸಲಾಯಿತು. ಕೀರ್ತನ ನಾಟಕಗಳಾದವು. ಕನ್ನಡ ವರ್ತಮಾನ ಪತ್ರಗಳು, ಮಾಸಿಕಗಳು, ಗ್ರಂಥಗಳು, ಪುಸ್ತಕಗಳು ಇವುಗಳ ಪ್ರದರ್ಶನವೂ ಆಯಿತು. ಸದ್ಯದ ಕನ್ನಡ ಸಾಹಿತ್ಯದ ನಭೋಮಂಡಲದಲ್ಲಿ ಬೆಳಗುತ್ತಿರುವ ಕವಿಗಳು, ಕೀರ್ತನಕಾರರು, ನಟರು, ಲೇಖಕರು ಮೊದಲಾದವರ ಪರಸ್ಪರ ಪರಿ ಚಯವಾಯಿತು. ಮೂರು ದಿನಗಳ ವರೆಗೆ ಅಲ್ಲಿ ನೆರೆದವರಿಗೆಲ್ಲ ಹರುಷದ ಹಬ್ಬ ವೆನಿಸಿತು. ಈ ಹಬ್ಬದಲ್ಲಿ ಶಿಕ್ಷಣದಲ್ಲಿ ತೊಡಗಿರುವ ಸಾಹಿತ್ಯಭಕ್ತರ ಭರತಿಯು ಚನ್ನಾಗಿತ್ತೆಂಬದು ಅಭಿಮಾನದ ಸಂಗತಿಯು.

ಸಾಹಿತ್ಯವು ಶಿಕ್ಷಣದ ತಳಹದಿಯು. ಸುಶಿಕ್ಷಿತನೆನಿಸಿಗೊಳ್ಳುವವನು ತನ್ನ ತಾಯ್ನುಡಿಯ ಸಾಹಿತ್ಯವನ್ನು ಚನ್ನಾಗಿ ಅಭ್ಯಾಸಿಸಿದ ಹೊರತು ಎಂಥ ಶಾಸ್ತ್ರ ಜ್ಞನೂ, ಕಲಾಭಿಜ್ಞನೂ ಎನಿಸಿಕೊಂಡರೂ ಸುಶಿಕ್ಷಿತನೆಂಬ ಗೌರವದ ಪದವಿ ಯನ್ನು ಪಡೆಯಲು ಅರ್ಹನಾಗಲಾರನು. ಪ್ರಾಥಮಿಕ ಶಿಕ್ಷಣದಲ್ಲಂತೂ ತಾಯ್ನು ಡಿಯ ಅಭ್ಯಾಸವು ಅತ್ಯಂತ ಮಹತ್ವವುಳ್ಳದ್ದು. ಆದ್ದರಿಂದಲೇ, ಹುಬ್ಬಳ್ಳಿಯಲ್ಲಿ ನೆರೆದ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಸಾಹಿತ್ಯ ಸೇವಕರು ಆಡಿದ ಮಹತ್ವದ ಮಾತುಗಳನ್ನೂ ಅಲ್ಲಿ ನಡೆದ ಕಾರ್ಯಕಲಾಪಗಳಿಂದ ಪ್ರಾಥಮಿಕ ಶಿಕ್ಷಕರು ಲಕ್ಷ್ಯದಲ್ಲಿಡಬಹುದಾದ ಕೆಲವು ಸಂಗತಿಗಳನ್ನೂ ಕುರಿತು ನಾವು ಇಲ್ಲಿ ವಿಸ್ತರಿ ಸಲು ಪ್ರಯತ್ನಪಟ್ಟಿರುವೆವು.

ಸಮ್ಮೇಲನದ ಪ್ರಸ್ತಾವ ಭಾಷಣದಲ್ಲಿ ಜ್ಞಾನಪ್ರಸಾರದ ಕಾರ್ಯವನ್ನು ಕುರಿತು ನಮ್ಮ ಮಂತ್ರಿವರ್ಯರು ಹೇಳಿದ ಮಾತುಗಳನ್ನು ಆರಂಭದ ಶಿಕ್ಷಣ ಕಾರ್ಯದಲ್ಲಿ ತೊಡಗಿರುವ ಬಡ ಶಿಕ್ಷಕರು ಎಂದೂ ಮರೆಯಲಾಗದು. ಅವರು ನುಡಿದದ್ದು:

ಜ್ಞಾನಪ್ರಸಾರದ ಕಾರ್ಯಕ್ಕಿಂತಲೂ ಮಹತ್ತರವಾದ ಪವಿತ್ರ ಕಾರ್ಯವು ಇನ್ನೊಂದಿಲ್ಲವೆಂದು ನನ್ನ ಮನವರಿಕೆ. ಈ ಕಾರ್ಯವು ಸಾಹಿತ್ಯ ದಿಂದಲೇ ಆಗಬೇಕಾದುದರಿಂದ ಸಾಹಿತ್ಯ ಸೇವೆಯೆಂದರೆ ಜನಸೇವೆಯೆಂಬುದಾಗಿ ನನ್ನ ನಂಬಿಗೆ. ಈ ಪುಣ್ಯಕ್ಷೇತ್ರದಲ್ಲಿ ಜಾತಿ ಧರ್ಮಗಳ ತಿಕ್ಕಾಟಕ್ಕೆ ಇಲ್ಲವೆ ರಾಜಕೀಯ ಪಂಗಡಗಳ ತೀಕ್ಷ್ಣಮತಭೇದಕ್ಕೆ ಅನುವು ಇರುವದಿಲ್ಲ. ಈ ಶಾರದೋಪಾಸನೆಯ ಮಂಗಳಕಾರ್ಯದಲ್ಲಿ ಎಲ್ಲ ಪಂಗಡದವರೂ ಎಲ್ಲ ಜಾತಿಯವರೂ ಒಮ್ಮನಸ್ಸಿನಿಂದ ಇಷ್ಟು ದಿವಸಗಳವರೆಗೆ ಸೇವೆ ಮಾಡಿದುದೇ ಇದಕ್ಕೆ ಬಲವಾದ ಸಾಕ್ಷಿಯು. ಜೈನರು, ವೀರಶೈವರು, ಬ್ರಾಹ್ಮಣರು, ಕ್ರಿಸ್ತಿಯನ್ನರು ಇವರೇ ಮೊದಲಾದವರು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಕನ್ನಡ ವಾಗ್ದೇವಿಯ ಆರಾಧನೆಯನ್ನು ಮಾಡಿರುವ ಸಂಗತಿಯು ಎಲ್ಲರಿಗೂ ವಿದಿತವಾಗಿದೆ. **ಸಾಹಿತ್ಯಸೇವೆಯಿಂದಲೇ ಜನಸೇವೆಯು ಪರಿಣಮಿಸುವದರಿಂದ ಕನ್ನಡಿಗರೆಲ್ಲರೂ ಈ ಪುಣ್ಯಕ್ಷೇತ್ರದಲ್ಲಿ ಹೆಚ್ಚು ಹುರುಪಿನಿಂದ ಕೆಲಸ ಮಾಡುವರೆಂದು ನನ್ನ ಕೋರಿಕೆ.**

ಸಾಹಿತ್ಯದ ಮಹತ್ವವನ್ನು ಕುರಿತು ಅವರು ಆಡಿದ ನುಡಿಯು ಅಕ್ಷರಶಃ ನಿಜವಿರುವದು. ಅವರು ಈ ಬಗ್ಗೆ ಅಂದದ್ದು:—

ಸಾಹಿತ್ಯದ ಅಗ್ಗಳಿಕೆಯನ್ನು ನಿಮ್ಮ ಮುಂದೆ ನಾನು ಬಣ್ಣಿಸಬೇಕಾಗಿಲ್ಲ. ಕನ್ನಡ ವಾಙ್ಮಯವು ಕನ್ನಡಿಗರ ಜೀವನದ ಕನ್ನಡಿಯು; ಅವರ ಆಶೆ ಆಕಾಂಕ್ಷೆಗಳೂ ಆಚಾರವಿಚಾರಗಳೂ, ಕುಂದುಕೊರತೆಗಳೂ, ನೆನಸುಮನಸುಗಳೂ ಒಡಮೂಡುವ ಸ್ಥಳವು. ಸಾಹಿತ್ಯವು ಜನತೆಯ ಕೈಗೆ ಕೋಲು; ಕಣ್ಣಿಗೆ ಬೆಳಕು. ಕನ್ನಡ ನಾಡಿನ ಸಮಗ್ರ ಜನತೆಗೆ, ಇಷ್ಟೇಕೆ ಕನ್ನಡವನ್ನು ಆಡುವ ಪ್ರತಿಯೊಬ್ಬ ವ್ಯಕ್ತಿಗೆ– ಅವನು ಎಲ್ಲಿಯೇ ಬಾಳುವೆ ಮಾಡುತ್ತಿರಲಿ.—ಒಂದು ಅತಿ ಮಹತ್ವದ ವಿಷಯವೆಂದರೆ ಅದು ಕನ್ನಡ ಸಾಹಿತ್ಯವೇ ಸರಿ. ನಿಜವಾಗಿ ಸಾಹಿತ್ಯವು ಜನರ ಜೀವನದ ಝರಿಯು.

ದೇಶದ ಅಭ್ಯುದಯಕ್ಕೆ ಅವಶ್ಯವಾದ ಅನೇಕ ಸಾಧನಗಳಲ್ಲಿ ಸಾಹಿತ್ಯವು ಮುಖ್ಯವಾಗಿರುವದು. ಯಾವಾಗ ನವದೃಷ್ಟಿಯ ಸಾಹಿತ್ಯವು

ಜನಸಾಮಾನ್ಯರಲ್ಲಿ ಹೆಚ್ಚಾಗಿ ಪ್ರಚುರವಾಗುವದೋ ಆಗ ದೇಶದಲ್ಲಿ ನವಜೀವನದ ಸಂಚಾರವಾಗುವದು. ಉತ್ಕರ್ಷದ ಶಿಖರಕ್ಕೆ ಹೋದ ದೇಶಗಳ ಸಾಹಿತ್ಯವನ್ನು ಪರೀಕ್ಷಿಸಿದರೆ ಇದರ ಬಗ್ಗೆ ಎಲ್ಲರಿಗೂ ಮನವರಿಕೆಯಾಗುವದು. ಒಳ್ಳೇ ಸಾಹಿತ್ಯವನ್ನು ಪಡೆದ ಜನಾಂಗದಲ್ಲಿ ಕರ್ತವ್ಯಜ್ಞಾನ, ಕರ್ತವ್ಯಕ್ಷಮತೆ, ಎಲ್ಲ ವಿಷಯಗಳ ಸಾಂಗೋಪಾಂಗಜ್ಞಾನ, ಸಾಮಾಜಿಕ ಪುನರ್ಘಟನೆಯ ಕಾರ್ಯದಲ್ಲಿ ಐಕ್ಯಮತ್ಯ ಇವು ದೃಷ್ಟಿಗೆ ಬೀಳುತ್ತವೆ. ಈಗ್ಗೆ ಸಾಹಿತ್ಯದ ಬಗ್ಗೆ ಜನರ ಕಲ್ಪನೆಯೇ ಬೇರೆ ಬೇರೆಯಾಗಿದೆ. **ಮನುಷ್ಯನಲ್ಲಿ ಸುಪ್ತಾವಸ್ಥೆಯಲ್ಲಿದ್ದ ಉತ್ತಮ ಗುಣಗಳ ವಿಕಾಸಕ್ಕೆ ಅನುಕೂಲತೆಯನ್ನು ಒದಗಿಸಿಕೊಡುವದೇ ಸಾಹಿತ್ಯದ ಕಾರ್ಯಕ್ಷೇತ್ರದಲ್ಲಿ ಮುಖ್ಯವಾಗಿದೆಯೆಂದು ಧಾರಾಳವಾಗಿ ಹೇಳಬಹುದು.**

ಇತರ ದೇಶೀಯ ಭಾಷೆಗಳಂತೆ ಕನ್ನಡದಲ್ಲಿಯೂ ಹೊಸ ಸಾಹಿತ್ಯವು ನಿರ್ಮಿತವಾಗುತ್ತಿರುವದಷ್ಟೇ. ಈ ಸಂಧಿ ಸಮಯದಲ್ಲಿ ಹಳೆ ಹೊಸ ಸಾಹಿತ್ಯ ಕಲ್ಪನೆಗಳ ಅಭಿಮಾನಿಗಳು ಚರ್ಚೆಗೆ ಎಡೆಕೊಟ್ಟು ಒಬ್ಬರನ್ನೊಬ್ಬರು ಹಳಿಯುತ್ತ ಕಾಲಕಳೆಯುವದುಂಟು. ರಾಜನು ಮೆಚ್ಚಿದಾಕೆಯೇ ರಂಭೆಯು ಎಂದು ತೆಲುಗಿನಲ್ಲಿ ಒಂದು ಗಾದೆಯುಂಟು. ಯಾರಿಗೆ ಸ್ವಭಾವತಃ ಯಾವದು ಸೇರುವದೋ ಅದು ಅವರಿಗೆ ಸವಿಯೆನಿಸುವದರಲ್ಲಿ ಸೋಜಿಗವಿಲ್ಲ. ನಮ್ಮ ಹಳೆಯ ಸಾಹಿತ್ಯವು ನೂರಾರು ವರ್ಷಗಳಿಂದ ನಮ್ಮ ಹಿಂದಿನವರಿಗೆ ಆನಂದ ಸೌಖ್ಯಗಳನ್ನು ಪೂರಯಿಸಿರುವದೆಂಬದನ್ನು ಹೊಸಬರು ಮರೆಯಲಾಗದು. ಹೊಸ ಸಾಹಿತ್ಯದಲ್ಲೂ ಆನಂದ ಸೌಖ್ಯಗಳ ಅಂಕುರವು ಇರುವದೆಂಬದನ್ನು ಹಳಬರು ಮರೆಯಲಾಗದು. ಹಿಂದಿನ ನಮ್ಮ ಸಾಹಿತ್ಯವು ಹತ್ತಿಪ್ಪತ್ತು ವರುಷಗಳಲ್ಲಿ ಪ್ರೌಢವಾಗಿ ನಮ್ಮ ಕೈ ಸೇರಿಲ್ಲವೆಂಬದನ್ನು ನಾವು ಲಕ್ಷ್ಯದಲ್ಲಿಡಬೇಕು. ಸರಸ್ವತಿಯ ಮೋಹದ ಮಕ್ಕಳು ನೂರಾರು ವರುಷಗಳಲ್ಲಿ ಕೆಲವರು ಮಾತ್ರ ಹೊರಟಿರುವರು. ಅಂದಮೇಲೆ ಈಗ ನಾಲ್ಕಾರು ವರುಷಗಳಲ್ಲಿ ಮೂಡುತ್ತಿರುವ ಹೊಸ ಕನ್ನಡ ಸಾಹಿತ್ಯಮಂಡಲದಲ್ಲಿ ಅಂಥ ಉದ್ದಾಮ ಕವಿಗಳು ಆಗಿಲ್ಲವೆಂದೂ ಈ ಪದ್ಧತಿಯಲ್ಲಿ ನಿಜವಾದ ಕವಿತ್ವವಿಲ್ಲೆಂದೂ ಹಳಿಯುವದು ಸರಿಯಾದೀತೇ? ಕನ್ನಡದಲ್ಲಿ ಸರಸ್ವತಿಯ ಸೇವೆಗೈಯ್ಯುವವರೆಲ್ಲ ನಮ್ಮವರು. ಅವರನ್ನು ನಾವು ಆದರದಿಂದಲೇ ಕಾಣತಕ್ಕದ್ದು. ಅವರಾದರೂ ಹಿಂದಣ ನಮ್ಮ ಕವಿಸಾರ್ವಭೌಮರ ಪದ್ಧತಿಗಳನ್ನು ಅಭ್ಯಾಸಿಸಿ ಅವರ ಸಾರವು ತಮ್ಮ ಕಾವ್ಯಗಳಲ್ಲಿ ಮೂಡುವಂತೆಯೇ ಪ್ರಯತ್ನಪಡತಕ್ಕದ್ದು.

ಈ ಬಗ್ಗೆ ನಾಮದಾರ ದಿವಾನಬಹಾದ್ದೂರ ಕಂಬಳಿ ಸಾಹೇಬರು ಸ್ವಲ್ಪದರಲ್ಲಿ ಮನದಟ್ಟಾಗುವಂತೆ ಹೇಳಿದ್ದೇನೆಂದರೆ :—

ಕರ್ಣಾಟಕದ ಪ್ರಾಚೀನಸಾಹಿತ್ಯವು ಬಹಳ ವ್ಯಾಪಕವಿರುವದೆಂದು ನಮ್ಮೆಲ್ಲರಿಗೂ ಅಭಿಮಾನಾಸ್ಪದವಾದ ಸಂಗತಿಯು. ನಮ್ಮಲ್ಲಿ ಹಲವರು ಒಳ್ಳೇ ಉದ್ದಾಮಕವಿಗಳಾಗಿ ಹೋದರು. ಅವರ ಕಾವ್ಯಗಳಲ್ಲಿ ಕಾಣಬರುವ ಭಾಷೆಯ ಲಾಲಿತ್ಯ, ವಿಷಯಕ್ಕೆ ಅನುಗುಣವಾದ ಶೈಲಿ, ಭಾವರಸಗಳ ವೇಗ ಇವು ಆ ಕವಿಗಳ ಬಗ್ಗೆ ನಮ್ಮ ಆದರವನ್ನು ಹೆಚ್ಚಿಸುತ್ತಿವೆ. ಆದರೆ ಈಗ್ಗೆ ಆ ಕಾವ್ಯಗಳು ಈಗಿನ ವಾಚಕರ ಬೌದ್ಧಿಕ ಹಸಿವೆಯನ್ನು ಹಿಂಗಿಸಲಾರವು. ಆಧುನಿಕ ಆಂಗ್ಲ ಸಾಹಿತ್ಯಕ್ಕೆ ಮನಸೋತ ಈಗಿನ ವಾಚಕರಿಗೆ ಪಂಪನ ಕಾವ್ಯಗಳು ಕೂಡ ಸಮಾಧಾನವನ್ನು ಕೊಡಲಾರವು. ಇದರಿಂದ ನಮಗೆ ಕೆಡಕೆನಿಸುವ ಕಾರಣವಿಲ್ಲ. ಬದಲಾವಣೆಯಾಗುವದು ಪ್ರಗತಿಯ ಲಕ್ಷಣ. ಇದಕ್ಕೂ ಮೊದಲು ಕನ್ನಡ ಸಾಹಿತ್ಯದಲ್ಲಿ ಬದಲಾವಣೆಗಳಾಗಿಲ್ಲವೆಂತಲ್ಲ, ಪುರಾತನರ ಪ್ರೌಢ ಸಾಹಿತ್ಯವು ಮಧ್ಯಮಕಾಲದ ಸುಲಭ ಸಾಹಿತ್ಯಕ್ಕೆ ತನ್ನ ಸ್ಥಳವನ್ನು ಕೊಡಬೇಕಾಯಿತು. ಹಳೆಗನ್ನಡವು ಹೊಸಗನ್ನಡವಾಗಿ ರೂಪುಗೊಂಡಿತು. ಇದಲ್ಲದೆ ಕಾವ್ಯದ ಸ್ವರೂಪದಲ್ಲಿ, ವಸ್ತುವಿನಲ್ಲಿ, ಹೇಳುವ ಕ್ರಮದಲ್ಲಿ, ಶೈಲಿಯ ಅನೇಕ ಸ್ಥಿತ್ಯಂತರಗಳಾಗಿರುವದು ನಿದರ್ಶನಕ್ಕೆ ಬರುತ್ತದೆ. **ಪಂಪ ರನ್ನ ಮೊದಲಾದ ಕವಿಗಳ ಕಾವ್ಯಗಳು ಉದ್ಗ್ರಂಥವಾಗಿ ದೂರದಲ್ಲಿಯೇ ನಿಂತುಬಿಟ್ಟವು. ಸರ್ವಜ್ಞ ಪದಗಳು ಶಿವಶರಣರ ಮುದ್ದಾದ ವಚನಗಳು** ಹಾಗು ಹರಿದಾಸರ **ಇಂಪಾದ ಹಾಡುಗಳು ಜನರಲ್ಲಿ ಪ್ರಚುರಗೊಂಡು ಮೇಲ್ಮೆಯನ್ನು ಹೊಂದಿರುವವು.** ದಿನಾಲು ಬದಲಾವಣೆಯನ್ನು ಹೊಂದುತ್ತಿರುವ ಜನಜೀವನಕ್ಕೆ ಸಾಹಿತ್ಯವು ಕನ್ನಡಿಯಾಗಬೇಕಾದರೆ ಅದರಲ್ಲಿ ಬದಲಾವಣೆಯಾಗುವದು ಇಷ್ಟವೂ ಅವಶ್ಯವೂ ಆಗಿರುವದು. **ಆದರೆ ಈ ಹೊಸ ಸಾಹಿತ್ಯವು ಹಳೆಯ ಸಾಹಿತ್ಯದ ಎಲ್ಲ ಸಾರವನ್ನು ಹೀರಿಕೊಂಡೇ ಭೂತಕಾಲದ** ತಳಹದಿಯ ಮೇಲೆ ನಿಲ್ಲಬೇಕು.

ಕನ್ನಡ ನಾಡಿನ ಬೇರೆ ಬೇರೆ ಭಾಗಗಳ ಭಾಷೆಯಲ್ಲಿ ಬಹುರೂಪತೆಯು ಕಂಡುಬರುವದಷ್ಟೇ. ಇದನ್ನು ಏಕರೂಪತೆಯುಂಟಾಗುವಂತೆ ಮಾಡಿದ ಹೊರತು ಕನ್ನಡಿಗರಲ್ಲಿ ಐಕ್ಯವೂ ಭಾಷಾವೃದ್ಧಿಯೂ ಸಾಹಿತ್ಯದ ಏಳಿಗೆಯೂ ಆಗಲು ಅರಿದಾದದ್ದು. ಈ ಬಗ್ಗೆ ಸದ್ಯಕ್ಕೆ ಹಲವು ಪ್ರಯತ್ನಗಳು ನಡೆದಿರುವವು. ಮೈಸೂರವರು ನಮ್ಮಲ್ಲಿಯ ಕೆಲವು ಶಬ್ದಗಳನ್ನೂ ವಾಕ್ಯಪದ್ಧತಿಗಳನ್ನೂ ಧಾರಾಳವಾಗಿ ಉಪಯೋಗಿಸಲಾರಂಭಿಸಿರುವರು. ಈ ಮೂಲಕ ಗ್ರಂಥರಚನೆಯಲ್ಲಂತೂ ನನಿರ್ಮ್ಮಾರ್ಣಿ ಭಾಷೆಯು ಇಬ್ಬರಿಗೂ ತಿಳಿಯಲಾರಂಭಿಸಿದೆ. ಆದರೆ ಮಂಗಳೂರು, ಹೈದಾರಾಬಾದ ಮೊದಲಾದ ನಾಡುಗರ ಕನ್ನಡಿಗರ ನುಡಿಯಲ್ಲಿ ಅಪರಿಚಿತವಾದ ಶಬ್ದಗಳೂ ವಾಕ್ಯಸರಣಿಯೂ ಹೇರಳವಾಗಿ ಕಂಡುಬರುವವು. ಆದ್ದರಿಂದ

ಭಾಷೆಯ ಏಕರೂಪತೆಗಾಗಿ ನಾವೆಲ್ಲರು ಒಮ್ಮನಸಿನಿಂದ ಪ್ರಯತ್ನಪಡುವದು ಅತ್ಯವಶ್ಯವಾದದ್ದು. ಈ ಕಾರ್ಯದಲ್ಲಿ ಈ ನಾಡಿನ ಪ್ರಾಥಮಿಕ ಶಿಕ್ಷಕರ ಕೆಲಸವು ಮಹತ್ವದ್ದಾಗಿದೆ. ಶಾಲೆಗಳಲ್ಲಿ ಆದಷ್ಟು ಶುದ್ಧ ಭಾಷೆಯನ್ನು ಉಪಯೋಗಿಸಲು ಅವರು ಪ್ರಯತ್ನಪಡಬೇಕು. ಕನ್ನಡ ನಾಡಿನ ಇತರ ಭಾಗಗಳ ಜನರು ಬರೆದ ಕಥೆ ಕವಿತೆ ಕಾದಂಬರಿಗಳನ್ನು ನಮ್ಮ ಭಾಗದ ಶಾಲೆಗಳಲ್ಲಿ ನಾವು ಮೇಲಿಂದ ಮೇಲೆ ನಮ್ಮ ವಿದ್ಯಾರ್ಥಿಗಳಿಗೆ ಓದಿ ತೋರಿಸಬೇಕು. ಒಂದು ಭಾಗದಲ್ಲಿ ಉಪಯೋಗಿಸುವ ಪಠ್ಯ ಪುಸ್ತಕಗಳ ಭಾಷೆಯನ್ನು ಬೇರೆ ಭಾಗದ ವಿದ್ವಾಂಸರು ಓದಿ ನೋಡಿ ಇಬ್ಬರಿಗೂ ಸಮರ್ಪಕವೆನಿಸುವ ಭಾಷೆಯು ಅದರಲ್ಲಿ ಹೆಚ್ಚಾಗಿ ಸೇರಿರುವಂತೆ ಪ್ರಯತ್ನಪಡಬೇಕು. ಇದಕ್ಕೆ ಲೇಖಕರ ಪ್ರಯತ್ನವಿದ್ದರೆ ತೀರದು. ಶಾಲಾಧ್ಯಾಪಕರು ಈ ಕಾರ್ಯದಲ್ಲಿ ಹೆಚ್ಚಾಗಿ ಮನಸು ಹಾಕಬೇಕು. ಇದರಿಂದ ಏಕರೂಪತೆಯ ಪ್ರಶ್ನವು ತೀವ್ರವಾಗಿ ಬಗೆಹರಿಯುವದರಲ್ಲಿ ಸಂದೇಹವಿಲ್ಲ. ಈ ಬಗ್ಗೆ ಪ್ರಸ್ತಾವ ಭಾಷಣದಲ್ಲಿ ನಾಮದಾರ ದಿವಾಣಬಹಾದ್ದೂರರು ಹೇಳಿದ್ದನ್ನು ನಾವೆಲ್ಲರೂ ಚೆನ್ನಾಗಿ ಮನನಮಾಡತಕ್ಕದ್ದು. ಅವರು ಅಂದದ್ದು :—

ಕರ್ನಾಟಕವು ಭಿನ್ನವಿಚ್ಛಿನ್ನವಾಗಿ ಬೇರೆ ಬೇರೆ ಸರಕಾರಗಳ ಆಧಿಪತ್ಯಕ್ಕೆ ಒಳಪಟ್ಟಿರುವುದರಿಂದ ಪ್ರತಿಯೊಂದು ಭಾಗದವರ ಸಾಮಾಜಿಕ ಮತ್ತು ರಾಜಕೀಯ ಆಕಾಂಕ್ಷೆಗಳು ಬೇರೆಬೇರೆಯಾಗಿರುವುದರಿಂದ ಒಂದು ಕಡೆಯವರ ಆಚಾರ ಉಚ್ಚಾರ ವಿಚಾರಗಳು ಎರಡನೆಯ ಕಡೆಯುವರಿಗೆ ಸಂಪೂರ್ಣ ಸರಿಬೀಳುವುದಿಲ್ಲ. ಇದಲ್ಲದೆ ನೆರೆಯ ಬೇರೆ ಬೇರೆ ಭಾಷೆಗಳ ಪ್ರಭಾವವು ಆಯಾ ಭಾಗಗಳಲ್ಲಿ ಹೆಚ್ಚು ದೃಷ್ಟಿಗೆ ಬೀಳುವದರಿಂದ ಒಂದು ಭಾಗದವರು ಬರೆದ ಕನ್ನಡವು ಎರಡನೆಯ ಭಾಗದವರಿಗೆ ರುಚಿಸುವದಿಲ್ಲ. ಆದಕಾರಣ ಕನ್ನಡದಲ್ಲಿ ಹೊರಡುವ ನಿಯತ ಕಾಲಿಕಗಳಿಗಾಗಲಿ ಪುಸ್ತಕಗಳಿಗಾಗಲಿ ಓದುಗರ ಆಶ್ರಯವು ಕಡಿಮೆಯಾಗಿದೆ. ಹೀಗಾಗಿ ಕನ್ನಡ ಸಾಹಿತಿಗಳಿಗೆ ಸಾಕಷ್ಟು ಪ್ರೋತ್ಸಾಹವು ಸಿಗುವದಿಲ್ಲ. ಆದುದರಿಂದ ಮಂಗಳೂರು, ಧಾರವಾಡ ಮತ್ತು ಮೈಸೂರ ಭಾಗಗಳಲ್ಲಿಯ ಗ್ರಂಥಸ್ಥ ಭಾಷೆಗೆ ಏಕರೂಪತೆಯನ್ನು ಕೊಡುವದೇ ಸಾಹಿತಿಗಳ ಕರ್ತವ್ಯವಾಗಿದೆ. ಈ ಮಹತ್ವದ ಕಾರ್ಯವನ್ನು ನೆರವೇರಿಸುವದಕ್ಕೆ ಯಾವ ಸುಸಂಘಟಿತ ಕಾರ್ಯಕ್ರಮವನ್ನೂ ಕನ್ನಡಿಗರು ಇನ್ನೂ ವರೆಗೆ ಕೈಕೊಂಡಿಲ್ಲ. ಮತ್ತೊಂದು ಸಂಗತಿಯೇನಂದರೆ :- ಸ್ಫೂರ್ತಿದಾಯಕವಾದ ವಿಚಾರೋದ್ಬೋಧಕವಾದ ಸಮಾಜಕ್ಕೆ ಯೋಗ್ಯ ಮಾರ್ಗವನ್ನು ತೋರಿಸುವಂಥ, ಸಮಾಜವನ್ನು ಉನ್ನತಿಗೆ ಒಯ್ಯುವಂಥ, ಹೊಸತರದ ಹೊಸ ಹುರುಪಿನ ಗ್ರಂಥಗಳ ನಿರ್ಮಾಣವಾಗಲಿಕ್ಕೆ ಸಾಹಿತ್ಯ ಸೇವೆಯಿಂದಲೇ ಉಪಜೀವಿಸುವಂಥ ಸಾಹಿತಿಗಳ

ಒಂದು ವರ್ಗವು ಉತ್ಪನ್ನವಾಗಬೇಕು. ಈ ಧ್ಯೇಯವನ್ನು ಮುಂದಿಟ್ಟು ಕೊಂಡು ನಿಜವಾಗಿ ವಾಚನೀಯವಾದ ಪುಸ್ತಕಗಳ ಲೇಖನ ಮತ್ತು ಪ್ರಕಾಶನದ ಕೆಲಸವನ್ನು ಕನ್ನಡಿಗರು ಕೈಕೊಳ್ಳಬೇಕು. ಈ ಕಾರ್ಯವು ದೊಡ್ಡದಿದೆ. ಸಾಹಿತ್ಯ ದೇವಿಗೆ ಎಷ್ಟು ಉಪಾಸಕರಾದರೂ ಸಾಲದು.

ಸ್ವಾಗತಾಧ್ಯಕ್ಷರಾದ ಶ್ರೀ. ಸಿದ್ಧರಾಮಪ್ಪ ದುಂಡಪ್ಪ ಪಾವಟೆ ಬಿ. ಎ., ಎಲ್‌ಎಲ್. ಬಿ., ಇವರು ತಮ್ಮ ಭಾಷಣದಲ್ಲಿ ಹುಬ್ಬಳ್ಳಿಯ ಪರಿಚಯವನ್ನು ಸಭಿಕರಿಗೆ ಚನ್ನಾಗಿ ಮಾಡಿಕೊಟ್ಟರು. ಹುಬ್ಬಳ್ಳಿಯ ಇತಿಹಾಸವು ಈ ಭಾಷಣದಿಂದ ಓದುಗರಿಗೆ ಚನ್ನಾಗಿ ತಿಳಿಯಬಹುದಾಗಿದೆ. ಅವರು ಹೇಳಿದ್ದು:—

ಸಭ್ಯರೆ! ತಾವು ದಯಮಾಡಿಸಿದ ಹುಬ್ಬಳ್ಳಿಯು ಪುರಾತನವಾದುದು. ಕ್ರಿಸ್ತಾಬ್ದ ೧೨೦೦ ರಲ್ಲಿ ಇದು ಕದಂಬ ರಾಜ್ಯಕ್ಕೆ ಸೇರಿದ್ದಿತು. ಆ ವಂಶದ ಮುಮ್ಮಡಿ ಜಯಕೇಶಿಯು ಗೋವೆಯಲ್ಲಿ ಅರಸುಗೆಯ್ಯುತ್ತಿದ್ದನು. ಕೊಂಕಣದ ಒಂಬಯ್ನೂರು ಮತ್ತು ಹಲಸಿಗೆಯ ಪನ್ನಿಚ್ಛಾಸಿರ ಮಂಡಲಗಳು ಅವನ ಒಡೆತನದಲ್ಲಿದ್ದುವು. ಹುಬ್ಬಳ್ಳಿಯು ಹಲಸಿಗೆಯ ನಾಡಿನಲ್ಲಿದ್ದಿತು. ಚಾಳುಕ್ಯವಂಶ ಮುಖತಿಲಕನೂ ಸತ್ಯಾಶ್ರಯಕುಳಾಳಂಕಾರನೂ ಚ್ಯಾಳುಕ್ಯಕಂಠೀರವನೂ ಎಂಬೀ ಬಿರುದುಗಳಿಗಿಂಬಾದ ತ್ರಿಭುವನಮಲ್ಲದೇವನು ಜಯಕೇಶಿಗಧಿರಾಜನಾಗಿದ್ದನು. ಧಾರವಾಡದ ಬಳಿಯ ನವಲೂರು ಆಗ ಜೌಗಾಂವಿಯ ನವಲೂರು. ಆ ಊರ ಕುರುಂಬಸೆಣಿಗ ದೈವದವರು ಸೆಣಿಗೇಶ್ವರನೆಂಬ ಶಿವಲಿಂಗಕ್ಕೆರೆದ ದಾನಶಿಲಾ ಶಾಸನದಲ್ಲಿ ಬರೆದುದನ್ನು ತೆಗದು ನಾನಿಲ್ಲಿ ಹೇಳಿರುವೆನು. ಕವಿಯ ಕೆಲವು ಪಂಕ್ತಿಗಳನ್ನಿಲ್ಲಿಡುವುದು ಲೇಸು:—

ಸಸಿವರನೊಂದು ತೋಂಟದೊಳು ಪೂಗಿಫಲಂಗಳ ಭಾರದಿಂದಲೊಂ।
ದೆಸೆಗೊರಗಿರ್ದುದೊಂದೆಡೆಯೊಳೊಂದೆಡೆಯೊಳ್ತುರುಗಿರ್ದ ಗೊಂಪಲಿಂ॥
ಸಸಿನಮೆನಿಪ್ಪುದೊಂದೆಡೆಯೊಳೊಂದೆಡೆಯೊಳ್ಮಸಕೆಂಪನಾಗಿ ನಾಲ್।
ದೆಸೆಗೆಸೆದಿಪ್ಪುದೊಂದೆಡೆಯೊಳೊಂದೆಡೆ ಹಾಲ್ಗೊನೆಯಿಂದಲೊಪ್ಪುಗುಂ॥

ಎರೆಹಾಳುಹರಳು ತೋಂಟದ
ಬರಿಯೊಳು ಕಾಲುವೆಯನುಂಬ ಗದ್ದೆಗಳಿಂದಂ॥
ಪಿರಿದೆಲೆಯ ಪೂರ್ವಬಳ್ಳಿಯ।
ಧರೆಯೆಲ್ಲಂ ಬೆಳಸುಕಳಸವಿಟ್ಟಂತಿರ್ಕುಂ॥

ಆ ಚ್ಯಾಳುಕ್ಯರೂ ಆ ಕದಂಬರೂ ಆ ಗೋವೆಯೂ ಆ ಹಲಸಿಗೆಯೂ ಹೊತ್ತಿನ ಒತ್ತುಜಂತ್ರದಲ್ಲಿ ಕತ್ತರಿಸಿದರು. ಹದಿನೇಳನೆಯ ಶತಕದಲ್ಲಿ ಹುಬ್ಬಳ್ಳಿಯು ವಿಜಾಪುರದ ಆದಿಲಶಾಹಿಗೊಳಗಾಗಿದ್ದಿತು. ಶಿವಾಜಿಯದನ್ನು ಸುಲಿದು ಮಹಾರಾಷ್ಟ್ರರಾಜ್ಯಸ್ಥಾಪನಾಪಥಪಾಥೇಯವನ್ನು ಒದಗಿಸಿಕೊಂಡನು. ಹತ್ತೊಂಬತ್ತನೆಯ ಶತಕದ ಮೊದಲಿಂದ ಸಾಂಗಲಿಯ ಪಟವರ್ಧನರ ಬಳಿಜರಿದು ಬ್ರಿಟಿಶ ರಾಳಿಕೆಯಲ್ಲಿ ನಿಂದು ಧಾರವಾಡ ಜಿಲ್ಹೆಯದೊಂದು ತಾಲೂಕಿನ ತಾಣವಾಗಿದೆ. ವ್ಯಾಪಾರೋದ್ಯಮಗಳಿಂದಲೂ ನೇಗೆಯ ಕಂಚುಗಾರಿಕೆಯ ಹೋರೆಗಳಿಂದಲೂ ಉಗಿಬಂಡಿಯವರ ಗೆಯ್‍ಮೆಸಾಲೆ (Workshop) ಗಳಿಂದಲೂ, ನೂಲುವ ನೆಯ್ಯುವ ಯಂತ್ರಚಕ್ರಗಳಿಂದಲೂ (ಗಿರಣಿ) ಹತ್ತಿಯನ್ನರೆಯುವ ಅರಳಿಯನೊತ್ತಿ ಕಟ್ಟುವ ಯಂತ್ರಾಲಯಗಳಿಂದಲೂ ಹತ್ತಿಯರಳೆಯ ವ್ಯಾಪಾರದಿಂದಲೂ ಕನ್ನಡ ನಾಡಿನ ಹಿರಿಯ ಊರಾಗಿದೆ.

ಹುಬ್ಬಳ್ಳಿಯ ಸುತ್ತುವಳಿಯ ನಾಡು ಕರ್ಣಾಟಕದ ಪುರಾವೃತ್ತದಲ್ಲಿ ಹೆಸರುಗೊಂಡುದು. ಪಂಪಕವಿಯ ಸಾಜದ ತಿರುಳುಗನ್ನಡದ ಪುಲಿಗೆರೆಯು ಲಕ್ಷ್ಮೇಶ್ವರವಾಗಿ ಸನಿಹದಲ್ಲಿದೆ. ಕುಮಾರವ್ಯಾಸನ ಗದುಗು ಇಂದಿಗೂ ಗದುಗೆನಿಸಿ ವ್ಯಾಪಾರದ ಗರ್ದುಗೆಯಾಗಿದೆ. ಪುರಾತನ ಶಿವಾಲಯಗಳಿಂದೊಪ್ಪುವ ಹೊಯ್ಸಳ ರಾಜ್ಯದ ಲೊಕ್ಕಗುಂಡಿಯು ಲಕ್ಕುಂಡಿಯೆಂದು ಗದುಗಿನ ಬಳಿಯಾಗಿದೆ.

ಶ್ರೀ ಚೆನ್ನಬಸವಾದಿ ಶಿವಶರಣರು ಹುಬ್ಬಳ್ಳಿಯ ಸುತ್ತುವಳಿಯಿಂದಲೆ ಉಳಿವೆಯ ಮಾಮನೆಗೆ ದಯಮಾಡಿದರು.

ಕನ್ನಡ ವಾಙ್ಮಯದಲ್ಲಿ ಜೈನವಾಙ್ಮಯ, ವೀರಶೈವ ವಾಙ್ಮಯ, ಬ್ರಾಹ್ಮಣ ವಾಙ್ಮಯ ಎಂಬ ಮೂರು ಹೆಸರಾದ ಭಾಗಗಳನ್ನು ಸಾಮಾನ್ಯವಾಗಿ ಮಾಡುವದುಂಟು. ಇವುಗಳ ಲಕ್ಷಣಗಳನ್ನೂ ವೈಶಿಷ್ಟ್ಯವನ್ನೂ ಶ್ರೀ. ಪಾವಟೆಯವರು ಸಂಕ್ಷೇಪದಲ್ಲಿಯೂ ತಿರುಳು ನುಡಿಯಲ್ಲಿಯೂ ಚೆನ್ನಾಗಿ ಬಣ್ಣಿಸಿರುವರು. ಹ್ಯಾಗೆಂದರೆ–

ಜೈನವಾಙ್ಮಯ :– ಜೈನ ಕವಿಗಳು ನಮ್ಮ ಅರಸರ ಐಸಿರಿಯನ್ನೂ ವೀರರ ತೋಳಿಕ್ಕತುಳವನ್ನೂ ನಾಡಿನ ಸೊಬಗನ್ನೂ ಬಣ್ಣಿಸುವದರೊಡನೆ ಜೈನಧರ್ಮದ ಪುರಾಣಗಳನ್ನು ಬರೆದು ಕನ್ನಡಿಗರ ಸಾತ್ವಿಕವನ್ನು ಜೋಕೆಗೆಯ್ದರು.

ವೀರಶೈವ ವಾಙ್ಮಯ :—ವೀರಶೈವ ಕವಿಗಳು ಶ್ರೀ ಬಸವಾದಿ ಪ್ರಮಥರ ನಿಚ್ಚಳ ಬಾಳ ಬಿಚ್ಚಳಿಕೆಗಳಿಂದ ಈಶಭಕ್ತಿಯನ್ನು ನಲೆಗೊಳಿಸಿ ಮಾನವರ ಅಗಾಧ

ಹೃದಯದಲ್ಲಿ ಮಾದೇವನನ್ನು ನಿಲುಕಿಸಿದರು. ಪುರಾಣಗಳ ಬಣ್ಣನೆಗಿಂಬಾದ ಶರಣರು ಆವಾವ ಹೋರಿಯಿಂದ ಮೇಣು ಆವಾವ ಹುಟ್ಟಿನಿಂದ ಮೇಣು ಸಾಮಾಜಿಕ ಕೀಳು ಮೇಲುಗಳಿಂದ ಮಾನವನ ಒರೆಗಾಣಬಾರದು. ಈಶಭಕ್ತಿಯ ಅಚ್ಚು ಸದಾಚಾರದ ಕೆಚ್ಚು ಅವನವನ ಒಪ್ಪುತಪ್ಪುಗಳ ಗುರುತು. ಮಾನವೋತ್ತಮನಲ್ಲಿ ಈಶನು ಅಚ್ಚೊತ್ತಿ ಒಚ್ಚತನಾಗಿಹನು. ಅದನ್ನು ಗುರುತಿಸಿ ಸಾಮಾಜಿಕ ಘಟನೆವಾಗುವುದುಚಿತವು. ಅದುವೆ ಮಾನವ ಕುಟುಂಬದ ಸಾಮುವಾಯಿಕೋನ್ನತಿಯು. ಅದುವೆ ಇಹಪರ ಸಾಧನವು ಎಂಬ ಒಪ್ಪಿನ ತತ್ವಗಳನ್ನು ಅಚ್ಚುಶೀಲದಿಂದ ಬೀರಿದರು.

ಶರಣರಿಂದಲೂ ವೀರಶೈವ ಕವಿಗಳಿಂದಲೂ ನಮಗೊಂದು ಪೊಚ್ಚ ಪೊಸದಾದ ಹಾದಿಯ ಕಣ್ದೆರವಿಯಾಯ್ತು. ಈ ಕಣ್ದೆರವಿಯು ನವೀನ ವಾಙ್ಮಯದಲ್ಲಿ ಪರಿಣಮಿಸಿತು. ಶಿವಶರಣರ ವಚನಗಳು ಬುದ್ಧನ ಸರಲಬೋಧವನ್ನೂ ಆಗ ಮೋಪನಿಷತ್ತುಗಳಗಭೀರೋದಾತ್ತತತ್ವಗಳನ್ನೂ ಹೆಣೆಹಾಕಿದವು. ಪ್ರಾಚೀನದಲ್ಲಿಯು ಕಾಣದ ಸ್ತ್ರೀಪುರುಷರ ಆಧ್ಯಾತ್ಮಿಕ ವಿಕಾಸವು ಕಂಗೊಳಿಸಿತು. ನವೀನ ಗುಣಾಕಲಿತ ಸಮಾಜವಾಯ್ತು. ಚಿರಜೀವಿಯಾಗಲಿಲ್ಲವಾದರು ಸದ್ಯದ ವೀರಶೈವ ಸಮಾಜದಲ್ಲಿ ಕೆಲಮಟ್ಟಿಗುಳಿದಿದೆ.

ಬ್ರಾಹ್ಮಣ ವಾಙ್ಮಯ :— ಬ್ರಾಹ್ಮಣ ವಾಙ್ಮಯವು ಭಾರತ ರಾಮಾಯಣಾದಿ ವೀರರ ಸೀತಾದಿ ಪ್ರತಿವ್ರತಾ ರತ್ನಗಳ ಉಚ್ಚವಾದ ಬಾಳನ್ನು ಮುಂದಿಟ್ಟು ಪೂರ್ವಪರಂಪರೆಯ ಸಾರವದ್ವಸ್ತುಗಳನ್ನು ತೋರಿಸಿತು. ಸ್ಮಾರ್ತಮಾರ್ಗದ ಸಾಮಾನ್ಯಜನಕ್ಕೆ ಸುಲಭವಾದ ಧರ್ಮಬೋಧೆಯನ್ನು ನೀಡಿತು. ಈ ವಾಙ್ಮಯದಲ್ಲಿ ವೈಷ್ಣವ ವಾಙ್ಮಯವು ಹೆಸರಿಟ್ಟು ಹೇಳಲು ತಕ್ಕುದಾಗಿದೆ. ಪುರಂದರದಾಸ, ಕನಕದಾಸ ಮೊದಲಾದ ದಾಸರ ಪದ್ಯಗಳು ದೇವಭಕ್ತಿಯನ್ನು ಲಲಿತವಾಗಿ ಬಣ್ಣಿಸಿ ಸರಳ ಜೀವನವನ್ನು ಸಾಧುಚರಿತ್ರವನ್ನು ಭಕ್ತಿಯ ಗಾಂಭೀರ್ಯವನ್ನು ಬೋಧಿಸುತ್ತವೆ.

ತಮ್ಮ ವಿಚಾರಪೂರಿತವಾದ ಭಾಷೆಯ ಕೊನೆಯ ಭಾಗದಲ್ಲಿ ಸ್ವಾಗತಾಧ್ಯಕ್ಷರು ಕನ್ನಡ ನುಡಿಯೂ ಅದರೊಡನೆ ಕನ್ನಡಿಗರ ಸಂಸ್ಕೃತಿಯೂ ಮುಂದುವರಿಯಲು ಹಲವು ಹಂಚಿಕೆಗಳನ್ನು ಸೂಚಿಸಿರುವರು. ಇವುಗಳಲ್ಲಿ ಪ್ರಾಥಮಿಕ ಶಿಕ್ಷಕರು ವಿಶೇಷವಾಗಿ ಲಕ್ಷ್ಯದಲ್ಲಿಡತಕ್ಕವುಗಳನ್ನು ಆರಿಸಿ ಇಲ್ಲಿ ಕೊಡುವೆವು.

೧. ಹಸುಳರ ಶಿಕ್ಷಣ ಪ್ರಸಾರ, ಇಂದಿನ ಹಸುಳರು ಮುಂದಿನ ಹಿರಿಯರು ನಮ್ಮನಾಡಿನ ಪುರೋವೃದ್ಧಿಯನ್ನನುಲಕ್ಷಿಸಿ ಹಸುಳರ ಶಿಕ್ಷಣವನ್ನು ಪ್ರಸರಿಸ

ಬೇಕು. ಶಿಕ್ಷಣವಿಲ್ಲದೆ ಬಳೆದ ಶಿಶುಗಳು ಯಾವುದೊಂದು ದೇಶದ ಪುರೋಗತಿಗೆ ಅಡ್ಡಲಾಗುವರು. ಕರ್ನಾಟಕದಲ್ಲಿ ತಕ್ಕಷ್ಟು ಬಾಲ ಶಾಲೆಗಳಿಲ್ಲ. ಶಾಲೆಗಳ ಅಭ್ಯಾಸಕ್ರಮವು ತೃಪ್ತಿಕರವಾಗಿಲ್ಲ. ಕರ್ನಾಟಕದ ಸಂಪ್ರೀತಿಯನ್ನು, ಅಭಿಮಾನ ವನ್ನು ಬಳೆಯಿಸುವಂತಹದಿಲ್ಲ. ಶಿಕ್ಷಣವು ಸಾರ್ವತ್ರಿಕವಾಗುವಂತೆಯೂ ಸಮಂ ಜಸವಾಗುವಂತೆಯೂ ಮಾಡಬೇಕು. ಕರ್ನಾಟಕ ವೀರರ ಮತ್ತು ಕರ್ನಾಟಕ ಮಹಿಲೆಯರ ಹಾಗೂ ಮಹಾನುಭಾವರ ಚರಿತ್ರಗಳನ್ನು ಪಠ್ಯಪುಸ್ತಕಗಳಲ್ಲಿ ಹೆಚ್ಚು ಸೇರಿಸಬೇಕು. ಆ ಚರಿತ್ರಗಳನ್ನು ಗೊಂಬೆ ದೀಪ (Magic Lantern) ಗಳಿಂದ ವಿದ್ಯಾರ್ಥಿಗಳ ಕಣ್ಣುಮುಂದಿಡಬೇಕು. ಕರ್ನಾಟಕದ ಪ್ರಸಿದ್ಧ ಸ್ಥಲಗಳಿಗೆ ಯಾತ್ರೆಮಾಡಿಸಬೇಕು.

೨. ಶಾಲೆಗಳಲ್ಲಿ ಓದದ ತಮ್ಮ ತಮ್ಮ ಹೊಟ್ಟೆ ಹೊರೆಯುವವರ ಬುದ್ಧಿ ವಿಕಾಸಕ್ಕಾಗಿ ಅಲ್ಲಲ್ಲಿ ಗಮಕಿಗಳ ವ್ಯಾಖ್ಯಾನಗಳನ್ನು ಒದಗಿಸಬೇಕು. ಚಲಿತ ಪುಸ್ತಕಾಲಯಗಳನ್ನು ಏರ್ಪಡಿಸಬೇಕು.

೩. ಕನ್ನಡ ಶಬ್ದಗಳದೊಂದು ಕೋಶವನ್ನು ನಿರ್ಮಿಸಬೇಕು. ಇದಕ್ಕಾಗಿ ಕರ್ನಾಟಕದ ಆಯಾ ಭಾಗಗಳಲ್ಲಿ ಸಂಚರಿಸಿ ಬೇರೆ ಬೇರೆ ಉದ್ಯೋಗದವರು ಬಳ ಸುವ ಮಾತುಗಳನ್ನು ಸಂಗ್ರಹಿಸಬೇಕು. ಆಯಾ ಉದ್ಯೋಗದವರ ಮಾತುಗಳಲ್ಲಿ ಅವುಗಳಿಗೆ ಸಹಜವಾದ ಪಾರಿಭಾಷಿಕ ವಚನಗಳು ಸುಲಭವಾಗಿ ದೊರೆಯಬಹುದು. ಅಲ್ಲಲ್ಲಿಯ ನಾಣ್ಣುಡಿಗಳನ್ನೂ ಗಾದೆಗಳನ್ನೂ ಸಂಗ್ರಹಿಸಬೇಕು. ನಮ್ಮ ಹೆಣ್ಣು ಮಕ್ಕಳು ಮನವಾರ್ತೆಯಲ್ಲಿ ಹಾಡುವ ಹಾಡುಗಳನ್ನು ಸಂಗ್ರಹಿಸಬೇಕು. ಇದರಿಂದ ಇಂಪಾದ ಕನ್ನಡ ಮಾತುಗಳ ಸಂಗ್ರಹವಾಗುವುದು. ಮನೆಮನೆಯಲ್ಲಿ ಹಾಡುವ ಭಕ್ತಿಪದಗಳನ್ನು ಕೂಡಿಸಬಹುದು. ಕಲಿಯದವರೆಂದು ನಾವು ಭಾವಿಸುವ ಹೆಣ್ಣು ಮಕ್ಕಳಲ್ಲಿಯೂ ಹಳ್ಳಿಗಾಡಿನವರಲ್ಲಿಯೂ ಅಚ್ಚಗನ್ನಡ ಶಬ್ದಗಳು ಹೆಚ್ಚು ದೊರೆ ಯುವವು. ಇದನ್ನೆಲ್ಲ ಅನುಲಕ್ಷಿಸಿ ಕೋಶವನ್ನು ರಚಿಸುವ ಒಂದು ವಿದ್ವತ್ಸಮಿತಿ ಯಾಗಬೇಕು

೪. ಕರ್ನಾಟಕದ ಇತಿಹಾಸ ಜ್ಞಾನವನ್ನು ಪ್ರಸಾರಗೆಯ್ಯಬೇಕು. ಧಾರ ವಾಡದ ಇತಿಹಾಸ ಮಂಡಲವು ಈ ವಿಷಯದಲ್ಲಿ ಶ್ಲಾಘನೀಯವಾಗಿದೆ. ಎಲ್ಲ ಕನ್ನಡಿಗರು ಆ ಸಂಸ್ಥೆಯನ್ನು ಬಲಿಸುವದಕ್ಕೆ ಯೋಗ್ಯ ಸಹಾಯವನ್ನು ಮಾಡ ಬೇಕು. ಅಂತಹ ಇತರ ಸಂಸ್ಥೆಗಳೂ ಅಲ್ಲಲ್ಲಿ ಹುಟ್ಟಲು ಪ್ರಯತ್ನಪಡಬೇಕು.

೫. ನಮ್ಮ ಗ್ರಂಥ ಭಾಂಡಾರವು ಅಪಾರವದೆ. ಶಿವಶರಣರ ವಚನಗಳೂ ವೈಷ್ಣವ ದಾಸಪದಗಳೂ ಪ್ರಕಾಶಗಾಣದೆ ಉಳಿದಿರುವುವು. ಈಗ ಪ್ರಕಟವಾದ

ಗ್ರಂಥಗಳು ಆ ಭಾಂಡಾಗದ ಒಂದು ಅಲ್ಪಾಂಶವಾಗಿದೆ. ಇವುಗಳನ್ನು ಪ್ರಸಾರ ಗೊಳಿಸುವವರಿಗೆ ಸಾಕಷ್ಟು ಉತ್ತೇಜನವಿಲ್ಲ. ನಮ್ಮ ಪದವೀಧರರು ಕೆಲಸಕ್ಕೆ ಬಾರದ ವ್ಯಸನಗಳಲ್ಲಿ ವ್ಯಯಮಾಡುವ ಹಣದ ಏನಿಕೆ ಪಾಲನ್ನು ಗ್ರಂಥ ಪ್ರಕಾಶ ಕರ ಸಹಾಯಕ್ಕೆ ವಿನಿಯೋಗಿಸಿದರೆ ದೊಡ್ಡ ಕಾರ್ಯವಾಗಬಹುದು. ಕರ್ನಾಟಕ ಸಂಸ್ಕೃತಿಯು ಈಗಿನ ಪರಸಂಸ್ಕೃತಿಯ ಜೊಡತಕ್ಕೆ ಸಿಲುಕಿ ನಾವು ನಮ್ಮ ಹಿಂ ಯರ ನಿಚ್ಚಳದ ಬಾಳುವೆಗೆ ಎರವಾಗಬಾರದಾದರೆ ಇದು ಅತ್ಯಾವಶ್ಯಕವು.

೬. ನಾವು ದಿನಚರ್ಯದಲ್ಲಿ ಕನ್ನಡ ನಾಡಿನ ಒಡವೆಗಳನ್ನು ಬಳಸಬೇಕು. ನಾಡಿನ ಅಭಿಮಾನಕ್ಕೆ ಇದೊಂದು ಮಹಾಸಾಧನವು. ಅಭಿಮಾನವಿಲ್ಲದೆ ನಾಡಿನ ಕಾರ್ಯವನ್ನು ಮಾಡಲಾರೆವು. ಉದ್ಯೋಗ ವ್ಯವಹಾರಗಳ ಬೆಳಿಗೆಯಿಂದ ನಮ್ಮ ಆರ್ಥಿಕ ಸ್ಥಿತಿಯು ಚನ್ನಾಗಿ ನಮ್ಮ ಪ್ರಾಗತಿಕ ಕಾರ್ಯಗಳಿಗೆ ನೆರವಾಗುವುದು.

೭. ಕಡೆಯದಾದರೂ ಕಡಿಮೆಯಿಲ್ಲದ ಒಂದು ಮಾತು. ನಾವು ದಿನೇ ದಿನೇ ಕ್ಷೀಣಾಂಗರಾಗುತ್ತಿರುವೆವು. ಶರೀರ ಕ್ಷಯ ಹೇತುಗಳಾದ ವ್ಯಸನಗಳು ಇಂಬು ಗೊಳ್ಳದಂತೆ ನೀತಿಯು ಬಳೆಯುವಂತೆ ನಮ್ಮ ಬಾಲಾದಿ ಪ್ರೌಢಾಂತ ವಿದ್ಯಾಮಂದಿ ರಗಳಲ್ಲಿ ಶಾರೀರಿಕ ನೈತಿಕ ಶಿಕ್ಷಣಗಳನ್ನು ಹೊಂದಿಸಬೇಕು.

ಶ್ರೀ. ಪಾವಟೆಯವರ ಮೇಲಿನ ಸೂಚನೆಗಳನ್ನು ಅಮಲಿನಲ್ಲಿ ತರಲು ಪ್ರಾಥಮಿಕ ಶಿಕ್ಷಕರು ತುಂಬಾ ನೆರವಾಗಬಹುದೆಂಬದು ಸ್ಪಷ್ಟವು. ನಮ್ಮಲ್ಲಿಯ ಅಭ್ಯಾಸಕ್ರಮವು ಸರಿಯಿಲ್ಲವೆಂದು ಅವರು ಸೂಚಿಸಿರುವರು. ಇದನ್ನು ಸುಧಾರಿಸಿ ಗೊಳ್ಳುವದು ಮುಖ್ಯವಾಗಿ ಶಿಕ್ಷಕರನ್ನವಲಂಬಿಸಿರುವದು. ಕರ್ನಾಟಕ ವೀರರ ಹಾಗು ಮಹಿಳೆಯರ ಪರಿಚಯವನ್ನು ಕನ್ನಡ ಹುಡುಗರಿಗೆ ಮಾಡಿಕೊಟ್ಟು ನಮ್ಮ ತಾಯ್ನಾಡಿನ ಬಗ್ಗೆ ಅವರಲ್ಲಿ ಪ್ರೀತಿಯನ್ನೂ ಅಭಿಮಾನವನ್ನೂ ಉಂಟು ಮಾಡುವದೂ ಮುಖ್ಯವಾಗಿ ಪ್ರಾಥಮಿಕ ಶಿಕ್ಷಕರ ಕೆಲಸವು. ಚಲಿತ ಪುಸ್ತಕಾಲಯ ಗಳ ಪದ್ಧತಿಯು ನಮ್ಮಲ್ಲಿ ರೂಢವಾಗಬೇಕೆಂದು ಶ್ರೀಯುತರು ಸೂಚಿಸಿರುವರು. ನಮ್ಮ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗಾಗಿ ಪುಸ್ತಕಾಲಯಗಳಿರುವದು ಅಪರೂಪವು; ಅಲ್ಲಿ ಇಲ್ಲಿ ಇವು ಇದ್ದರೂ ಅವುಗಳಲ್ಲಿ ವಿದ್ಯಾರ್ಥಿಗಳು ಓದಲರ್ಹವೂ ಮನರಂಜ ಕವೂ ಆದ ಪುಸ್ತಕಗಳ ಸಂಖ್ಯೆಯು ತೀರ ಕಡಿಮೆಯಾಗಿರುವದು. ಇವುಗಳನ್ನು ಹೆಚ್ಚಿಸಿ ಈ ಪುಸ್ತಕಾಲಯಗಳ ಯೋಗ್ಯ ಉಪಯೋಗವನ್ನು ವಿದ್ಯಾರ್ಥಿಗಳು ನಿತ್ಯವಾಗಿ ಮಾಡಿಕೊಳ್ಳುವಂತೆ ವ್ಯವಸ್ಥೆಯನ್ನಿಡುವ ಭಾರವು ಪೂರ್ಣವಾಗಿ ಶಿಕ್ಷಕ ರನ್ನೇ ಕೂಡಿದೆ. ಹಿಂದಿನಂತೆ ಈಗ ಪುಸ್ತಕಗಳ ಕೊರತೆಯಿಲ್ಲ. ತೀರ ಸಣ್ಣ ಹುಡುಗರಿಂದ ದೊಡ್ಡವರವರೆಗೆ ಬೇರೆ ಬೇರೆ ವಯಸ್ಸಿನವರು ಓದಿ ಬೋಧಪಡೆಯ

ಬಹುದಾದ ಸಣ್ಣ ದೊಡ್ಡ ಗದ್ಯಪದ್ಯ ಗ್ರಂಥಗಳು ಈಗ ಸಾಕಷ್ಟು ಹೊರಡುತ್ತಿರುವವು. ಇವುಗಳ ಉಪಯೋಗಮಾಡಿ ಸಾಲೆಯ ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಿದರೆ ಚಲಿತ ಪುಸ್ತಕಾಲಯಗಳ ಬೇಡಿಕೆಯು ಉಂಟಾಗುವದು. ಕನ್ನಡ ಶಬ್ದಕೋಶ ನಿರ್ಮಾಣಕಾರ್ಯದಲ್ಲಿ ಹಳ್ಳಿಯ ಪ್ರಾಥಮಿಕ ಶಿಕ್ಷಕರಿಂದ ಒಳ್ಳೇ ಕಾರ್ಯವಾಗುವಂತಿದೆ. ಹಳ್ಳಿಯ ಜನರಲ್ಲಿ ಹಲವು ಬಗೆಯ ಉದ್ಯೋಗಗಳಲ್ಲಿ ಉಪಯೋಗಿಸುವ ಅನ್ವರ್ಥಕವಾದ ಅಚ್ಚಗನ್ನಡ ಪದಗಳು ಹಲವು ದೊರೆಯಬಹುದು. ನಾಣ್ಣುಡಿಗಳೂ ಗಾದೆಗಳೂ ಅವರ ಕಿವಿಗೆ ಬೀಳುತ್ತಿರುವವು. ಜನಪದ ಸಾಹಿತ್ಯವನ್ನು ಅವರು ಮೇಲಿಂದಮೇಲೆ ಕೇಳುತ್ತಿರುವರು. ಇವೆಲ್ಲವುಗಳ ಸಂಗ್ರಹವನ್ನು ಶಿಕ್ಷಕರು ವಿಶೇಷ ಶ್ರಮವಿಲ್ಲದೆ ಮಾಡಬಹುದು. ಯಥಾನುಕೂಲವಾಗಿ ಇವುಗಳನ್ನು ಅವರು ಮಾಸಪತ್ರಿಕೆಗಳಲ್ಲಿ ಪ್ರಕಟಿಸುತ್ತಿರಬಹುದು. ಅಂದರೆ ಕೋಶ ನಿರ್ಮಾಣಮಾಡುವ ಬಿಗಿಯಾದ ಕೆಲಸವನ್ನು ಕೈಕೊಂಡ (ಬಹುತರವಾಗಿ) ಪಟ್ಟಣವಾಸಿಗಳೂ ವಿದ್ವಾಂಸರೂ ಆದವರಿಗೆ ಇವುಗಳಿಂದ ಒಳ್ಳೇ ಸಹಾಯವಾಗುವದು. ಕನ್ನಡ ನಾಡಿನ ಹಲವು ಭಾಗಗಳಲ್ಲಿ ಆಯಾ ನಾಡುಗಳಿಗೆ ಸಂಬಂಧಿಸಿದ ದಂತಕಥೆಗಳು, ಸ್ಥಳಪುರಾಣಗಳು, ಹಾಡುಗಳು, ಲಾವಣಿಗಳು ಮೊದಲಾದವು ರೂಢವಿರುವವು. ಇವುಗಳನ್ನು ಸಂಗ್ರಹಿಸಿ ಇತಿಹಾಸ ಮಂಡಲಗಳಿಗೆ ಒಪ್ಪಿಸುವದರಿಂದ ಕರ್ನಾಟಕದ ಇತಿಹಾಸ ಸಂಶೋಧನಕಾರ್ಯಕ್ಕೆ ಶಿಕ್ಷಕರು ನೆರವಾದಂತಾಗುವದು. ಶ್ರೀಯುತ ಪಾವಟೆಯವರು ಮಾಡಿದ ಕೊನೆಯ ಆದರೂ ಕಡಿಮೆಯಲ್ಲದ ಸೂಚನೆಯು ಮುಖ್ಯವಾಗಿ ಶಿಕ್ಷಕರನ್ನೇ ಉದ್ದೇಶಿಸಿರುವದು. ನಮ್ಮ ಪೂರ್ವದ ಸಂಪ್ರದಾಯಗಳು ಹಳ್ಳಿಗಳಲ್ಲಿಯೂ ಅಡಗಿಹೋಗಲಾರಂಭಿಸಿವೆ. ಚಿಕ್ಕಮಕ್ಕಳ ಕೋಮಲವಾದ ಮನಸಿನಮೇಲೆಯೂ ಅಂತಃರಣದ ಮೇಲೆಯೂ ಘಾತಕವಾದ ಸಂಪ್ರದಾಯಗಳ ವರ್ಚಸ್ಸು ಬೀಳಲಾರಂಭಿಸಿದೆ. ಇದನ್ನು ತಡೆಯುವದು ಶಿಕ್ಷಕರ ಕರ್ತವ್ಯವು. ಸಣ್ಣ ವಯಸ್ಸಿನಲ್ಲಿರುವಾಗಲೇ ಮನಸಿಗೂ ಶರೀರಕ್ಕೂ ಒಂದು ಬಗೆಯ ಒಲವು ಹತ್ತಿ ಅವು ಬಲಿತವೆಂದರೆ ಮುಂದೆ ಹುಡುಗರಲ್ಲಿ ದುಷ್ಟ ಚಟಗಳು ಸುಲಭವಾಗಿ ಸೇರವು.

ಶ್ರೀಯುತ ವಿದ್ವಾನ್ ವೈ. ನಾಗೇಶ ಶಾಸ್ತ್ರಿಗಳು ಈ ಸಮ್ಮೇಲನದ ಅಧ್ಯಕ್ಷರಾಗಿದ್ದರು. ಇವರು ಕೇವಲ ವಿದ್ವಾಂಸರಲ್ಲ; ಕವಿಗಳೂ ಆಗಿರುವರು. ಇವರ ಇಡಿ ಭಾಷಣವನ್ನು ಶಿಕ್ಷಕರು ಓದತಕ್ಕದ್ದು. ಕಾವ್ಯಸ್ವರೂಪವನ್ನೂ ಕಾವ್ಯದ ಲಕ್ಷಣಗಳನ್ನೂ ಇವರು ಚೆನ್ನಾಗಿ ವಿಮರ್ಶಿಸಿರುವರು. ಕನ್ನಡದ ಆಧುನಿಕ ಸಾಹಿತ್ಯದ ಮಹತ್ವವನ್ನು ಬಣ್ಣಿಸಿರುವರು. ನಮ್ಮ ಭಾಷೆಯೂ ಸಂಸ್ಕೃತಿಯೂ ದ್ರಾವಿಡ ವರ್ಗಕ್ಕೆ ಸೇರಿದವಿರುತ್ತವೆ. ಹಿಂದುಸ್ತಾನದಲ್ಲಿ ಆರ್ಯರು ಬರುವ

ಮುನ್ನ ದ್ರಾವಿಡರೆಂಬ ಜನರು ದಕ್ಷಿಣ ಹಿಂದುಸ್ಥಾನದಲ್ಲಿ ನೆಲೆಗೊಂಡಿದ್ದರೆಂಬುದು ಮಾತ್ರ ಸರ್ವಶ್ರುತವಾಗಿದೆ. ಆದರೆ ಈ ದ್ರಾವಿಡರ ಸಂಸ್ಕೃತಿಯ ಬಗ್ಗೆ ಜನರಲ್ಲಿ ಸರಿಯಾದ ಜ್ಞಾನವಿಲ್ಲ. ಆರ್ಯರೇ ನಮ್ಮ ಪೂರ್ವದ ಮಿಗಿಲಾದ ಸಂಸ್ಕೃತಿಯ ಕಾರಣರೆಂದು ನಾವೆಲ್ಲ ನಂಬಿದ್ದೇವೆ. ಈ ಬಗ್ಗೆ ಶ್ರೀ. ವಿದ್ವಾನ್ ನಾಗೇಶ ಶಾಸ್ತ್ರಿಗಳು ತಮ್ಮ ಭಾಷಣದಲ್ಲಿ ನುಡಿದದ್ದು ಮನನೀಯವು. ಅವರು ಹೇಳಿದ್ದು:—

ಕನ್ನಡವು ದ್ರಾವಿಡ ಭಾಷಾವರ್ಗಕ್ಕೆ ಸೇರಿದುದೆಂಬುದು ಸರ್ವಸಮ್ಮತವು. ದ್ರಾವಿಡರ ವಿಷಯಕ್ಕೆ ನಮ್ಮಲ್ಲಿ ಅನೇಕಕಲ್ಪನೆಗಳು ರೂಢವಾಗಿರುವವು. "ದ್ರಾವಿಡರೆಂದರೆ ದಕ್ಷಿಣದ ಮೂಲ ನಿವಾಸಿಗಳು. ನಾಗರಿಕತೆಯ ಕಲ್ಪನೆಯಿಲ್ಲದ ಕಾಡು ಜನರು. ಭೂತ ಸರ್ಪಾದಿಗಳನ್ನು ಪೂಜಿಸುವವರು. ಇವರ ವಿಚಾರಗಳು ಕಾಡು, ಆಚಾರಗಳು ಕ್ರೂರ" ಇತ್ಯಾದಿ ಕಲ್ಪನೆಗಳನ್ನು ವಿದೇಶೀಯ ಚರಿತ್ರಕಾರರು ನಮಗೆ ಕಲಿಸಿರುವರು. ಆದರೆ, ಪ್ರಾಚೀನ ದ್ರಾವಿಡ ವಾಙ್ಮಯವನ್ನು ಪರಿಶೀಲಿಸಿದರೆ ದ್ರಾವಿಡರ ಸಂಸ್ಕೃತಿಯ ವಿಷಯವಾಗಿ ಅನೇಕ ನಿಜವಾದ ಸಂಗತಿಗಳು ತಿಳಿದು ಬರುವವು.

ವೇದಕಾಲದ ಆರ್ಯರು ಈ ದ್ರಾವಿಡರನ್ನು ಮೂಲೆಗೊತ್ತಿ ಅವರ ಸಂಸ್ಕೃತಿಯನ್ನು ನಿರ್ಮೂಲಮಾಡಿ, ತಮ್ಮ ಸಂಸ್ಕೃತಿಯನ್ನು ಮುಂದುವರಿಸಿದರೆಂದು ದೇಶೀಯ ವಿದೇಶೀಯ ಪಂಡಿತರ ಊಹೆಯಾಗಿದೆ. ಆದರೆ ದ್ರಾವಿಡರ ಸಂಸ್ಕೃತಿಯ ಕುರುಹುಗಳನ್ನು ವಿಂಗಡಿಸಿ ಗುರುತಿಸಲು ಅನೇಕರು ಸಾಹಸಪಡುತ್ತಿರುವರು. ದ್ರಾವಿಡರ ಮತ್ತು ಆರ್ಯರ ಸಂಸ್ಕೃತಿಗಳ ಸತ್ಯಪ್ರಾಯವಾದ ಚಿತ್ರವನ್ನು ತೆಗೆಯುವ ಈ ಕಾರ್ಯವು ಅಷ್ಟು ಸುಗಮವಲ್ಲವು. ಆದರೂ ದ್ರಾವಿಡ ವಾಙ್ಮಯಾಭ್ಯಾಸಿಗಳಲ್ಲಿ ಅನೇಕರು ಹೀಗೆ ಹೇಳುವರು— ವೇದಕಾಲದ ಆರ್ಯರು ದಕ್ಷಿಣಕ್ಕೆ ಬರುವ ಪೂರ್ವದಲ್ಲಿ ದ್ರಾವಿಡರೊಳಗೆ ಶೈವ, ವೈಷ್ಣವಗಳೆಂಬೆರಡು ಮುಖ್ಯ ಪಂಗಡಗಳಿದ್ದವು.

ಇವೆರಡು ಪಂಗಡಗಳೂ ಕೂಡಿ ನಡೆಯುತ್ತಿರಲಿಲ್ಲ. ಆಚಾರ ಸಂಪ್ರದಾಯಗಳಲ್ಲಿ ಮಾತ್ರ ಹೋಲಿಕೆಯಿದ್ದಿತು. ಎರಡೂ ಪಂಗಡಗಳೂ ಸಂಪೂರ್ಣವಾಗಿ ಸಗುಣ ಮೂರ್ತಿಯನ್ನು ಪೂಜಿಸತಕ್ಕವುಗಳಾಗಿದ್ದವು. ಅವರಿಗೊಂದು ವಿಶಿಷ್ಟವಾದ ಧಾರ್ಮಿಕ ವಾಙ್ಮಯವಿತ್ತು. ಅವರ ಆರಾಧ್ಯದೇವತೆಗಳಾದ ಶಿವ-ವಿಷ್ಣುಗಳ ವಿಷಯವಾಗಿ ಅನೇಕ ಕಥೆಗಳು ಅವರಲ್ಲಿ ನೆಲೆಗೊಂಡಿದ್ದವು. ಅವರ ಅನೇಕ ರಾಜರು ಪ್ರಬಲ ಸೇನಾಯುತರಾಗಿ ಪ್ರಚಂಡ ಸಾಮ್ರಾಜ್ಯವನ್ನು ನಡೆಸುತ್ತಿದ್ದರು. ಉತ್ತರದಿಂದ ಬರುವ ಆರ್ಯರ ಅನೇಕ ದಾಳಿಗಳನ್ನು ಅವರು ತಡೆದು ಹಿಂದಕ್ಕಟ್ಟಿದರು. ಅಶೋಕನ ಪ್ರಬಲ ಸೇನೆಗೂ ಕೂಡ ತೆಲಗು, ಕನ್ನಡ ನಾಡುಗಳ

ಪ್ರಾಂತವನ್ನು ದಾಟಿ ಮುಂದುವರಿಯಲಾಗಲಿಲ್ಲ. ತಮಿಳ-ಚೇರರ ಪ್ರಾಂತಗಳಂತೂ ಅಜೇಯಗಳಾಗಿದ್ದವು. ಬೌದ್ಧ ದೀಕ್ಷೆಯನ್ನು ವಹಿಸಿದ ಮೇಲೆ ಅಶೋಕನು ರಾಜ್ಯವಿಸ್ತಾರವೆ ಹಂಗುದೊರೆದನು. ಆದರೆ, ಇದೇ ಸಮಯಕ್ಕೆ ಬೌದ್ಧ-ಜೈನ ಭಿಕ್ಷುಗಳು ವಿಂಧ್ಯೆಯನ್ನಿಳಿದು ದಕ್ಷಿಣದಲ್ಲಿ ತಮ್ಮ ಧರ್ಮ ಪ್ರಸಾರವನ್ನು ಬಲವಾಗಿ ನಡೆಸಿದರು. ಇದಕ್ಕೆ ಮೊದಲೇ ಅಧ್ಯಾಪಕವೃತ್ತಿಗಾಗಿ ಆರ್ಯರನೇಕರು ದಕ್ಷಿಣಕ್ಕಿಳಿದು ಬಂದಿದ್ದರು. ಅವರು ತಮ್ಮ ಪ್ರತಿಪಕ್ಷಿಗಳಾದ ಜೈನ ಬೌದ್ಧರನ್ನು ಎದುರಿಸಲು ದ್ರಾವಿಡರಲ್ಲಿಯ ಶೈವವೈಷ್ಣವ ಪಂಥಗಳಲ್ಲಿ ಸೇರಿಕೊಂಡು ತನ್ಮಯರಾದರು.

ದ್ರಾವಿಡರ ಸಂಸ್ಕಾರದಿಂದ ವೈದಿಕ ತತ್ವಗಳಲ್ಲಿಯೂ ಕೆಲವು ಮಾರ್ಪಾಡುಗಳಾದದ್ದು ಕಂಡುಬರುತ್ತದೆ. ವೈದಿಕ ಋಷಿಗಳಿಗೂ ಅವರ ದೇವತೆಗಳಿಗೂ ಇರುವ ಸಂಬಂಧದಲ್ಲಿ ಕೆಲಮಟ್ಟಿಗೆ ವಾಣಿಜ್ಯವೃತ್ತಿಯ ಛಾಯೆಯು ತೋರುವುದು. “ನಾನು ನಿನಗೆ ಇಂತಹ ಇಂತಿಷ್ಟು ಆಹುತಿಗಳನ್ನರ್ಪಿಸುವೆನು. ನೀನು ನನಗ ಇಂತಿಷ್ಟು ಸುಖಸೌಕಾರ್ಯವನ್ನು ಕೊಡು ಎಂದು ಅವರು ಕೇಳುವುದುಂಟು. ದ್ರಾವಿಡರ ದೇವಭಕ್ತ ಸಂಬಂಧವು ಸೇವ್ಯ ಸೇವಕ ಭಾವವಾಗಿರುವುದು. ತಾನು ದಾಸನು, ತನ್ನ ದೇವನು ತನಗೆ ಸಂಪೂರ್ಣವಾಗಿ ಸ್ವಾಮಿಯು ಎಂಬುದು ಅವರ ಭಾವನೆ. ಕರ್ಮಫಲತ್ಯಾಗಿಗಳಾಗಿ ಭಕ್ತಿಯಿಂದ ಪರಮಾತ್ಮನನ್ನು ಪೂಜಿಸುವ ಕಲ್ಪನೆಯನ್ನು ದ್ರಾವಿಡರಿಂದ ಆರ್ಯರು ಕಲಿತುಕೊಂಡರು. ಭಕ್ತಿ ತತ್ವವಂತೂ ಕೇವಲ ದ್ರಾವಿಡರದು. ಈ ಭಕ್ತಿಲತೆಯು ದ್ರಾವಿಡರ ಪ್ರಾಚೀನ ಧಾರ್ಮಿಕ ವಾಙ್ಮಯದಲ್ಲಿ ಅಂಕುರಿಸಿ, ಸಂಸ್ಕೃತದ ಆಗಮೋಪನಿಷತ್ತುಗಳಲ್ಲಿ ಪಲ್ಲವಿಸಿ, ಬಸವಾದಿ ಪ್ರಮಥರ ವಚನ ವಾಙ್ಮಯದಲ್ಲಿಯೂ ವೈಷ್ಣವದಾಸರ ಕೀರ್ತನಗಳಲ್ಲಿಯೂ ಹೂಬಿಟ್ಟು ತನ್ನ ಸುಗಂಧವನ್ನು ದಶದಿಕ್ಕುಗಳಲ್ಲಿಯೂ ತುಂಬಿಬಿಟ್ಟಿತು. ಆದುದರಿಂದಲೇ ಕರ್ಣಾಟಕವು ಭಕ್ತಿಯ ಜನ್ಮಭೂಮಿಯೆಂದು ಕೀರ್ತಿಗೊಂಡುದು. ತೀರ್ಥ ಕ್ಷೇತ್ರ ಯಾತ್ರೆಗಳೂ, ದೇವಾಲಯಾದಿನಿರ್ಮಾಣವೂ, ಅನೇಕ ಹಬ್ಬಗಳೂ, ದೇವತೋತ್ಸವಾದಿಗಳೂ ದ್ರಾವಿಡರವಾಗಿರುವವು. ಇಷ್ಟೇ ಅಲ್ಲ; ಸಮಾಜದ ಹಿತಾಹಿತಗಳನ್ನನುಲಕ್ಷಿಸಿ ವಿಧಿನಿಷೇಧಗಳನ್ನು ಕಂಡುಹಿಡಿದು ಸಮಾಜದ ಶ್ರೇಷ್ಠರು ಹಾಕಿಕೊಟ್ಟ ಕರ್ಮಗಳನ್ನು ಮಾಡಬೇಕೆಂಬುದು ಶೈವ-ವೈಷ್ಣವ ಪಂಥಗಳ ಅನೇಕ ಗ್ರಂಥಗಳಲ್ಲಿ ಕಂಡುಬರುವದು. ಧರ್ಮದಲ್ಲಿ ಸೇರಿದ ಈ ಸಮಾಜ ಹಿತದ ಕಲ್ಪನೆಯು ಮುಂದೆ ಸಮಾಜದ ಸುಸಂಘಟನೆಗೂ ಸುಸ್ಥಿತಿಗೂ ಸಹಕಾರಿಯಾಯಿತು. ಬರಬರುತ್ತ ಆರ್ಯದ್ರಾವಿಡರ ಸಂಸ್ಕೃತಿಗಳ ಸಮ್ಮೇಳನವಾಗಿ ಈಗಿನ ಹಿಂದೂ ಸಂಸ್ಕೃತಿಯುಂಟಾಗಿರುವುದು.

ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಕನ್ನಡದ ಸಂಸ್ಕೃತಿಗೆ ದ್ರಾವಿಡ ಸಂಸ್ಕೃತಿಯೇ ಮೂಲವಲ್ಲದೆ ಆರ್ಯರ ಸಂಸ್ಕೃತವು ಮೂಲವಲ್ಲವು. ನಮ್ಮ ಭಾಷೆಗೆ ಹೆಸರು ಕನ್ನಡವೆಂಬುದೇ ಮೊದಲಿದ್ದು ಸಂಸ್ಕೃತದ ಸಹವಾಸದಿಂದ ಕರ್ಣಾಟ, ಅಥವಾ ಕರ್ಣಾಟಕ ಎಂಬ ಹೆಸರು ಅನಂತರ ಬಂದುದೆಂದು ವಾಙ್ಮಯ ಶೋಧನೆಯಿಂದ ಗೊತ್ತಾಗುತ್ತದೆ. ಕನ್ನಡವನ್ನು ಮಾತಾಡುವುದರಿಂದ ನಮಗೆ ಕನ್ನಡಿಗರೆಂತಲೂ ನಮ್ಮ ನಾಡಿಗೆ ಕನ್ನಡನಾಡೆಂತಲೂ ಹೆಸರು ಬಂದಿರಬೇಕು. ಎರಡನೆಯ ಶತಮಾನದಲ್ಲಿ ಬರೆದುದಾದ "ಶಿಲಪ್ಪದಿಗಾರಂ" ಎಂಬ ತಮಿಳು ಕೃತಿಯಲ್ಲಿ ನಮ್ಮನ್ನು 'ಕನ್ನಡರ್' ಎಂದು ಉಲ್ಲೇಖಿಸಲಾಗಿದೆಯೆಂದು ಕನ್ನಡ ಕವಿಚರಿತಕಾರರಾದ ಆರ್. ನರಸಿಂಹಾಚಾರ್ಯರು ಹೇಳಿರುವರು. 'ಕನ್ನಡಿಗ' ಎಂಬುದು ಮುಂದೆ ಜಾತಿ ವಾಚಕವಾಗಿಯೂ ಕುಲವಾಚಕವಾಗಿಯೂ ವ್ಯವಹಾರದಲ್ಲಿ ಬಂದಂತೆ ಕಾಣುವುದು. ಶ್ರೀ. ಚೆನ್ನಬಸವೇಶ್ವರರು ತಮ್ಮ "ಕರಣ ಹಸುಗೆ" ಯಲ್ಲಿ ಕನ್ನಡ, ಕಮ್ಮೆ, ವಾಣಿಜ್ಯ ತಿಗುಳ ಎಂದು ತೆಂಕಣ ನಾಡಿನಲ್ಲಿ ನಾಲ್ಕು ಕುಲಗಳಿರುವವೆಂದೂ, ಶ್ರೀ. ನಿಜಗುಣ ಶಿವಯೋಗಿಗಳು ತಮ್ಮ ವಿವೇಕ ಚಿಂತಾಮಣಿಯಲ್ಲಿ ತಮ್ಮನಾಡಿನ ಜಾತಿಗಳನ್ನು ಹೇಳುವಾಗ "ಕನ್ನಡ, ಕಮ್ಮೆ, ತೆಲುಗು, ತಿಗುಳ" ಎಂದು ಹೇಳಿರುವರು. ಹದಿಮೂರನೆಯ ಶತಮಾನದ ಚೌಂಡರಸ ಕವಿಯು ತಾನು ಕನ್ನಡಿಗ ಕುಲದವನೆಂದು ಹೇಳಿಕೊಂಡಿರುವನು. ವಿಜಯನಗರದ ಅಮಾತ್ಯವರನಾದ ಲಕ್ಷ್ಮೀಧರನು ಕನ್ನಡಿಗ ಕುಲದವನೆಂಬ ಉಲ್ಲೇಖವಿದೆ. ಶಾಸನಗಳಲ್ಲಿ ಅನೇಕ ಬ್ರಾಹ್ಮಣರ ಮನೆಯ ಹೆಸರುಗಳು 'ಕನ್ನಡ' ಎಂದಿರುವುದೆಂದು ಶಾಸನ ಶೋಧಕರು ಹೇಳುತ್ತಾರೆ. ಇಷ್ಟೇ ಅಲ್ಲ: ಸರ್ವ ವಿದ್ಯಾಪಾರಂಗತರಾದ ವಿದ್ಯಾರಣ್ಯರ ಕುಲವು ಕನ್ನಡ ಕುಲವೆಂದು ಪ್ರತೀತಿಯನ್ನು ಪಡೆದಿದೆ. ಈ ಮಾತುಗಳಿಂದ ಕನ್ನಡಿಗರು ಪೂರ್ವಕಾಲದಿಂದಲೂ ತಮ್ಮ ಜನಾಂಗವನ್ನು ಕಟ್ಟಿಕೊಂಡು ತಮ್ಮದೇ ಒಂದು ವೈಶಿಷ್ಟ್ಯವನ್ನು ಕಾಪಾಡಿಕೊಂಡಿದ್ದರೆಂಬುದು ವಿದಿತವಾಗುತ್ತದೆ. ಒಳಭೇದಗಳೆಷ್ಟೋ ಇದ್ದರೂ ತಾವೆಲ್ಲರೂ ಕನ್ನಡ ಕುಲದವರು, ಒಂದೇ ನೆತ್ತರಿನವರು ಎಂದು ಹೇಳಿಕೊಳ್ಳುತ್ತಾ ಒಕ್ಕಟ್ಟಾಗಿದ್ದು ತಮ್ಮ ವೈಶಿಷ್ಟ್ಯದ ಹೆಮ್ಮೆಯಿಂದ ಹಿಗ್ಗುತ್ತಿರಬೇಕೆಂದು ಊಹಿಸಲವಕಾಶವಿದೆ. ಪೂರ್ವಿಕರ ಆ ತರದ ಹೆಮ್ಮೆಯು ಈಗ ನಮಗೆ ಬೇಕಾಗಿರುವುದಲ್ಲವೆ?

ಸಾಹಿತ್ಯಸಮ್ಮೇಲನದಲ್ಲಿ ಒಂದು ದಿನ ಮುಂಜಾನೆ ಕವಿಸಮ್ಮೇಲನವು ನಡೆಯಿತು. ಸದ್ಯದ ಕಾಲದಲ್ಲಿ ಹೆಸರಾದ ಕವಿಗಳೆನಿಸಿದ ಶ್ರೀ. ಕೆ. ವಿ. ಪುಟ್ಟಪ್ಪನವರು ಇದರ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈಗ ಹೊಸಮಾದರಿಯ ಕವಿತೆಗಳ ರಚನೆಯು ನಮ್ಮಲ್ಲಿ ಹೆಚ್ಚಾಗುತ್ತಿರುವದಷ್ಟೇ, ಕೆಲವರು ತಾವು ರಚಿಸಿದ ಇಂಥ

ಕವಿತೆಗಳನ್ನು ಸಮ್ಮೇಲನದಲ್ಲಿ ಅಂದು ತೋರಿಸಿದರು. ಅಧ್ಯಕ್ಷರು ಸಹ ತಾವು ಮಾಡಿದ "ಕುಮಾರವ್ಯಾಸ" "ಕಲ್ಕಿ" ಎಂಬೆರಡು ಕವನಗಳನ್ನು ಸಭಿಕರು ತಲೆ ದೂಗುವಂತೆ ರಸನೊಸರುವಂತೆ ಹಾವಭಾವಗಳೊಂದಿಗೆ ನುಡಿದರು. ಶ್ರೀಯುತ ಪುಟ್ಟಪ್ಪನವರ ಭಾಷಣವು ಕವಿಕಾವ್ಯಗಳ ಬಗ್ಗೆ ಹೊಸದೃಷ್ಟಿಕೋನವನ್ನುಂಟು ಮಾಡುವಂಥದೂ ವಿಚಾರಪೂರ್ಣವಾದದ್ದೂ ಇತ್ತು. ಇದು ಪ್ರಕಟವಾದ ಕೂಡಲೆ ಇದನ್ನು ನಮ್ಮ ವಾಚಕರಿಗಾಗಿ ನಾವು ಪ್ರಸಿದ್ಧಪಡಿಸಬೇಕೆಂದಿರುವೆವು.

ಈ ವರುಷದ ಸಾಹಿತ್ಯ ಸಮ್ಮೇಲನದಲ್ಲಿ ಶ್ರೀಯುತ ಸಂಪತ್ ಕುಮಾರಾ ಚಾರ್ಯ ಬಿ. ಎ., ಇವರು ಕುಮಾರವ್ಯಾಸನ ಭಾರತದೊಳಗಣ ಒಂದು ಸಂಧಿ ಯನ್ನು ಓದಿ ತೋರಿಸಿದರು. ಇದನ್ನು ಕೇಳಿ ಸಭಿಕರೆಲ್ಲ ಆನಂದಪರವಶರಾಗಿ ತಲೆದೂಗಿದರು.

ಕಾವ್ಯ ಕವಿತೆ ಎಂದಕೂಡಲೆ ಉತ್ತರಕರ್ನಾಟಕದಲ್ಲಿ ಛಂದಸ್ಸು, ವ್ಯಾಕ ರಣ, ಅಲಂಕಾರ, ಅನ್ವಯಾರ್ಥ ಇವೇ ನಮ್ಮ ಮನಸಿನಲ್ಲಿ ಬರುವವು. ಅವು ಗಳ ಭಾವ, ರಸ ಮೊದಲಾದದ್ದರ ಕಲ್ಪನೆಯು ನಮ್ಮಲ್ಲಿ ತಾವಾಗಿ ಉಂಟಾ ಗುವದಿಲ್ಲ. ಈ ಮೂಲಕ ಕಾವ್ಯಗಳ ಮೂಲ ಉದ್ದೇಶವನ್ನು ನಾವು ಮರೆತು ಬಿಟ್ಟಿದ್ದೇವೆ. ನಮ್ಮಲ್ಲಿ ಕಾವ್ಯಗಳನ್ನು ಸುಶ್ರಾವ್ಯವಾಗಿಯೂ ರಸಭಾವಗಳು ಒಸರುವಂತೆಯೂ ಚಿತ್ತವು ತಲ್ಲೀನವಾಗುವಂತೆಯೂ ಓದುವ ಹಾಗು ಹಾಡುವ ಪರಿಪಾಠವಿಲ್ಲ. ಇದೊಂದು ಶೋಚನೀಯವಾದ ಸಂಗತಿಯು. ಕಾವ್ಯದ ಮುಖ್ಯ ಉದ್ದೇಶವು ಆನಂದವನ್ನುಂಟುಮಾಡುವದು. ಕಾವ್ಯಗಳಲ್ಲಿರುವ ಪದ ವಿನ್ಯಾಸವು ಮಧುರವಾಗಿರತಕ್ಕದ್ದು; ಕಿವಿಗೆ ಇಂಪಾಗಿರತಕ್ಕದ್ದು. ಅದರೊಳ ಗಿನ ಕಥಾಪ್ರಸಂಗಗಳು ರಸಭರಿತವಾಗಿರಬೇಕು. ಇವುಗಳನ್ನು ಓದುವ ಕ್ರಮ ದಿಂದ ಕೇಳುವವರಲ್ಲಿ ಆಯಾ ರಸಗಳು ಪ್ರಬಲವಾಗಿ ಆನಂದದಲ್ಲಿ ಪರಿಣಮಿಸ ಬೇಕು. ಹೀಗಂದಬಳಿಕ ಅನ್ವಯ, ಅರ್ಥ, ವ್ಯಾಕರಣ, ಛಂದಸ್ಸುಗಳನು ಕುರಿತು ವ್ಯಾಖ್ಯಾನಗಳನ್ನು ಹೇಳಿ ಕವಿತೆಯ ಉದ್ದೇಶವನ್ನು ಸಾರ್ಥಕಗೊಳಿಸು ವದು ಹ್ಯಾಗೆ ಸಾಧಿಸಬೇಕು ?

ನಮ್ಮ ಶಾಲೆಗಳಲ್ಲಿ ಕವಿತೆಯನ್ನು ಕಲಿಸುವ ಉದ್ದೇಶದಲ್ಲಿಯೂ ಪದ್ಧತಿ ಗಳಲ್ಲಿಯೂ ಹೆಚ್ಚುಕಡಿಮೆಗಳಾಗುವದು ಅವಶ್ಯಕವೆಂಬ ಬಗ್ಗೆ ನಾವು ನಮ್ಮ ವಾಚಕರ ಮುಂದೆ ನಮ್ಮ ಅಭಿಪ್ರಾಯಗಳನ್ನು ಈ ಮೊದಲೇ ತಿಳಿಸಿರುವೆವು. ದಕ್ಷಿಣ ಕರ್ನಾಟಕದಲ್ಲಿ ಈ ಬಗೆಯ ಕವಿತಾಪಾಠಗಳಿಲ್ಲವೆಂದಲ್ಲ; ಪಂಡಿತರು

ಕಾವ್ಯಗಳನ್ನು ಅಭ್ಯಾಸಿಸುವಾಗ ಅರ್ಥ, ಅಲಂಕಾರ, ವ್ಯಾಕರಣ, ಛಂದಸ್ಸು ಮೊದಲಾದ ಅವುಗಳ ಅಂಗೋಪಾಂಗಗಳಾದ ಲಕ್ಷಣಗಳನ್ನು ಚೆನ್ನಾಗಿ ವಿಮರ್ಶಿಸುವದುಂಟು. ಶಾಲೆಗಳಲ್ಲಿಯೂ ಅದರ ಅರ್ಥವನ್ನು ಹುಡುಗರಿಂದ ಗಟ್ಟಿಮಾಡಿಸುವದುಂಟು. ಆದರೆ ಇಷ್ಟರಿಂದಲೇ ಸಮಾಧಾನಹೊಂದದೆ, ಅವರು ಅಲ್ಲಿ ಕಾವ್ಯಗಳನ್ನು ಭಾವಬೋಧವಾಗುವಂತೆ ಅನ್ನಲಿಕ್ಕೆ ಅಭ್ಯಾಸಿಸುವದುಂಟು. ಈ ಬಗೆಯ ಕಾವ್ಯಪಠನಾಭ್ಯಾಸಕ್ಕೆ ಇತ್ತಲಾಗಿ ಅಲ್ಲಿ ಉತ್ತೇಜನವು ಹೆಚ್ಚಾಗಿದೆ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕನ್ನಡಭಾರತ, ಲಕ್ಷ್ಮೀಶನಭಾರತ. ಕನ್ನಡ ರಾಮಾಯಣ ಮೊದಲಾದ ಕಾವ್ಯಗಳನ್ನು ಸುಶ್ರಾವ್ಯವಾಗಿ ಓದುವ ಕಲೆಯನ್ನು ಅಭ್ಯಾಸಮಾಡುವರು. ಮನೆತನದ ಹೆಣ್ಣುಮಕ್ಕಳೂ ಇವುಗಳನ್ನು ಅಲ್ಲಿ ಭಾವ ಬೋಧಕವಾಗಿ ಹಾಡುವದುಂಟು. ಈ ಪರಿಪಾಠವು ಉತ್ತರಕರ್ನಾಟಕದಲ್ಲಿ ತೀರ ಅಪರೂಪವಾಗಿದೆ ಎಂದು ವಿಷಾದಿಸಬೇಕಾಗಿದೆ.

ಹಿಂದಿನಕಾಲದಲ್ಲಿ ನಮ್ಮ ಹಳ್ಳಿಗಳಲ್ಲಿ ಈ ಪರಿಪಾಠವು ವಿಶೇಷವಾಗಿ ಇತ್ತೆಂದು ಬಲ್ಲವರು ಹೇಳುವರು. ನಮ್ಮಲ್ಲಿ ಸಾಲೆ ಕಲಿಯದ ಎಷ್ಟೋ ಗಂಡಸರೂ ಹೆಂಗಸರೂ ನಮ್ಮ ಪುರಾಣ ಗ್ರಂಥಗಳ ಕಥೆಗಳನ್ನೂ ಅವುಗಳಲ್ಲಿ ವರ್ಣಿತವಾದ ಪ್ರಸಂಗಗಳನ್ನೂ (ನಮಗಿಂತ ಚೆನ್ನಾಗಿ) ಅರಿತಿರುವರಷ್ಟೇ. ಪುರಾಣ ಶ್ರವಣ, ಹರಿಕೀರ್ತನ ಶ್ರವಣ, ದೊಡ್ಡಾಟ ಮುಂತಾದವುಗಳ ದರ್ಶನ ಇವುಗಳಿಂದ ಅವರಿಗೆ ಈ ಜ್ಞಾನವಾಗಿರುವದು ನಿಜವು. ಆದರೆ ನಮ್ಮ ಕವೀಶ್ವರರು ರಚಿಸಿದ ಕಾವ್ಯಗಳನ್ನು ಸಹ ಕೇಳಿ ಕೇಳಿ, ಸಮಾಧಾನ ಹೊಂದಿ, ಸಂತುಷ್ಟರಾಗಿ ಸುಶಿಕ್ಷಣವನ್ನು ಅವರು ಪಡೆಯುತ್ತಿದ್ದರು.

ಆ ಕಾಲದಲ್ಲಿ ಈ ಕವಿತಾಪಠಣದಲ್ಲಿ ಎರಡು ಪ್ರಕಾರಗಳಿದ್ದವೆಂದು ಹೇಳುವರು. ಓದುಬರಹಗಳ ಗಂಧವನ್ನರಿಯದವರಿಗಾಗಿ ಈ ಕಾವ್ಯಗಳನ್ನು ಓದುವವರು ಮೊದಲು ಧಾಟಿಗೆ ಸರಿಯಾಗಿ ಕಥಾ ಪ್ರಸಂಗಗಳ ಒಂದೊಂದು ಪದ್ಯವನ್ನು ಓದುತ್ತಿದ್ದರು. ಪ್ರತಿಯೊಂದು ಪದ್ಯದ ಅರ್ಥವನ್ನು (ಸಾರಾಂಶವನ್ನು) ಹಾವಭಾವದೊಂದಿಗೆ ತಿಳಿಸಲಿಕ್ಕಾಗಿ ಇನ್ನೊಬ್ಬರು ಬಲ್ಲವರು ಇವರಿಗೆ ನೆರವಾಗುತ್ತಿದ್ದರು. ಇವರಿಗೆ ಗಮಕಿಗಳೆಂಬ ಹೆಸರು- ಸೂಕ್ತಗಳಿಗೆ ಭಾಷ್ಯಗಳು ಹ್ಯಾಗೋ ಹಾಗೆ ಕವಿತೆಗಳಿಗೆ ಗಮಕಿಗಳ ನೆರವು ಅವಶ್ಯವಾದದ್ದು. ಕವಿಯ ಆಶಯವನ್ನೂ ಕವಿತೆಯ ಭಾಗವನ್ನೂ ಕಥಾಪ್ರಸಂಗದ ರಸವನ್ನೂ ಕೇಳುವವರಿಗೆ ಸ್ಪಷ್ಟವಾಗುವಂತೆ ಮಾಡುವದೇ ಗಮಕಿಯ ಕೆಲಸವು. ಓದುಬರಹಗಳನ್ನರಿತವರಿಗೆ ಇಷ್ಟು ವಿವರವಾದ ಅರ್ಥ ವಿವೇಚನೆಯು ಬೇಕಾಗುವದಿಲ್ಲ. ಗಮಕಿಗಳು

ಅವಶ್ಯವಿದ್ದಲ್ಲಿ ಕಥಾ ಸಂದರ್ಭವನ್ನು ಸಂಕ್ಷೇಪದಲ್ಲಿ ಸೂಚಿಸಿ, ಪ್ರತಿಯೊಂದು ಕವಿತೆಯಲ್ಲಿ ಅವಶ್ಯಕಂಡಲ್ಲಿ ಮಾತ್ರ ಒಂದೆರಡು ಶಬ್ದಗಳಿಂದ ಕೇಳುವವರ ಲಕ್ಷ್ಯವನ್ನು ಕವಿಯ ಇಂಗಿತದ ಕಡೆಗೆ ಎಳೆದು, ಪದ್ಯಗಳನ್ನು ಧಾಟಿಯಿಂದ ಅರ್ಥಬೋಧವಾಗುವಂತೆ ಹಾವಭಾವಗಳೊಂದಿಗೆ ಅನ್ನುವದುಂಟು. ಈ ಬಗೆಯ ಕವಿತಾಪಠಣದಿಂದಲೇ ಕಾವ್ಯ ರಸಾಸ್ವಾದವು ಸಾಮಾನ್ಯಜನರಿಗೂ ಲಭಿಸುವದು.

ಈ ಕಲೆಯು ನಮ್ಮಲ್ಲಿ ಇತ್ತಲಾಗಿ ಇಲ್ಲದಾಗಿದೆ. ಲಕ್ಷ್ಮೀಶನು ವಾಗ್ದೇವಿಯನ್ನು ಕುರಿತು ಏನೆಂದು ಪ್ರಾರ್ಥಿಸಿರುವನೆಂಬದನ್ನು ನಾವು ನೋಡಬಹುದು. ತಾಯೆ, ಕಾವ್ಯಮಿದು ಭುವನದೊಳ್ ಸಕಲ ಜನರಿಂದ ಸುಶ್ರಾವ್ಯಮಪ್ಪಂತೆ ಎನ್ನ ವದನಾಬ್ಜದಲ್ಲಿ ನಿನೇ ವ್ಯಾಪಿಸಿದೀರ್ ಅಮಲಸುಮತಿಯಂ ಎನಗೆ ತಾ" ಎಂದು ಆತನು ಸರಸ್ವತಿಯನ್ನು ಬೇಡಿಕೊಂಡಿರುವನು "ವೀಣೆಯಿಂ ಗಾನವಂ ನುಡಿಸುವಂದದೊಳು ಎನ್ನ ವಾಣಿಯಿಂ ಕವಿತೆಯಂ ಪೇಳಿಸಿದಂ" ಎಂದು ಹೊಗಳಿಕೊಂಡಿರುವನು. ನಾವು ಕವಿತಾ ಪಾಠವನ್ನು ಕಲಿಸುವಾಗ ಈ ಮಾತನ್ನು ಮರೆಯಲಾಗದು. ನಮ್ಮ ಸಾಲೆಗಳಲ್ಲಿ ಈ ಕಲೆಯ ಅಭ್ಯಾಸವು ಆರಂಭವಾಯಿತೆಂದರೆ ಇದು ಜನ ಸಾಮಾನ್ಯರಲ್ಲಿ ತೀವ್ರ ಹರಡಿಕೊಳ್ಳುವದೆಂದು ನಮಗೆ ಭರವಸೆಯುಂಟು. ಆದ್ದರಿಂದಲೇ ಕವಿತೆಯ ಪಾಠವನ್ನು ಕಲಿಸುವ ನಮ್ಮ ಉದ್ದೇಶಗಳು ಬದಲಾಗುವದು ಅವಶ್ಯವಿರುವದೆಂದು ನಾವು ಒತ್ತಿ ಹೇಳುವೆವು.

ಪ್ರತಿಯೊಂದು ಇಯತ್ತೆಯ ಅಭ್ಯಾಸಪತ್ರಿಕೆಯಲ್ಲಿ ಕವಿತೆಯನ್ನಿಂತಿಷ್ಟು ಪಂಕ್ತಿಗಳನ್ನು ಪಾಠ ಅನ್ನಲಿಕ್ಕೆ ಬರಬೇಕೆಂದು ನಿರ್ಬಂಧವಿರುವದಷ್ಟೇ. ಇದರ ಉದ್ದೇಶವನ್ನೂ ಅರ್ಥವನ್ನೂ ನಾವು ಸರಿಯಾಗಿ ತಿಳಿದುಕೊಂಡಿಲ್ಲವೆಂದು ನಮಗೆ ತೋರುತ್ತದೆ. ಕವಿತೆಯನ್ನು ಪಾಠಮಾಡಿಸುವದರಿಂದ ಸ್ಮರಣಶಕ್ತಿಯು ಬಲ ಪಡುತ್ತದೆಂದು ಹಲವರು ನಂಬುವದುಂಟು. ಇದು ತಪ್ಪಾದದ್ದು. ಮೇಲಾದ ಕವಿತೆಯು ವಾಙ್ಮಯದ ಕೆನೆಯು. ಅದನ್ನು ಸದಾ ಸವಿಯುವದರಿಂದ ಮನೋಭಾವಗಳೂ ಮನಸ್ಸೂ ಪ್ರಸನ್ನವಾಗಿರುವವು. ಇಂಥ ಉತ್ತಮ ಕವಿತೆಗಳನ್ನೇ ನಾವು ಹುಡುಗರಿಗೆ ಪಾಠಮಾಡಲಿಕ್ಕೆ ಹೇಳತಕ್ಕದ್ದು.

ಆದರೆ ಪ್ರತಿಯೊಂದು ಮೇಲ್ತರದ ಕವಿತೆಯು ಪ್ರತಿಯೊಬ್ಬನಿಗೆ ಅಷ್ಟೇ ರುಚಿಸುವದೆಂತಲ್ಲ. ಭಿನ್ನರುಚಿಃ ಲೋಕಃ ಎಂಬ ಸಂಸ್ಕೃತ ನಾಣ್ಣುಡಿಯು ಅಕ್ಷರಶಃ ನಿಜವಾದದ್ದು. ಭಿನ್ನ ಪ್ರಕೃತಿಃ ಲೋಕಃ ಎಂದೂ ಒಂದು ಸಂಸ್ಕೃತ ಗಾದೆಯುಂಟು. ಜನರ ಪ್ರಕೃತಿಯಲ್ಲಿ ಸ್ವಭಾವತಃ ಭೇದಗಳುಳ್ಳ ಮೂಲಕವೇ

ಅವರ ಸೇರಿಕೆ ಬೇಡಿಕೆಗಳಲ್ಲಿಯೂ ಹೆಚ್ಚುಕಡಿಮೆಗಳು ಉಂಟಾಗುತ್ತವೆ. ಅಂದರೆ ಕೆಲವು ಹುಡುಗರಿಗೆ ಒಂದು ಬಗೆಯ ಕವಿತೆಗಳು ರುಚಿಸಿದರೆ ಇತರರಿಗೆ ಬೇರೆಬಗೆಯ ಕವಿತೆಗಳು ಸೇರುತ್ತವೆ. ಅದ್ದರಿಂದ ನಾವು ನಿರ್ದಿಷ್ಟವಾದ ಇಂತಿಷ್ಟು ಕವಿತೆಗಳ ಇಂತಿಷ್ಟು ಪಂಕ್ತಿಗಳನ್ನು ಪಾಠಮಾಡಬೇಕೆಂದು ನಿರ್ಬಂಧಪಡಿಸುವದಕ್ಕಿಂತ ಪ್ರತಿಯೊಂದು ಇಯತ್ತೆಯಲ್ಲಿ ಹುಡುಗರ ಮನೋಭಾವಗಳನ್ನು ಚೇತರಿಸಿದಬಳಿಕ ಬೇಕಾದ ಇಂತಿಷ್ಟು ಕವಿತೆಗಳನ್ನು ಪಾಠಮಾಡಬೇಕೆಂದು ನಿಯಮಿಸುವದು ಉಚಿತವು.

ನಮ್ಮ ಸಾಲೆಗಳಲ್ಲಿ ಕವಿತೆಗಳನ್ನು ಪಾಠಮಾಡಿಸುವಾಗ ಅದರ ದಾಟಿಯೊಂದಕ್ಕೆ ಮಾತ್ರ ನಾವು ವಿಪರೀತ ಮಹತ್ವವನ್ನು ಕೊಡುವದುಂಟು. ಧಾಟಿಯಿಲ್ಲದೆ ಕವಿತೆಯಿಲ್ಲವೆಂಬದನ್ನು ನಾವು ಒಪ್ಪಿಕೊಳ್ಳುವೆವು. ಆದರೆ ಧಾಟಿ ಅಂದರೆ ಸ್ವರ ಮಿಲಿತವಾದ ನಾದದೊಡನ ಅರ್ಥವೂ ಬೋಧವಾಗುವಂತೆ ಕವಿತೆಯನ್ನು ಹಾಡಿದರೆ ಮಾತ್ರ ಅವರ ಉದ್ದೇಶವು ಸಫಲವಾಗುವದೆಂಬದನ್ನು ನಾವು ಮರೆಯಲಾಗದು. ಆದ್ದರಿಂದ ನಮ್ಮ ಸಾಲೆಗಳಲ್ಲಿ ಕವಿತೆಯನ್ನುವ ನಿರಸವಾದ ಪದ್ಧತಿಯನ್ನು ನಾವು ಬಿಡಲಿಕ್ಕೆಬೇಕು. ಕವಿತೆಯಲ್ಲಿರುವ ರಸಭಾವಗಳು ಕೇಳುವವರಲ್ಲಿ ಮೂಡುವಂತೆ ಕವಿತೆಗಳನ್ನು ಓದುವ ಹಾಗು ಅನ್ನುವ ಕಲೆಯಕಡೆಗೆ ನಾವು ಇನ್ನು ಮುಂದಾದರೂ ಲಕ್ಷ್ಯಕೊಡಲಿಕ್ಕೇಬೇಕು. ಹೀಗೆ ಮಾಡುವದರಿಂದ ಕವಿತೆಗಳ ನಿಜವಾದ ಉದ್ದೇಶವನ್ನು ನಾವು ಹುಡುಗರ ಮುಂದೆ ಇಟ್ಟಂತಾಗುವದು. ಮೇಲಾಗಿ, ಕವಿತೆಗಳನ್ನು ತಾವು ತಿಳಿದುಕೊಳ್ಳುವದಲ್ಲದೆ ಅದರ ಸವಿಯನ್ನು ಇತರರಿಗೂ ತಿಳಿಸುವ ಹುರುಪು ಹುಡುಗರಲ್ಲಿ ಹುಟ್ಟತಕ್ಕದ್ದು.

ನಾವು ಸಾಲೆಗಳಲ್ಲಿ ಸಣ್ಣಹುಡುಗರಿಂದ ಸಂಭಾಷಣಗಳನ್ನು ಪಾಠಮಾಡಿಸಿ ತಾಯ್ತಂದೆಪಾಲಕರ ಸಭೆಗಳಲ್ಲಿಯೂದೊಡ್ಡಮನುಷ್ಯರು ಸಾಲೆಯನ್ನುನೋಡಲಿಕ್ಕೆ ಬಂದ ಸಮಯಗಳಲ್ಲಿಯೂ ಅವರ ಮುಂದೆ ಇವುಗಳನ್ನು ಹುಡುಗರಿಂದ ಮಾಡಿಸುವದುಂಟು. ಆಯಾ ವಿಷಯಗಳ ಬಗ್ಗೆ ಹುಡುಗರಿಗೆ ತಿಳಿಯತಕ್ಕವಾದ ಮಹತ್ವದ ಮಾತುಗಳು ಈ ಸಂಭಾಷಣಗಳಲ್ಲಿ ಬಂದಿರುವಂತೆ ಇವುಗಳನ್ನು ರಚಿಸಿರುವದುಂಟು. ಇಂಥ ಸಂಭಾಷಣಗಳಿಂದ ಅಲ್ಪಸ್ವಲ್ಪ ಲಾಭವಿರುವದೆಂಬದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಸಣ್ಣ ದೊಡ್ಡ ಕಥಾಪ್ರಸಂಗಗಳನ್ನೊಳಕೊಂಡ ಸುಲಭವಾದ ಕವಿ. ಗಳನ್ನು ಹುಡುಗರಿಂದ ಭಾವಭೋದವಾಗುವಂತೆಯೂ ಮನಸ್ಸು ತಲ್ಲೀನವಾಗುವಂತೆಯೂ ಅನ್ನಿಸುವದರಿಂದ ಇವನ್ನುಕೇಳುವ ತಾಯಿತಂದೆಗಳಿಗೂ ದೊಡ್ಡಮನುಷ್ಯರಿಗೂ ಸಾಲೆಯಲ್ಲಿ ನಡೆದಿರುವ ಶಿಕ್ಷಣದ ಬಗ್ಗೆಯೂ ತಮ್ಮ ಮಕ್ಕಳು ಪಡೆಯುತ್ತಿ

ರುವ ಜಾಣ್ಮೆಯ ಬಗ್ಗೆಯೂ ಅಧಿಕವಾದ ಸಂತೋಷವು ಉಂಟಾಗುವದೆಂಬದರಲ್ಲಿ ಸಂಶಯುವಿಲ್ಲ.

ಆದರೆ ಹೀಗೆ ಕವಿತೆಗಳನ್ನು ಕಲಿಸಲಿಕ್ಕೆ ತಕ್ಕ ಸುಲಭವಾದ ಅರ್ಥವುಳ್ಳ ಸುಶ್ರಾವ್ಯವಾದ ಸುಲಭ ಧಾಟಿಯುಳ್ಳ ಕವಿತೆಗಳನ್ನು ಆರಿಸಿಡುವದು ಅವಶ್ಯವಾದದ್ದು. ಇದು ಶಿಕ್ಷಕರ ಕೆಲಸವು. ಸ್ವಲ್ಪ ಶ್ರಮತೆಗೆದುಕೊಂಡರೆ ಕನ್ನಡ ರಾಮಾಯಣ ಭಾರತಾದಿ ಉದ್ಗ್ರಂಥಗಳಿಂದ ಸಂಕ್ಷೇಪವಾಗಿ ಆರಿಸಿ ತೆಗೆದ ಕೆಲವು ಪದ್ಯಗಳಿಂದ ಇಂಥ ಕಥಾಪ್ರಸಂಗಗಳನ್ನು ಒಟ್ಟುಗೂಡಿಸಬಹುದು. ತೀರ ಸುಲಭ ಶೈಲಿಯಲ್ಲಿ ಸಾಮಾನ್ಯಜನರಿಗಾಗಿ ಬರೆದ ಹಲವು ಕವಿತೆಗಳು ನಮ್ಮ ಸಾಹಿತ್ಯದಲ್ಲಿ ಇರುವವು. ಇವುಗಳಲ್ಲಿ ಸಭೆ ಸಮ್ಮೇಲನಗಳಲ್ಲಿ ಪರಿಣಾಮಕರವಾಗುವಂತೆ ಸ್ವಲ್ಪ ವೇಳೆಯಲ್ಲಿ ಹುಡುಗರಿಂದ ಅನಿಸಬಹುದಾದಂಥವುಗಳನ್ನು ಆರಿಸಿ ತೆಗೆಯಬಹುದು.

ಈ ರೀತಿಯಾಗಿ ಶಿಕ್ಷಕರು ಪ್ರಯತ್ನಿಸಿದರೆ ಅಲ್ಪಕಾಲದಲ್ಲಿಯೇ ನಮ್ಮ ಶಾಲೆಗಳಲ್ಲಿ ಕವಿತೆ ಕಲಿಸುವ ಉದ್ದೇಶದಲ್ಲಿಯೂ ಕ್ರಮದಲ್ಲಿಯೂ ತಕ್ಕ ಬದಲಾವಣೆಯಾಗಿ ಕವಿತೆಗಳ ಯೋಗ್ಯ ಉಪಯೋಗವು ನಮ್ಮ ಚಿಕ್ಕಮಕ್ಕಳಿಗೂ ಜನತೆಗೂ ಲಭಿಸುವದೆಂದು ನಾವು ನಂಬಿದ್ದೇವೆ.

" ಅಸ್ಪೃಶ್ಯನ ಗೋಳು "

ಲೇಖಕರು:— ವ್ಹಿ. ಡಿ. ಪಟ್ಟಣಶೆಟ್ಟಿ. ಸ್ಕೂ. ಮಾ. ಹೊನ್ನುಟಗಿ.

॥ ಭಾ. ಷ. ॥

ಸತತ ಭಜಿಸುವೆ ಪಾವನಾತ್ಮನೆ ।
ಪತಿತನಾಗಿಯೆ ಇರಲು ಬಯಸದೆ ।
ಹಿತದಿ ಬೇಡುವೆ ಮನುಜ ಜನ್ಮದ ಮಾನುಷತ್ವವನು ॥

ಅತುಲ ಪ್ರೀತಿಯು ಮಾಡಿ ನನ್ನಯ ।
ಕಥೆಯ ತಿದ್ದಿ ಸ್ಪೃಶ್ಯರೆಲ್ಲರು ।
ಪತಿತಪಾವನ ಮಾಡಲೋಸುಗ ಬುದ್ಧಿಯನು ನೀಡೈ ॥ ೧ ॥

ಮನುಜ ಜನ್ಮದಿ ಜನ್ಮಿಸಿದರೂ ।
ಮನಸಿಜಾರಿಯು ನನ್ನ ನೀಗಲು ।
ಮುನಿಸುಗೊಳ್ವರು ನೋಡಿ ನೋಡಿ ನ್ಯಾಯವೇನಯ್ಯಾ ॥
ಕನಸುಬಿದ್ದರು ಹೇಸಿಗೊಳ್ವರು ।
ಎನಿಸಲೊಲ್ಲದು ಮನಕೆ ಝಳ ಝಳ ।
ಎನಿಸು ಕಾಲವ ಕಳೆಯಲಯ್ಯಾ ಹೇಯತನದಲ್ಲಿ ॥ ೨ ॥

ಏಸುಕಾಲದ ಹಿಂದೆ ಮಾಡಿದ ।
ಹೇಸಿ ಕೆಲಸದ ಕ್ರೂರ ಪಾಪದ ।
ರಾಶಿತೊಳೆಯದೆ ಹೋಗದೇನೈ ದುರಿತವೆಂತಹದು ॥
ಗಾಸಿಗೊಳ್ಳುವೆ ಪುರದ ಬಾಹಿರ ।
ವಾಸಿಯಾಗಿರುತಿದ್ದು ಜನುಮವು ।
ಮೀಸಲಾಗದೆ ಉಳಿಯಿತೆಂದು ಕ್ಲೇಶಪಡುತಿಹೆನು ॥ ೩ ॥

ಕ್ಷೇತ್ರ ತೀರ್ಥಗಳಲ್ಲಿ ನಾನು ಅ ।
ಪಾತ್ರನಾಗಿಯೆ ಉಳಿದು ನಿನ್ನಯ ।
ಗಾತ್ರನೋಡೆನು ದೇವ ಮಂದಿರದಲ್ಲಿ ಅನವರತ ॥
ಪಾತ್ರೆತುಂಬಲು ಹೋಗಲೆನ್ನಯ ।
ಗೋತ್ರಕೇಳುತ ನೀರನೆಡೆಯಲಿ ।
ಜಾತ್ರೆಯೊಳಗಣ ಶುನಕನಂದದಿ ದೂರ ಸರಿಸುವರು ॥ ೪ ॥

ಸತ್ತ ದನಕರ ಪುರದ ಬಾಹಿರ ।
ಹೊತ್ತುಕೊಂಡೊಯ್ದವನು ಸುಲಿಯುತ ।
ಮತ್ತೆ ಚರ್ಮದ ಪಾದರಕ್ಷೆಯ ಮಾಡಿಕೊಡುತಿದ್ದು ॥
ಸತ್ತ ಸುದ್ದಿಯ ಒಯ್ಯಬೇಕೈ ।
ಹೆತ್ತ ಶಿಶುವನು ಸರಿಸಿಯಾದರು ।
ಮಿತ್ತು ನನ್ನನು ಒಯ್ಯದಯ್ಯಾ ಸುಕೃತವೆಂತಹದು ॥ ೫ ॥

ಮಾರಿ ಮುಸಣಿಯು ದ್ಯಾಮಿ ದುರಗಿಯು ।
ಕೋರಿದರ್ಥವ ಕೊಡುವರೆಂದು ।
ಆರ್ಯ ಧರ್ಮದ ತಿರುಳನರಿಯದೆ ಅಂಧ ಶ್ರದ್ಧೆಯೊಳು ॥

ಕ್ರೂರ ಕೃತ್ಯವ ಮಾಡಿ ಮಾಡಿಸು ।
ಘೋರಪಾಪವ ಗಳಿಸಿ ನಿನ್ನ ಆ ।
ಪಾಉ ಮಹಿಮೆಯ ನರಿಯದಂತಹ ಮೂರ್ಖನಾಗಿಹೆನು ॥ ೬ ॥

ಶಿಕ್ಷಣಿಲ್ಲದೆ ನಾ ನಿರಕ್ಷರ ।
ಕುಕ್ಷಿಯಾಗಲು ನಂಬಿದವರನು ।
ರಕ್ಷಣೆಯ ಮಾಡದಲೆ ಅರಹೊಟ್ಟೆಯಲಿ ಇರುತಿಹೆನು ॥

ಪಕ್ಷಪಾತವ ಮಾಡಬೇಡೈ ।
ಮಕ್ಷಿಕಾತೆರನಾಗಿ ನನ್ನನು ।
ಈಕ್ಷಿಸುತ್ತಿಹ ಜನರ ಮನ ವ್ಯಲಿಗೆಯ ತೊಳೆಯಯ್ಯಾ ॥ ೭ ॥

ನನ್ನ ಬಾಂಧವರೆಲ್ಲ ಅನುದಿನ ।
ಬನ್ನ ಬಡುತೀ ತೆರದಿ ಚರಿಸದೆ ।
ಅನ್ಯ ಧರ್ಮದ ದೀಕ್ಷೆಯನು ಪಡೆಯುತ್ತಲಿರುತಿಹರು ॥

ಕುನ್ನಿ ಮಾನವರೆಲ್ಲ ಈ ಪರಿ ।
ನನ್ನ ಧರ್ಮವತೊರೆದು ಪೋಗುವ ।
ದನ್ನು ನಿಲ್ಲಿಸಿ ಪೊರೆಯೊ ನಮ್ಮೀ ಹಿಂದು ಧರ್ಮವನು ॥ ೮ ॥

ಪುರದ ಜನತೆಯ ಸೇವಕನು ನಾ ।
ನಿರಡೆ ಸರ್ವರ ಸೇವೆಮಾಡುತ ।
ಮರುಗುತಿರುವೆನು ಹೊಟ್ಟೆಗಿಲ್ಲದೆ ಬಟ್ಟೆಗೇಡಾಗಿ ॥

ಬರಿಯಮೈಯನು ಉಗ್ರ ಸೆಕೆ ಚಳಿ ।
ಗೆರೆದು ಬಿಟ್ಟಿಯಹೊರತು ನಾನಾ ।
ಪರಿಯ ಕಷ್ಟವ ಸೋಸುತಿರುವೆನು ಸರ್ವಕಾಲದೊಳು ॥ ೯

ಉಚ್ಚವರ್ಣದ ಹಿಂದುಗಳು ತಾವ್ ।
ಅಚ್ಚ ಹಿಂದುಗಳಾದ ನಮ್ಮಯ ।
ತುಚ್ಛಮಾಡುತ ಕೀಳನೆಂದತಿ ಭೇದಗೈಯುವರು ॥

ಕೆಚ್ಚೆದೆಯ ಬಡದಲ್ಲಿ ರಮಿಸದೆ ।
ಬೆಚ್ಚನಾದೆದೆಯಿಂದ ಕೊರಗುತ ।
ಮುಚ್ಚುತಿರುವೆವು ಕಣ್ಣು ಎರಡನು ಸುಕೃತ ಹಳಿಯುತ್ತಾ ॥ ೧೦

ನಮ್ಮ ಅಜ್ಞಾನಾಂಧಕಾರವು ।
ನಮ್ಮ ಸಾಹಸದಿಂದ ಗತಿಸದು ।
ನೆಮ್ಮದಿಯ ಗೈ ದೇವ ನಮ್ಮವರೊಳಗೆ ಅನವರತ ॥
ನಮ್ಮ ಭಾಗ್ಯವು ಅವರೊಳಡಗಿದೆ ।
ನಮ್ಮ ದುಃಖದ ರಿಪುಗಳವರೇ ।
ನಮ್ಮ ಘನತರ ಮೇಲ್ಮೆಯವರನು ಕೂಡಿಕೊಂಡಿಹುದು ॥ ೧೧ ॥

ರಾಜ್ಯವಾಳುವ ರಾಜರೆಲ್ಲರು ।
ರಾಜ್ಯನೀತಿಯ ಬಲ್ಲ ಜಾಣರು ।
ರಾಜ್ಯಬೇಡುವ ದೇಶಭಕ್ತರು ನಮ್ಮ ಸಲುವಾಗಿ ॥
ಪೂಜ್ಯ ಬುದ್ಧಿಯ ತಾಳ್ದು ಹರ್ನಿಶಿ ।
ತ್ಯಾಜ್ಯವಾದೀ ಭಾವವಡಗಿಸಿ ।
ಪೂಜೆಗೊಂಬುವದನ್ನು ನೋಡುತ ತೋಷಪಡುತಿಹೆನು ॥ ೧೨ ॥

ಏಳುಕೋಟಿಯ ಸಂಖ್ಯೆ ಮೀರಿದ ।
ಕೀಳರೆಂಬಭಿಧಾನ ಧರಿಸಿದ ।
ಕಾಳದಾನವರಂತೆ ಚರಿಸುತ್ತಿರುವ ನಮ್ಮನ್ನು ।
ಪಾಳುಗೆಡವದೆ ಹಿಂದು ಧರ್ಮದ ।
ಕೀಲು ಬಿಗಿಯುವ್ವಂತೆ ಮಾಡುವ ।
ಮೇಲುಬುದ್ಧಿಯ ಕೊಟ್ಟು ರಕ್ಷಿಸು ಉಚ್ಚವರ್ಣವನು ॥ ೧೩ ॥

ಮಾನಸಶಾಸ್ತ್ರವು

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

(೩) ಸಹಚರ್ಯದ ನೇಮದಿಂದ ಆಯಾ ಉತ್ತೇಜಕದಿಂದ ಉಂಟಾಗುವ ಸುಖದುಃಖಗಳು ತಾಯಿಯ ಧ್ವನಿಯನ್ನು ಕೇಳಿದಕೂಡಲೆ ಕೂಸು ಅವಳ ಮೋರೆಯ ಕಡೆಗೆ ನೋಡಹತ್ತುವದು. ಯಾಕಂದರೆ ತಾಯಿಯು ತನಗೆ ಮೊಲೆಯುಣಿಸುವಳೆಂಬ ಆನಂದದಾಯಕ ಕಲ್ಪನೆಯು ಸಹಚರ್ಯದಿಂದ ಅದಕ್ಕೆ ಉಂಟಾಗುವದು.

ಈ ಎರಡೂ ಬಗೆಯ ಅವಧಾನಗಳು ಯಾವದೊಂದು ವಿಷಯದ ಕಡೆಗೆ ಕೆಲವು ಅವಧಿಯವರೆಗೆ ಉಳಿಯಬೇಕಾದರೆ ಆ ವಿಷಯದ ಬಗ್ಗೆ ನಮ್ಮಲ್ಲಿ ಅಭಿರುಚಿಯುಂಟಾಗು ವಷ್ಟು ಇಲ್ಲವೆ ಮನರಂಜನವಾಗುವಷ್ಟು ಯಾವದೊಂದು ಬಗೆಯ ಮೋಹಕ ಗುಣ ವಿರತಕ್ಕದ್ದು, ಅಥವಾ ಅದರ ಬಗ್ಗೆ ಲಕ್ಷಕೊಡುವದಕ್ಕಾಗಿ ನಮ್ಮಲ್ಲಿ ಯಾವದೊಂದು ಉದ್ದೇಶವಿರತಕ್ಕದ್ದು ಅಭಿರುಚಿಯುಂಟಾಗಲಿಕ್ಕೆ ಅವಶ್ಯವಾದ ಸಂಗತಿಗಳು.

(೧) ಲಕ್ಷಗೊಟ್ಟು ನೋಡುವ ಪದಾರ್ಥಗಳು ಹುಡುಗರಿಗೆ ತೀರ ಅಪರಿಚಿತ ವಾದವುಗಳಿರಬಾರದು. ದಶಕ ಪದ್ಧತಿಯ ನಿಯಮಗಳು ಗೊತ್ತಿದ್ದ ವಿದ್ಯಾರ್ಥಿಗೆ ದಶಾಂಶ ಅಪೂರ್ಣಾಂಕವನ್ನು ಕಲಿಸುವಾಗ ಅವುಗಳಲ್ಲಿರುವ ಸಾಮ್ಯವು ಗೊತ್ತಾಗುವ ದರಿಂದ ಆನಂದವೆನಿಸಿ ಆ ವಿಷಯದಕಡೆಗೆ ಲಕ್ಷವು ಹತ್ತುವದು. ಆದರೆ ಅಂಕಿಗಳನ್ನು ಅರಿಯದ ಹುಡುಗರಿಗೆ ದಶಾಂಶ ಅಪೂರ್ಣಾಂಕವನ್ನು ಕಲಿಸಹೋದರೆ ಅವರಿಗೆ ಏನೂ ತಿಳಿಯದೆ ತಲೆಬೇಸರ ಬರುವದು. ಇದರಂತೆ ಇಂಗ್ಲಿಷ ಭಾಷೆಯನ್ನರಿಯದ ವಿದ್ಯಾರ್ಥಿ ಗಳಿಗೆ ಇಂಗ್ಲಿಷದಲ್ಲಿ ವ್ಯಾಖ್ಯಾನಕೊಟ್ಟರೆ ಅವರಿಗೆ ಏನೂ ತಿಳಿಯದೆ ಆ ವ್ಯಾಖ್ಯಾನದ ಕಡೆಗೆ ಲಕ್ಷವು ಹೋಗಲಾರದು.

(೨) ಸುಖದುಃಖಗಳನ್ನುಂಟುಮಾಡುವ ಪದಾರ್ಥಗಳಲ್ಲಿರತಕ್ಕ ಸ್ವಾಭಾವಿಕ ಗುಣಗಳು ನಮ್ಮ ಚಿತ್ತವನ್ನು ಆಕರ್ಷಿಸಿಕೊಳ್ಳುವವು. ನಾನಾತರದ ಮೋಹಕ ಬಣ್ಣವುಳ್ಳ ಪದಾರ್ಥಗಳೂ ಚಲಿಸುವ ಪದಾರ್ಥಗಳೂ ನಮ್ಮ ಚಿತ್ತವನ್ನು ಆಕರ್ಷಿಸಿಕೊಳ್ಳುವವು.

(೩) ಜಿಜ್ಞಾಸೆಯು ನಮ್ಮ ಲಕ್ಷ್ಯವನ್ನು ಕಲಿಯತಕ್ಕ ವಸ್ತುವಿನ ಕಡೆಗೆ ಎಳೆ ದೊಯ್ಯುವದು. ಪ್ರಯೋಗಗಳಿಂದ ಸೃಷ್ಟಿಯ ಗೂಢವನ್ನು ಅರಿತುಕೊಳ್ಳುವಾಗ ನಮ್ಮಲ್ಲಿ ಜಿಜ್ಞಾಸೆಯುಂಟಾಗಿ ಹೊಸ ಹೊಸ ಶೋಧಗಳನ್ನು ಮಾಡುವದರಲ್ಲಿ ನಮ್ಮ ಲಕ್ಷ್ಯವು ತೊಡಕಿಕೊಳ್ಳುವದು. ಜಿಜ್ಞಾಸೆ ಹುಟ್ಟದಿದ್ದರೆ ಕಲಿಸುವ ವಿಷಯದ ಕಡೆಗೆ ಲಕ್ಷ್ಯವು ತಿರುಗಲಾರದು. ಹುಡುಗರು ಲಕ್ಷ್ಯಗೊಟ್ಟು ಕಲಿಯದಿದ್ದಾಗ ಶಿಕ್ಷಕನು

ತಾನು ಕಲಿಸುವ ಪದ್ಧತಿಯಲ್ಲಿ ಏನೋ ದೋಷವಿರುವದೆಂದು ತಿಳಿದು ಕಲಿಸುವದನ್ನು ಬಿಟ್ಟು ಬಿಡಬೇಕು. ಇಲ್ಲವೆ ಪದ್ಧತಿಯಲ್ಲಿ ಬದಲುಮಾಡಬೇಕು.

ಐಚ್ಛಿಕ ಅವಧಾನವು ಇಚ್ಛಾಶಕ್ತಿಯನ್ನು ಅವಲಂಬಿಸಿರುತ್ತದೆಂದು ಮೇಲೆ ಹೇಳಿದ್ದೇವೆ. ಇನ್ನು ಇಚ್ಛಾಶಕ್ತಿಯು ಆ ತರದ ಅವಧಾನಕ್ಕೆ ಹೇಗೆ ಸಹಾಯಮಾಡುವದೆಂಬದನ್ನು ಕುರಿತು ವಿಚಾರಿಸುವಾ.

ನಮಗೆ ಗೊತ್ತಿಲ್ಲದ ಭಾಷೆಯಲ್ಲಿ ಬರೆದ ಒಂದು ಗ್ರಂಥವನ್ನು ಓದುವದಕ್ಕಾಗಿ ಕುಳಿತುಕೊಂಡು ಸಾಧ್ಯವಿದ್ದಷ್ಟು ಇಚ್ಛಾಶಕ್ತಿಯನ್ನು ಉಪಯೋಗಿಸಿ ಅಕ್ಷರಗಳನ್ನು ನೋಡುತ್ತ ಓದಲೆತ್ನಿಸುತ್ತೇವೆಂದು ಕಲ್ಪಿಸುವಾ. ನಮಗೆ ಏನೂ ತಿಳಿಯದ್ದರಿಂದ ಮಿದುಳಿಗೆ ಬೇಸರಿಕೆಯುಂಟಾಗಿ ಯಾವತರದ ಆನಂದವಾಗದೆ ಪೂರ್ವಾಪರ ಸಂಬಂಧವು ಗೊತ್ತಾಗದೆ ಪುಸ್ತಕದ ಕಡೆಗಿದ್ದ ಲಕ್ಷ್ಯವು ಹಾರಿಹೋಗಿ ಅದನ್ನು ಒಗೆದುಬಿಡುತ್ತೇವೆ. ಈ ಉದಾಹರಣೆಯಿಂದ ಗೊತ್ತಾಗುವದೇನಂದರೆ, ಇಚ್ಛಾಶಕ್ತಿಯು ಬಲಾತ್ಕಾರದಿಂದ ಮನಸ್ಸನ್ನು ಲಕ್ಷಗೊಡತಕ್ಕ ವಸ್ತುವಿನ ಕಡೆಗೆ ಎಳೆದೊಯ್ದು ಹಚ್ಚಬಹುದು. ಆದರೆ ಇಚ್ಛೆಯು ಆ ವಿಷಯದ ಬಗ್ಗೆ ಆಸ್ಥೆಯನ್ನುಂಟುಮಾಡಲಾರದು. ಆಸ್ಥೆ ಇಲ್ಲದಿದ್ದರೆ ಆ ವಿಷಯದ ಬಗ್ಗೆ ಯಾವತರದ ಜ್ಞಾನವಾಗಲಾರದು. ಇಚ್ಛಾಶಕ್ತಿಯು ಅಭಿರುಚಿಯ ಸಹಾಯದಿಂದ ಯಾವದೊಂದು ವಿಷಯದ ಕಡೆಗೆ ಲಕ್ಷವನ್ನು ಹಚ್ಚಿದ್ದರೂ ಬಲವತ್ತರವಾದ ಉತ್ತೇಜಕದಿಂದ ಅನೈಚ್ಛಿಕ ಅವಧಾನವು ಇಚ್ಛಾಶಕ್ತಿಯಿಂದುಂಟಾದ ಅವಧಾನವನ್ನು ನಾಶಮಾಡಿಬಿಡುವದು. ಗಹನವಾದ ವಿಚಾರದಲ್ಲಿ ನಿಮಗ್ನನಾಗಿರುವ ತತ್ತ್ವಜ್ಞಾನಿಯು ಕೂಡ ತನ್ನ ಹಿಂದೆ ಹಾರಿಸಿದ ಧಡಲ್‌ಬಾಜಿಯ ಸಪ್ಪಳಕ್ಕೆ ಹಾರಿಬಿದ್ದು ಅತ್ತಕಡೆಗೆ ತಿರುಗಿ ನೋಡುವನು. ಆಗ ಅವನು ಲಕ್ಷಪೂರ್ವಕವಾಗಿ ಮಾಡುತ್ತಿದ್ದ ವಿಚಾರಸರಣಿಯು ಕಟ್ಟಾಗುವದು. ಇದರಂತೆ ಸಾಲೆಯ ಕೆಲಸ ನಡೆದಾಗ ಲಕ್ಷ್ಯಗೊಟ್ಟು ಕಲಿಯುತ್ತಿದ್ದ ಹುಡುಗರು ಗುಡುಗಿನ ಸಪ್ಪಳವನ್ನು ಕೇಳಿದಕೂಡಲೆ ಕಲಿಯುವ ವಿಷಯದ ಕಡೆಗೆ ದುರ್ಲಕ್ಷಮಾಡುವರು.

ಐಚ್ಛಿಕ ಅನೈಚ್ಛಿಕ ಅವಧಾನದಲ್ಲಿರತಕ್ಕ ಭೇದಗಳು:—

(೧) ಅನೈಚ್ಛಿಕ ಅವಧಾನಕ್ಕೆ ಬಾಹ್ಯಸೃಷ್ಟಿಯಲ್ಲಿರುವ ಯಾವದೊಂದು ವಸ್ತುವು ಉತ್ತೇಜಕವಾಗುವದು. ಐಚ್ಛಿಕ ಅವಧಾನದಲ್ಲಿ ಆಸ್ಥೆ-ಜಿಜ್ಞಾಸೆ ಮೊದಲಾದ ಮನಸಿನ ಸ್ಥಿತಿಗಳು ಉತ್ತೇಜಕಗಳಾಗಿರುವವು.

(೨) ಅನೈಚ್ಛಿಕ ಅವಧಾನದಲ್ಲಿ ಮನಸ್ಸು ಉತ್ತೇಜಕ್ಕೆ ಅಧೀನವಾಗಿರುವದು. ಐಚ್ಛಿಕ ಅವಧಾನದಲ್ಲಿ ಮನಸ್ಸು ಉತ್ತೇಜಕವನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳುವದು.

(೩) ಅನೈಚ್ಛಿಕ ಅವಧಾನವು ನಿಮಿಷಮಾತ್ರದಲ್ಲಿ ಇಲ್ಲದಂತಾಗುವದು. ಆದರೆ ಐಚ್ಛಿಕ ಅವಧಾನದ ಕಾಲಾವಧಿಯು ಬೇಕಾದಷ್ಟು ಆಗಬಹುದು.

ಅವಧಾನಕ್ಕೆ ಅನುಕೂಲವಾದ ಸಂಗತಿಗಳು:—

(೧) ಅವಧಾನದ ತೀವ್ರತೆಯು ಅಥವಾ ಒಲವು ಆಯಾಕಾಲದಲ್ಲಿ ವಿದ್ಯಾರ್ಥಿಗಳಲ್ಲಿರತಕ್ಕ ಕರ್ತೃತ್ವಶಕ್ತಿಯನ್ನೂ ಅವಲಂಬಿಸಿರುವದು. ಮುಂಜಾನೆ ಹುಡುಗರ ಮಾನಸಿಕ ಹಾಗು ಶಾರೀರಿಕ ಶಕ್ತಿಗಳು ಕಳೆದ ರಾತ್ರಿಯಲ್ಲಿ ಆದ ಸವಕಳಿಯ ಪೂರೈಕೆಯಿಂದ ನಾವೀನ್ಯವನ್ನು ಹೊಂದಿ ಚುರುಕಾಗಿರುವದರಿಂದ ಆ ಕಾಲದಲ್ಲಿ ಹೆಚ್ಚಿಗೆ ಮಾನಸಿಕ ಶ್ರಮವನ್ನುಂಟುಮಾಡುವ ಗಣಿತವಿಷಯುವನ್ನು ಲಕ್ಷಗೊಟ್ಟು ಕಲಿಯುವರು. ಅಶಕ್ತರಾದ ಇಲ್ಲವೆ ಬೇನೆಬಂದ ಹುಡುಗರ ಲಕ್ಷವು ಯಾವ ವಿಷಯದ ಕಡೆಗೂ ಹತ್ತಲಾರದು.

(೨) ಅವಧಾನದ ತೀವ್ರತೆಯು ಉತ್ತೇಜಕದ ತೀವ್ರತೆಯನ್ನು ಅವಲಂಬಿಸಿರುವದು. ಮೋಹಕ ಬಣ್ಣಗಳುಳ್ಳ ವಸ್ತುಗಳನ್ನು ತೋರಿಸಿದ ಕೂಡಲೇ ಹುಡುಗರು ಅದರ ಕಡೆಗೆ ಹೆಚ್ಚು ಲಕ್ಷ್ಯಕೊಟ್ಟು ನೋಡುವರು. ಇದರಂತೆ ಗುರುವಿನಿಂದ ಶಬಾಸ ಎನಿಸಿಕೊಳ್ಳಬೇಕೆಂಬ ವಿದ್ಯಾರ್ಥಿಯು ಹೆಚ್ಚು ಲಕ್ಷಗೊಟ್ಟು ತನ್ನ ಪಾಠವನ್ನು ಕಲಿಯುವನು.

(೩) ಅವಧಾನದ ತೀವ್ರತೆಯು ಮುಂಜಾಗ್ರತೆಯ ಸೂಚಕವಾದ ಶಬ್ದದ ಅರ್ಥವನ್ನವಲಂಬಿಸಿರುವದು. ಡ್ರಿಲ್‌ಮಾಡುವಾಗ ಕೊಡುವ ಅಪ್ಪಣೆಗಳಿಂದ ಹುಡುಗರಿಗೆ ತಾವು ಮಾಡತಕ್ಕ ವ್ಯವಸಾಯದ ಕಡೆಗೆ ಲಕ್ಷ್ಯವು ತಿರುಗುವದು.

ಅವಧಾನಕ್ಕೆ ಪ್ರತಿಕೂಲವಾದ ಸಂಗತಿಗಳು:—

(೧) ಹುಡುಗರಲ್ಲಿತತಕ್ಕ ಶಾರೀರಿಕ ದುರ್ಬಲ— ಇದು ಆನುವಂಶಿಕ ಇರಬಹುದು. ಇಲ್ಲವೆ ಕೀಳತರದ ಆಹಾರ—ಹವೆ—ಬೆಳಕು ಇಲ್ಲದ ಸ್ಥಳದಲ್ಲಿ ಇರೋಣ, ಸಾಕಷ್ಟು ಹೊದಿಕೆಗಳನ್ನು ಹಾಕಿಕೊಳ್ಳದೆ ಇರೋಣ ಇವೇ ಮೊದಲಾದ ಕಾರಣಗಳಿಂದ ಉಂಟಾಗಿರಬಹುದು. ಕೆಲವು ಪ್ರಸಂಗಗಳಲ್ಲಿ ಇವೆಲ್ಲ ಕಾರಣಗಳು ಒಟ್ಟುಗೂಡಿರಬಹುದು. ಇಂಥ ಹುಡುಗರನ್ನು ಹೊಡೆದು ಬಡೆದು ಮಾಡಿದರೆ ಏನೂ ಉಪಯೋಗವಾಗಲಾರದು. ಅದರಿಂದ ಅವರು ಅಂಜುಬುರುಕರು ಮಾತ್ರ ಆಗುವರು. ಇಂಥ ಹುಡುಗರಲ್ಲಿ ಆಸ್ಥೆಯನ್ನುಂಟುಮಾಡಿ ಇಲ್ಲವೆ ಅನೈಚ್ಛಿಕ ಅವಧಾನ ಉಂಟಾಗುವಂತೆ ವ್ಯವಸ್ಥೆಮಾಡಿ ಕ್ರಮೇಣ ಅವರಲ್ಲಿ ಐಚ್ಛಿಕ ಅವಧಾನ ಬರುವಂತೆ ಮಾಡಬೇಕು.

(೨) ಅವಧಾನಕ್ಕೆ ಅನನುಕೂಲವಾದ ಪರಿಸ್ಥಿತಿ— ಸಾಲೆಯ ಸುತ್ತುಮುತ್ತು ಗಲಬಿಲಿ ಆಗಹತ್ತಿದರೆ ಇಲ್ಲವೆ ಸಾಲೆ ಎದುರಿಗೆ ಆಟ ನೋಟಗಳು ನಡೆದಿದ್ದರೆ ಹುಡುಗರ

ಲಕ್ಷ್ಯವು ಕಲಿಯುತಕ್ಕ ವಿಷಯುದಕಡೆಗೆ ಹೋಗಲಾರದು. ಎಲ್ಲ ಕಡೆಯಲ್ಲಿಯೂ ಸ್ತಬ್ಧತೆ ಇರದಿದ್ದರೆ, ಶಿಕ್ಷಣವು ಸಾಗಲಾರದು.

(೩) ಹುಡುಗರನ್ನು ಒಂದೇ ಸ್ಥಿತಿಯಲ್ಲಿ ಒಂದೇ ಸ್ಥಳದಲ್ಲಿ ಕೂಡ್ರಿಸಿದರೆ ಕಲಿಸುವ ವಿಷಯುದ ಕಡೆಗೆ ಅವರ ದುರ್ಲಕ್ಷ್ಯವಾಗುವದು. ಹುಡುಗರಲ್ಲಿ ಚಟವಟಿಕೆಯು ಸ್ವಾಭಾವಿಕವಾಗಿ ಹೆಚ್ಚಾಗಿರುವದರಿಂದ ಅವರು ಅತ್ತಿತ್ತ ಸರಿದಾಡದೆ ಒಂದೇ ಕಡೆಗೆ ಕೂಡ್ರುವಂತೆ ಮಾಡುವದೆಂದರೆ, ಅವರಿಗೆ ಕಠಿಣತರವಾದ ಶಿಕ್ಷೆಯನ್ನು ಮಾಡಿದಂತಾಯಿತು. ಆದ್ದರಿಂದ ಹುಡುಗರಿಗೆ ಕೆಲವು ಸಾರೆ ನಿಲ್ಲಿಸಿ ಕೆಲವು ಸಾರೆ ಕೂಡ್ರಲಿಕ್ಕೆ ಹೇಳಿ ವಿಷಯುಗಳನ್ನು ಕಲಿಸಬೇಕು. ಹೀಗೆ ಹೇಳುವಾಗ ಹುಡುಗರು ಕಲಿಯುವಾಗ ಅತ್ತಿತ್ತ ತಿರುಗಾಡಬೇಕೆಂದು ಹೇಳಿದಂತಾಗಲಿಲ್ಲ. ಸಾಭಿನಯು ಗೀತಗಳನ್ನು ಅನ್ನುತ್ತ ವ್ಯವಸ್ಥೆಯಿಂದ ಹುಡುಗರು ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕೆ ಹೋಗುವಾಗ ಲಕ್ಷ್ಯಪೂರ್ವಕವಾಗಿ ಕೆಲಸವನ್ನು ಮಾಡುತ್ತಿರುವರು.

ಮೇಲೆ ಹೇಳಿದ ಅನನುಕೂಲತೆಗಳ ಹೊರತು ಕೆಲವು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಬುದ್ಧಿಮಾಂದ್ಯ, ಮನಸಿನ ಉದ್ವೇಗ, ಚಂಚಲತೆ ಮೊದಲಾದ ದೋಷಗಳಿಂದ ಹುಡುಗರು ಕಲಿಸುವ ವಿಷಯುದ ಕಡೆಗೆ ದುರ್ಲಕ್ಷ್ಯಮಾಡುವರು. ಸಾಲೆಯುಲ್ಲಿರತಕ್ಕ ವಿದ್ಯಾರ್ಥಿಗಳಲ್ಲಿ ಕೆಲವರು ಮಂದಬುದ್ಧಿಯುವರು, ಕೆಲವರು ಕುಶಾಗ್ರಬುದ್ಧಿಯುವರು, ಕೆಲವರು ಉಲಕೋಚಿಗಳು ಇದ್ದದ್ದು ಶಿಕ್ಷಕರ ನಿದರ್ಶನಕ್ಕೆ ಬರುವದು. ಇಂಥ ಹುಡುಗರಲ್ಲಿರತಕ್ಕ ದೋಷಗಳನ್ನು ತೆಗೆದುಹಾಕಲಿಕ್ಕೆ ಶಿಕ್ಷಕರು ಏಕಮಾಲಿಕಾಪ್ರಯೋಗವನ್ನು ಮಾಡದೆ ವ್ಯಕ್ತಿ ವ್ಯಕ್ತಿಗಳಲ್ಲಿ ಕಂಡುಬರುವ ದೋಷಗಳನ್ನು ಕಂಡುಹಿಡಿದು, ಬೇರೆ ಬೇರೆ ಉಪಾಯುಗಳಿಂದ ತೆಗೆದುಹಾಕಲಿಕ್ಕೆ ಯತ್ನಿಸಬೇಕು. ಹುಡುಗರಲ್ಲಿ ಕಂಡುಬರುವ ಅನೇಕದೋಷಗಳಿಗೆ ಶಿಕ್ಷಕರ ಪದ್ಧತಿಗಳೇ ಕಾರಣಗಳಾಗಿರುವವು. ಅನೇಕ ಹುಡುಗರನ್ನು ಒಟ್ಟುಗೂಡಿಸಿ ಕಲಿಸುವಾಗ ಕಲಿಸುವ ವಿಷಯುವು ಕೆಲವರಿಗೆ ಏನೂ ತಿಳಿಯುದಂತಾಗುವದು. ಬೇರೆ ಕೆಲವರಿಗೆ ಅದು ಅತಿ ಸುಲಭವೆನಿಸುವದು.

ಹೀಗಾಗುವದರಿಂದ ಅವರೆಲ್ಲರು ಆ ಪಾಠದ ಕಡೆಗೆ ದುರ್ಲಕ್ಷ್ಯಮಾಡುವದು ಸಹಜವು. ಯಾವ ವಿಷಯುವೂ ತಿಳಿಯುದ ಹಸಿದಡ್ಡನು ದೊರಕುವದು ದುರ್ಲಭ. ಹಸಿ ದಡ್ಡನೆಂದು ಅನಿಸಿಕೊಳ್ಳುವ ಹುಡುಗನು ಪ್ರಯತ್ನಪೂರ್ವಕವಾಗಿ ಕಲಿಯುತ್ತಿರುವಾಗ ಶಿಕ್ಷಕನು ಅವನಿಗೆ ಉತ್ತೇಜನಕೊಡುತ್ತ ಸಹಾನುಭೂತಿಯನ್ನು ತೋರಿಸಹತ್ತಿದರೆ ಹುಡುಗನು ಲಕ್ಷ್ಯಗೊಟ್ಟು ಕಲಿತು ಜಾಣನಾಗಬಹುದು. ಆದರೆ ಉಲಕೋಚಿ ಹುಡುಗನು ತಾನು ಒಳ್ಳೇ ಜಾಣನೆಂದು ಒಣ ಹೆಮ್ಮೆಯಿಂದ ಕಲಿಸುವ ವಿಷಯುದ ಕಡೆಗೆ ದುರ್ಲಕ್ಷ್ಯಮಾಡುತ್ತಿರುವದರಿಂದ ಅಂಥವನ ಅಜ್ಞಾನವನ್ನು ಎಲ್ಲ ಹುಡುಗರ ಸಮಕ್ಷ

ಹೊರಗೆಡವಲು ಶಿಕ್ಷಕನು ಪ್ರಯತ್ನಮಾಡಿ ಕ್ಷಣಕ್ಷಣಕ್ಕೆ ಅವನ ಮಾನಹಾನಿಯಾಗುವಂತೆ ಮಾಡಬೇಕು. ಕುಶಾಗ್ರ ಬುದ್ಧಿಯುಳ್ಳ ಹುಡುಗರು ಸ್ವಾಭಾವಿಕವಾಗಿ ಜಾಣರಿರುವದರಿಂದ ಅವರ ಬುದ್ಧಿಯು ವಿಕಾಸವಾಗುವಂತೆ ಶಿಕ್ಷಕರು ಕಾಲಕಾಲಕ್ಕೆ ಉತ್ತೇಜನ ಕೊಡಬೇಕು.

ಅವಧಾನದ ಮಹತ್ವವು ಶಿಕ್ಷಣ ಕ್ರಮದಲ್ಲಿ ಹೆಚ್ಚಾಗುವದೆಂದು ಬೇರೆ ಹೇಳಲವಶ್ಯವಿರುವದಿಲ್ಲ. ಹಳೇಪದ್ಧತಿಯ ಶಿಕ್ಷಣದಲ್ಲಿ ಕಲಿಯಲಿಕ್ಕೆ ರಾಜಮಾರ್ಗವಿಲ್ಲ ಎಂದು ಭಾವಿಸಿ ಕೇವಲ ಐಚ್ಛಿಕ ಅವಧಾನದ ಸಹಾಯದಿಂದಲೇ ಅತಿ ಗಡಚಾದ ವಿಷಯಗಳನ್ನು ಕಲಿಸುವ ಪ್ರಘಾತವಿತ್ತು. ಆದರೆ ಹೊಸ ಪದ್ಧತಿಯ ಶಿಕ್ಷಣ ಕ್ರಮದಲ್ಲಿ ಮೊಟ್ಟ ಮೊದಲು ಅನೈಚ್ಛಿಕ ಅವಧಾನವು ಹುಡುಗರಲ್ಲಿ ಉಂಟಾಗುವಂತೆ ಮಾಡಿ ಅದರಲ್ಲಿ ಅವರ ಅಭಿರುಚಿ ಜಿಜ್ಞಾಸೆಗಳು ಉಂಟಾದಮೇಲೆ ಅವರು ಇಚ್ಛಾಪೂರ್ವಕವಾಗಿ ಲಕ್ಷ್ಯಗೊಟ್ಟು ಕಲಿಯುವಂತೆ ಮಾಡುವದಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುವರು.

ಶಿಕ್ಷಕನ ಕರ್ತವ್ಯ:— ಶಿಕ್ಷಕನು ಎಂಥ ಉತ್ತಮ ಶಿಕ್ಷಕನಿದ್ದರೂ ಕಲಿಸುವ ವಿಷಯವು ಎಷ್ಟು ಮಹತ್ವದ್ದಿದ್ದರೂ ಅದರ ಕಡೆಗೆ ಹುಡುಗರ ಲಕ್ಷ್ಯವು ಹತ್ತದಿದ್ದರೆ ಗಾಳಿ ಗುದ್ದಿ ಕೈ ನೋಯಿಸಿಕೊಂಡಂತೆ ಶಿಕ್ಷಕನ ಪ್ರಯತ್ನವು ನಿಷ್ಫಲವಾಗುವದು. ಚಿಕ್ಕ ಬಾಲಕರಲ್ಲಿ ಇಚ್ಛಾಶಕ್ತಿಯು ಅತಿ ದುರ್ಬಲವಾಗಿರುವದು. ಬುದ್ಧಿಯು ಬೀಜರೂಪ ಸ್ಥಿತಿಯಲ್ಲಿರುವದು. ಹಾಗು ಅವರಿಗೆ ಸ್ವಂತ ಹಿತಾಹಿತಗಳ ಜ್ಞಾನವಿರುವದಿಲ್ಲ. ಆದ್ದರಿಂದ ಶಿಕ್ಷಕನು ಅನೈಚ್ಛಿಕ ಅವಧಾನದ ಸಾಧನಗಳಾದ ನಾನಾತರದ ಬಣ್ಣದ ವಸ್ತುಗಳು, ಹೊಳೆಯುವ ಪದಾರ್ಥಗಳು, ಇನಾಮು, ಶಿಕ್ಷೆ ಸ್ಪರ್ಧೆ ಮುಂತಾದವುಗಳ ಸಹಾಯದಿಂದ ಹುಡುಗರ ಲಕ್ಷ್ಯವನ್ನು ಆಕರ್ಷಿಸಿಕೊಳ್ಳಲಿಕ್ಕೆ ಯತ್ನಿಸತಕ್ಕದ್ದು. ಅವರ ಲಕ್ಷ್ಯವು ಹಾರುವಂತೆ ಮಾಡುವ ವಿಘಾತಕ ಸಂಗತಿಗಳನ್ನು ದೂರಮಾಡುವದು. ಕಲಿಸುವ ವಿಷಯವು ಹುಡುಗರ ಬುದ್ಧಿ ಮತ್ತೆಯನ್ನು ಅನುಸರಿಸಿ ಇರಬೇಕು. ಹಾಗು ಯಾವದೊಂದು ವಿಷಯವನ್ನು ಕಲಿಸುವದು ಅರ್ಧ ತಾಸಿಗಿಂತ ಹೆಚ್ಚು ವೇಳೆ ನಡೆಯಬಾರದು. ಪಾಠದ ಮಧ್ಯದಲ್ಲಿ ಸಾಧ್ಯವಿದ್ದಷ್ಟು ಚಿತ್ರಗಳನ್ನು ಆಕೃತಿಗಳನ್ನು ತೋರಿಸಬೇಕು. ಹಾಗು ಅವುಗಳ ಸಂಬಂಧದ ಕಥೆಗಳನ್ನು ಸ್ವಲ್ಪದರಲ್ಲಿ ಮನರಂಜನವಾಗುವಂತೆ ಹೇಳಿ ಕೊಡಬೇಕು. ಒಂದು ವಿಷಯವು ಮುಗಿದು ಬೇರೊಂದು ವಿಷಯವನ್ನು ಪ್ರಾರಂಭಿಸುವ ಮೊದಲು ಹುಡುಗರಿಗೆ ತುಸು ವಿಶ್ರಾಂತಿ ದೊರೆಯುವಂತೆ ಮಾಡಬೇಕು. ವೇಳಾಪತ್ರಿಕೆಯನ್ನು ಮಾಡುವಾಗ ಹುಡುಗರ ಮನಸ್ಸು ಪ್ರಫುಲ್ಲಿತವಾಗಿರುವಾಗ ಮಿದುಳಿಗೆ ಶ್ರಮವಾಗುವಂಥ ಗಣಿತ ಮುಂತಾದ ವಿಷಯಗಳೂ ಹುಡುಗರಿಗೆ ಬೇಸರಿಕೆಯುಂಟಾದಾಗ ಚಿತ್ರ ತೆಗೆಯೋಣ ಕಾಪಿ ಬರೆಯೋಣ ಮುಂತಾದ ಯಾಂತ್ರಿಕ ವಿಷಯಗಳೂ

ಸಮಾವೇಶವಾಗುವಂತೆ ಮಾಡಬೇಕು. ಯಾವದೊಂದು ವಿಷಯವನ್ನು ಪ್ರಾರಂಭ ಮಾಡುವಾಗ ಹುಡುಗರಿಗೆ ಪರೀಕ್ಷೆಯ ಪ್ರಶ್ನೆಗಳನ್ನು ಕೇಳಿ ಅವರಿಗೆ ಬರುವ ವಿಷಯದ ಮೆಟ್ಟನ್ನೂ ತಿಳಿದುಕೊಳ್ಳಬೇಕು. ಆ ಮೇಲೆ ಪ್ರಶ್ನಗಳನ್ನು ಬದಲುಮಾಡಿ ಸೂಚಕ ಪ್ರಶ್ನಗಳ ಸಹಾಯದಿಂದ ಗೊತ್ತಿದ್ದ ಸಂಗತಿಗಳಿಂದ ಗೊತ್ತಿಲ್ಲದ ಸಂಗತಿಗಳ ಕಡೆಗೆ ಹೋಗುತ್ತ ಕಲಿಸಹತ್ತಿದರೆ ಶಿಕ್ಷಕನು ತಮ್ಮ ಮೇಲೆ ಏನೋಭಾರ ಹೊರಿಸುತ್ತಿರುವ ನೆಂಬ ಕಲ್ಪನೆಯು ಹುಡುಗರಲ್ಲಿ ಉಂಟಾಗದೆ ತಾವು ಹೊಸ ಹೊಸ ಸಂಗತಿಗಳನ್ನು ಕಲಿಯುತ್ತೇವೆಂಬ ಭಾವನೆಯು ಅವರಲ್ಲಿ ಉಂಟಾಗಿ ಅವರು ಹುರುಪಿನಿಂದ ಕಲಿಯು ಹತ್ತುವರು.

ಹುಡುಗರು ಲಕ್ಷಗೊಟ್ಟು ಕಲಿಯುಬೇಕಾದರೆ ಅವರು ಆನಂದ ವೃತ್ತಿಯುಲ್ಲಿ ರತಕ್ಕದ್ದು. ಇದಕ್ಕಾಗಿ ಶಿಕ್ಷಕನು ಉಲ್ಹಾಸವೃತ್ತಿಯುವನೂ ಸದಯಾಂತಃಕರುಣಿಯೂ ಆಗಿರುವದು ಅತ್ಯವಶ್ಯವು.

ಗಣಿತ

ಲೇಖಕರು:—ರಾ. ಸ. ಬಡಾವಿ ಸ್ಕೂಲ ಮಾಸ್ತರ ಅನಗವಾಡಿ (ತಾ. ಬಾಗಲಕೋಟಿ)

ಪ್ರೊ. ಗೋಖಲೆ ಕೃತ (ರಾ. ಗಜ್ಜಿಯವರಿಂದ ಭಾಷಾಂತರಿಸಲ್ಪಟ್ಟ ಕನ್ನಡ) ೩ನೇಭಾಗ ಅಂಕಗಣಿತದ ಉದಾಹರಣಸಂಗ್ರಹ ೩ (ಮುರುಕೊಳ್ಳುವ ಬಡ್ಡಿ) ಲೆಕ್ಕದ ನಂಬರು ೫೩ ರಲ್ಲಿ.

ಮಾರ್ಚ ತಿಂಗಳ ೯ನೇ ತಾರೀಖಿಗೆ ಬರೆಯಲ್ಪಟ್ಟ ೫ ತಿಂಗಳ ಮುದ್ದತಿನ ೧೨೬ ಪೌಂಡು ೫ ಶಿಲಿಂಗುಗಳ ಹುಂಡಿಯು ಮುರುಕೊಳ್ಳುವ ಬಡ್ಡಿಯು ೧೦೦ಕ್ಕೆ ೫ ರಂತೆ ೧ ಪೌಂ. ೫ ಶಿ. ಗಳಾಗಬೇಕಾದರೆ ಅದರ ಹಣವನ್ನು ಯಾವಾಗ್ಗೆ ತೆಗೆದುಕೊಳ್ಳಬೇಕು. ಎಂದು ಕೇಳಿರುವರು.

ಇದನ್ನು ಕೆಳಗಿನಂತೆ ಬಹಳ ಜನರು ಬಿಡಿಸುವರು. ಸದರ ಅಂಕಗಣಿತದಲ್ಲಿ ಮುದ್ರಿತವಾದ ಉತ್ತರವಾದರೂ ಅವರು ಮಾಡುವ ರೀತಿಗೇ ಬರುವದು.

೧೨೬ ಪೌ. ೫ ಶಿ. ರಾಸು ಅಂದರೆ ೯ನೇ ಅಗಷ್ಟಕ್ಕೆ ಬರಬೇಕಾದ ಹಣವು
೧ ,, ೫ ,, ಮುರಿದುಕೊಂಡ ಹಣ (ಇದರ ರೂಪಾಂತರ ೫/೪ ಪೌಂ. ಆಗುವದು)

೧೨೫ ಪೌ. ೦ ಶಿ. ಇದು ಬೇಡಿದ ದಿವಸಕ್ಕೆ ಕೈಗೆ ಬಂದ ಹಣ
ಇದರ ಮೇಲಿಂದ

ಪೌಂ. ಪೌಂ.

೧೦೦ : ೧೨೫ ವ್ಯ

ಬ ಬ

೫ : ೪/೫ ಸ } :: ದಿ ೩೬೫ $\frac{೧೦೦}{೧}$ × $\frac{೩೬೫}{೧}$ $\frac{೧}{೧೨೫}$ × $\frac{೫}{೪}$ × $\frac{೧}{೫}$

೭೩ ದಿವಸಕ್ಕೆ ೪/೫ ಪೌಂಡು ಮುರುಕೊಳ್ಳುವ ಬಡ್ಡಿಯಾಗುವದು.

ದಿ ದಿ

೭೩ — ೩ ಗ್ರೇಸ = ೭೦ ದಿವಸ ಮುಂಚಿತವಾಗಿ ಹಣ ಬೇಡಿದಂತಾಯಿತು.

ಮಾರ್ಚ	೨೨	ಕಾಗದದಲ್ಲಿ ಬರೆದ ಐದು ತಿಂಗಳು ಮುಪ್ಪತ್ತಿನ ದಿವಸಗಳು ಅಗಸ್ಟ ೯ ಕ್ಕೆ ಮುಗಿಯುವವು. ಇದಕ್ಕೆ ಎಪ್ಪತ್ತು ದಿವಸಗಳು ಮುಂಚಿತವಾಗಿ ಅಂದರೆ ಮೇ ೩೧ಕ್ಕೆ ಮುರಿಸಿದಂತೆ ಆಗುವದು.
ಎಪ್ರೇಲ	೩೦	
ಮೇ	೩೧	
ಜೂನ	೩೦	
ಜುಲೈ	೩೧	
ಅಗಸ್ಟ	೯	

ಮೇಲಿನ ಪಂಚರಾಶಿಕವು

ಪೌಂ. ಪೌಂ.

೧೦೦ : ೧೨೫

ಬ ಬ

೫ : ೪/೫ } :: ದಿ ೩೬೫ ಈ ಪ್ರಮಾಣದಲ್ಲಿ ೧೦೦ ಇದು ಅಸಲು ೧೨೫ ರಾಸು ಆಗುವದಿಲ್ಲವೇ ∴ ೧೨೫ರಲ್ಲಿ ಮಾರ್ಚ ದಿಂದ ಮೇ ೩೧ವರೆಗಿನ ಬಡ್ಡಿ ಕೂಡಿರುವದು.

ನನಗೆ ಈ ಲೆಕ್ಕವನ್ನು ಕೆಳಗಿನಂತೆ ಬಿಡಿಸುವದು ಸರಿಯೆನಿಸುವದು.

ತಿಂಗಳಿಗೆ ತಿಂಗಳಿಗೆ ಬಡ್ಡಿ ಬಡ್ಡಿ ಅಸಲು ರಾಸು

೧೨ : ೫ :: ೫ ಸಮ $\frac{೫ \times ೫}{೧೨}$ = ೨ $\frac{೧}{೧೨}$ + ೧೦೦ = ೧೦೨ $\frac{೧}{೧೨}$ ಕಾಗದದ ಬೆಲೆ

ಅಥವಾ

ದಿ ದಿ ಬ

(೩೬೫ : ೧೫೩ :: ೫ ಹೀಗೂ ಮಾಡಬಹುದು.

ಕಾಗದ ಕಾ ಇಂದಿನ ಬೆಲೆ ೨೫ ಇಂದಿನ ಬೆಲೆ

$\frac{೧೨೨೫}{೧೨}$: $\frac{೫೦೫}{೪}$* :: ೧೦೦ ಸ $\frac{೫೦೫}{೪}$ × $\frac{೧೦೦}{೧}$ × $\frac{೧೨}{೧೨೨೫}$ × $\frac{೬೦೬೦}{೪೯}$ ಪೌ.

೪೯

ಕಾಗದದ ಬೆಲೆ ಇಂದಿನ ಬೆಲೆ ಪೌ ಅಗಸ್ಟ ೯ಕ್ಕೆ ಕೊಡಬೇಕೆಂದು ಬರಸಿಕೊಂಡ

$\frac{೫೦೫}{೪} - \frac{೬೦೬೦}{೪೯} = \frac{೫೦೫}{೧೯೬}$ ಕಾಗದದಲ್ಲಿ ಕೂಡಿದ ಬಡ್ಡಿ

ಮಾರ್ಚ ೯ರಿಂದ ಅಗಸ್ಟ ೯ರ ವರೆಗೆ ೧೫೩ ದಿಸಗಳಾಗುವವು.

ಬ ಪೌ. ಬ ದಿ. ಬೇಕು. ದಿವಸಗಳು ಬೇಕು

$\frac{೫೦೫}{೧೯೬}$: $\frac{೫}{೪}$ * :: ೧೫೩ ಸನು $\frac{೫}{೪} \times \frac{೧೫೩}{೧} \times \frac{೧೯೬}{೫೦೫} = \frac{೭೪೯೭}{೧೦೧}$

$\frac{೭೪೯೭}{೧೦೧}$ ದಿವಸಗಳಲ್ಲಿ ೩ ಗ್ರೇಸ ದಿವಸಗಳು ಕೂಡಿರಲಿಕ್ಕೆಬೇಕು. ಕಾರಣ $\frac{೭೪೯೭}{೧೦೧} - \frac{೩}{೧}$ ಗ್ರೇ. ದಿ. $= \frac{೭೧೯೪}{೧೦೧}$ ದಿವಸ ಮುಂಚೆ ಹಣ ಬೇಡಿರಲಿಕ್ಕೆಬೇಕು.

ಭಾಗಾನುಬಂಧ ಪೂರ್ಣಾಂಕದಲ್ಲಿ $= ೭೧\frac{೨೩}{೧೦೧}$ ದಿವಸ ಇದರಿಂದ ಮೇ ೩೦ಕ್ಕೆ ಮುಂಚಿತವಾಗಿ ಎಂದು ಉತ್ತರ ಬರುವದು.

ಮೇಲೆಬರೆದ ಎರಡು ರೀತಿಗಳಲ್ಲಿ ಯಾವರೀತಿಯಿಂದ ಉತ್ತರವನ್ನು ತೆಗೆಯುವದು ಸರಿಯಾದದ್ದು ಇದನ್ನು ಗಣಿತಜ್ಞರು ತಿಳಿಸಬೇಕೆಂದು ಬೇಡಿಕೊಳ್ಳುವೆನು. ಲೋಭವಿರಲಿ

* ೧೨೬ ಪೌಂ. ೫ ಶಿಲಿಂಗುಗಳ ರೂಪಾಂತರ $\frac{೫೦೫}{೪}$ ಪೌಂಡು.

* ೧ ಪೌಂ. ೫ ಶಿ. ಗಳ ರೂಪಾಂತರ $\frac{೫}{೪}$ ಪೌಂಡು.

ಪ್ರ ಕ ಟ ನೆ

62 B 5825

12—1—1934

ಕಳೆದ ತಿಂಗಳಲ್ಲಿ ಪ್ರಕಟಿಸಿದ ಹೆ. ಮಕ್ಕಳ ವ್ಹ. ಫಾ. ಪರೀಕ್ಷೆಯ ಪ್ರಕಟನೆಯಲ್ಲಿ ಕೆಳಗೆ ಬರೆದಂತೆ ತಿದ್ದುಪಡಿ ಮಾಡಿದೆ.

ತಾರೀಖು	ವೇಳೆ		ವಿಷಯ
	ಇಂದ	ವರೆಗೆ	
೯-೩-೧೯೩೪	೭-೩೦	೧೦-೩೦	೩ನೆಯ ಸದರು (ಅ) ಮತ್ತು (ಬ)
(ಶುಕ್ರವಾರ)			ಗಣಿತ ಮತ್ತು ಮನೆತನದ ಜಮಾಖರ್ಚು
ಸದರ	೨-೩೦	೪-೩೦	೪ನೆಯ ಸದರು- ಭೂಗೋಲ

ಸೈಯದ ನೂರುಲ್ಲಾ

ಎ. ಇ. ದ. ಭಾ.

ಗಂಡು ಹುಡುಗರ ವ್ಹ. ಫಾಯಿನಲ್ ಪರೀಕ್ಷೆ ೧೯೩೪ ದಕ್ಷಿಣ ಭಾಗ

ಗಂಡು ಹುಡುಗರ ವ್ಹರನ್ಯಾಕುಲರ ಫಾಯಿನಲ್ ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ಮಂಗಳವಾರ ೩ನೆಯ ಎಪ್ರೇಲ್ ೧೯೩೪ ನೆಯ ಇಸವಿ ದಿನ ಹಾಗೂ ಮುಂದಿನ ದಿನಗಳಲ್ಲಿ ನಡೆಯುವದು.

೧. ಧಾರವಾಡ ೨. ಬೆಳಗಾವ ೩. ಬಿಜಾಪುರ ೪. ಕಾರವಾರ ೫. ಕೊಲ್ಹಾಪುರ ೬. ಹುಬ್ಬಳ್ಳಿ (ಧಾರವಾಡ ಜಿಲ್ಲೆಯ ಉರ್ದು ಉಮೇದವಾರರಿಗಾಗಿ)

೨. ಆಯಾ ಊರಲ್ಲಿರುವ ಸರಕಾರದ ಹಾಯಸ್ಕೂಲದ ಹೆಡ್‌ಮಾಸ್ತರರು ಆಯಾ ಸೆಂಟರಿನ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರಿರುವರು. ಕೊಲ್ಹಾಪುರ ಸಂಸ್ಥಾನದ ಎಜ್ಯುಕೇಶನಲ್ ಇನ್ಸಪೆಕ್ಟರರು ಕೊಲ್ಹಾಪುರ ಸೆಂಟರಿನ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರು.

೩. ಉಮೇದವಾರನು ಪರೀಕ್ಷೆಗೆ ಕೂಡಲಿಚ್ಛಿಸುವ ಸ್ಥಳದ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ತಾ. ೧-೩-೩೪ ನೇ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟುವಂತೆ ಪರೀಕ್ಷೆಗೆ ಕೂಡಲಿಕ್ಕೆ ಪರವಾನಿಗೆಯ ಬಗ್ಗೆ ಅರ್ಜಿಯನ್ನು ಕಳಿಸ ತಕ್ಕದ್ದು. ತಾ. ೧-೩-೩೪ರ ಬಳಿಕ ಬಂದ ಅರ್ಜಿಯನ್ನು ಹಿಡಿಯಲಾಗದು. ದೇಶೀಯ ಸಂಸ್ಥಾನಗಳಿಂದ ಬ್ರಿಟಿಶ್ ಜಿಲ್ಹೆಗಳಲ್ಲಿ ಪರೀಕ್ಷೆಗೆ ಕೂಡುವ ಉಮೇದವಾರರು ಆಯಾ ಸಂಸ್ಥಾನದ ವಿದ್ಯಾಖಾತೆಯ ಯೋಗ್ಯ ಅಧಿಕಾರಿಗಳ ಮುಖಾಂತರ ಅರ್ಜಿ ಕಳಿಸತಕ್ಕದ್ದು. ಪ್ರತಿಯೊಂದು ಅರ್ಜಿಯಲ್ಲಿ ಉಮೇದವಾರನ ಪೂರ್ಣ ಹೆಸರು ಹಾಗು (ಆತನು ಯಾವದೊಂದು ಸಾಲೆಯಿಂದ ಪರೀಕ್ಷೆಗೆ ಬಂದಿದ್ದರೆ ಆ) ಸಾಲೆಯ ಹೆಸರು ಇರಲಿಕ್ಕೆಬೇಕು. ಅರ್ಜಿಯ ಕೂಡ ೩ ರೂ. ಪರೀಕ್ಷೆಯ ಫೀ ಸಹ ಮುಟ್ಟಬೇಕು. ಪೂರ್ಣ ಮಾಹಿತಿ ಇಲ್ಲದ ಅರ್ಜಿಯನ್ನೂ, ಫೀ ತುಂಬದೆ ಇದ್ದ ಅರ್ಜಿಯನ್ನೂ, ಅರ್ಜಿಯಿಲ್ಲದೆ ಕಳಿಸಿದ ಫೀ ಹಣವನ್ನೂ ಹಿಡಿಯಲಾಗದು.

ಅರ್ಜಿಯ ನಮೂನೆಗಳು ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ಇರುವವು; ಬೇಕಾದವರು ತರಿಸಿಕೊಳ್ಳಬಹುದು. ಇವಕ್ಕೆ ರೊಕ್ಕ ಕೊಡಬೇಕಾಗುವದಿಲ್ಲ.

ಧಾರವಾಡ ಹಾಗು ಕಾನಡಾ ಜಿಲ್ಹೆಗಳಿಂದ ಮರಾಠಿ ಭಾಷೆಯಲ್ಲಿ ಪರೀಕ್ಷೆಗೆ ಕೂಡುವ ಉಮೇದವಾರರು ಬೆಳಗಾಂವ ಸೆಂಟರಿನಲ್ಲಿ ಪರೀಕ್ಷೆಗೆ ಕೂಡಬೇಕಾಗುವದು.

ಕಾನಡಾ ಜಿಲ್ಹೆಯ ಹಲ್ಯಾಳ ತಾಲೂಕಿನ ಹಾಗು ಶಿರಸಿ ತಾಲೂಕಿನ ಬನವಾಸಿ ಊರ ಉಮೇದವಾರರು ಧಾರವಾಡ ಸೆಂಟರಿನಲ್ಲಿಯೂ ಸಾಂಗಲಿ ಸಂಸ್ಥಾನದ ಕೂಚಿ ತಾಲೂಕಿನ ಉಮೇದವಾರರು ಸಾತಾರೆ ಸೆಂಟರಿನಲ್ಲಿಯೂ ಪರೀಕ್ಷೆಗೆ ಕೂಡಬಹುದು.

೪. ಅಗ್ರಿಕಲ್ಚರದ ಬಾಯಸ್ (ಶೇತಕೀ ವಿಷಯುಗಳನ್ನು ಒಳಕೊಂಡ) ವ್ಹ. ಫಾ. ಪರೀಕ್ಷೆಯು ಧಾರವಾಡ, ಬೆಳಗಾವ, ವಿಜಾಪುರ ಹಾಗು ಕಾರವಾರ ಸೆಂಟರ ಗಳಲ್ಲಿ ಇವೇ ತಾರೀಖುಗಳ ದಿವಸ ನಡೆಯುವದು. ಈ ಪರೀಕ್ಷೆಗೆ ಕೂಡಲಿಚ್ಛಿಸುವ ಉಮೇದವಾರರು ಪರೀಕ್ಷೆಯ ಅರ್ಜಿಯ ಸಂಗಡ ತಾವು ಅಗ್ರಿಕಲ್ಚರ ಬಾಯಸ್ ಅಭ್ಯಾಸದ ಮೂರು ವರ್ಷದ ಅಭ್ಯಾಸವನ್ನು ಮುಗಿಸಿರುವ ಬಗ್ಗೆ ಸರಟೀಫಿಕೇಟು ಕಳಿಸತಕ್ಕದ್ದು.

ಧಾರವಾಡ, ೯-೧-೩೪ | ಸೈಯದ ನೂರುಲ್ಲಾ ಎ. ಇ. ದ. ಭಾ.

ಜಾಹೀರಾತು

ಸರಕಾರದಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಟೆಕ್ಸ್ಟ ಬುಕ್ಕಾಗಿ ಮಂಜೂರಾದ

ಗಣಿತ ಶಿಕ್ಷಕ

ಲೇಖಕ:—ಹಿರೇಮಠ ಮ್ಯು. ಕನ್ನಡ ಶಾಲಾ ಮಾಸ್ತರ ವಿಜಾಪುರ.

ಈ ಪುಸ್ತಕದಲ್ಲಿ ಕನ್ನಡ ೫, ೬, ೭, ಹಾಗು ವ್ಹ. ಫಾಯಿನಲ್ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಪ್ರತಿಯೊಂದು ಪ್ರಕರಣದಲ್ಲಿ ವ್ಯವಹಾರಿಕ ಲೆಖ್ಖಗಳನ್ನೂ, ವಾರಲೋನ, ಕ್ಯಾಶ ಸರ್ಟಿಫಿಕೇಟು ಮುಂತಾದ ಪ್ರಚಲಿತ ಠೇವುಗಳ ಲೆಖ್ಖಗಳನ್ನೂ ಹಾಕಿದೆ. ಮೊದಲು ಮಾದರಿಗಾಗಿ ಒಂದು ಲೆಖ್ಖವನ್ನು ಬಿಡಿಸಿ ತೋರಿಸಿ, ತರುವಾಯ ಪ್ರತಿಯೊಂದು ಅದೇ ಮಾದರಿಯ ಹಲವು ಲೆಖ್ಖಗಳನ್ನು ರೂಢಿಗಾಗಿ ಸೇರಿಸಿದೆ. ಲೆಖ್ಖವು ಮನವಟ್ಟಾಗುವಂತೆ ಈ ಪುಸ್ತಕದಲ್ಲಿ ವಿದ್ಯಾರ್ಥಿಗಳಿಗೆ ಉಪಯೋಗವಾಗುವಷ್ಟೇ ವಿಷಯುಗಳನ್ನು ಕೊಟ್ಟಿದ್ದರಿಂದ ಬೆಲೆಯಾದರೂ ಕಡಿಮೆಯಾಗಿ ಪ್ರತಿಯೊಬ್ಬರು ಸಂಗ್ರಹಿಸಲು ತಕ್ಕದ್ದಾಗಿದೆ. ಬೆಲೆ ೧೪ ಆಣೆ.

ಪುಸ್ತಕಗಳು ದೊರೆಯುವ ಸ್ಥಳ:—

ಬಸಪ್ರಭಯ್ಯ ದುಂಡಯ್ಯ ಹಿರೇಮಠ,

ಮ್ಯು. ಕನ್ನಡ ಶಾಲಾ ಮಾಸ್ತರ ವಿಜಾಪೂರ.

ಮತ್ತು ಎಲ್ಲ ಮುಖ್ಯ ಬುಕ್ಕಶೇಲರರಲ್ಲಿ ಶಿಗುವವು.

Reg. No. B. 2567

ಜಾಹೀರಾತು

(೧) ಹಿಂದುಮುಸಲ್ಮಾನರ ಇತಿಹಾಸ.

(ಬಾಳಕೃಷ್ಣ ಹಳೇಪೇಟಕೃತ)

ಇದು, ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಯ ಉಪಯೋಗಕ್ಕಾಗಿ ಸುಲ ವಾದ ಅಲಂಕಾರಿಕ ಭಾಷೆಯಲ್ಲಿ ಹೊಸಪದ್ಧತಿಗನುಸಾರವಾಗಿ ಬರೆಯಲ್ಪಟ್ಟಿರುವದು ಈ ವರೆಗೆ ಬರೆದ ಇತಿಹಾಸಗಳಲ್ಲಿ ಇದು ಒಳ್ಳೇ ಉಪಯುಕ್ತವಾಗಿರುವದು. ಮುಂಬಯಿ ಸರಕಾರದಿಂದ ಕನ್ನಡ ೫ ನೆ ಇಯತ್ತೆಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಲ್ಪಟ್ಟಿ ರುವದು. ಬೆಲೆ ೮-೮-೦.

(೨) ಕರ್ನಾಟಕದ ವರ್ಣನೆಯೂ ಇತಿಹಾಸವೂ.

(ನಾರಾಯಣ-ಶ್ರೀನಿವಾಸ ರಾಜಪುರೋಹಿತ ಕೃತ)

ಕರ್ನಾಟಕದ ಇತಿಹಾಸ ಸಂಶೋಧಕ ಮಂಡಲದ ಪ್ರಮುಖರಲ್ಲೊಬ್ಬರಾ ಮಿ. ರಾಜಪುರೋಹಿತ ಇವರು ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿ ಶಿಲಾಲೇ ತಾಮ್ರಪಟ, ನಿಷಿದಿಯಕಲ್ಲು, ಮಾಸತಿಕಲ್ಲು, ವೀರಗಲ್ಲು ಮೊದಲಾದವುಗಳನ್ನು ಶೋಧಿ ಇವುಗಳ ಆಧಾರದಿಂದ ಸುಸಂಗತವಾಗಿ ಈ ಇತಿಹಾಸವನ್ನು ಬರೆದಿರುವರು. ೪ನೆ ಇಯತ್ತೆಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವೆಂದು ಸರಕಾರದಿಂದ ಮಂಜೂರ ಆಗಿ ಬೆಲೆ ೦-೮-೦

(೩) ದೇಶೀಯ ಜಮಾಖರ್ಚು ಪ್ರವೇಶ

(ಹನುಮಂತ ರಾಮಚಂದ್ರ ಕುಲಕರ್ಣಿ ಕೃತ)

ಪ್ರಾಥಮಿಕ ಕನ್ನಡ ಶಾಲೆಗಳ ೬ನೆಯ ೭ನೆಯ ಇಯತ್ತೆಯ ವಿದ್ಯಾರ್ಥಿಗಳಿ ಇದ್ದ ಈ ಜಮಾಖರ್ಚಿನ ವಿಷಯವು ೪ನೆಯ ಇಯತ್ತೆಗೆ ಆರಂಭವಾಗುವದರಿಂ ಇದನ್ನು ಸುಲಭವಾದ ರೀತಿಯಲ್ಲಿ ತಿಳಿಯುವಂತೆ ಬರೆದಿದ್ದಾರೆ. ಅಭ್ಯಾಸಕ್ಕೆ ವಿಶೇ ಅನುಕೂಲವಾಗಿದೆ. ಮುಂಬಯಿ ಇಲಾಖೆಯ ವಿದ್ಯಾಖಾತೆಯಿಂದ ಮಂಜೂರಾಗಿ ಬೆಲೆ ೦-೩-೬.

(೪) ವಿಜಾಪುರ ಜಿಲ್ಲೆಯ ಸಾಮಾನ್ಯ ವರ್ಣನೆಯು.

ಕನ್ನಡ ಪ್ರಾಥಮಿಕ ಶಾಲೆಗಳ ೨ನೆಯ ೩ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಹೊಸ ಪದ್ಧತಿಯಿಂದ ಬರೆಯಲ್ಪಟ್ಟಿದೆ. ಈ ಮೊದಲು ಇದೇ ಪದ್ಧತಿಯಿಂದ ಬರೆದ ಮಿ. ಯು. ಕೃ. ಅಣ್ಣೀಗೇರಿ ಇವರಿಂದಲೇ ಇದನ್ನು ಬರೆಯಿಸಿದೆ. ಅಭ್ಯಾಸವು ಸುಲಭವೂ ಸುಗಮವೂ ಮನೋರಂಜಕವೂ ಆಗುವಂತೆ ಈ ಪುಸ್ತಕದಲ್ಲಿ ನಕಾಶಗಳೂ ಚಿತ್ರಗಳೂ ಸೇರಿಸಲ್ಪಟ್ಟಿವೆ. ಬೆಲೆ ೪-೬-೦.

ಪುಸ್ತಕ ದೊರೆಯುವ ಸ್ಥಳ :—

ವಿ. ಆರ್. ಶಿವನಾಗಪ್ಪ,

ವಾಗ್ವಿಲಾಸ ಬುಕ್‌ಡಿಪೋ ಪಾವರ ಪ್ರಿಂಟಿಂಗ ಪ್ರೆಸ್, ಹುಬ್ಬಳ್ಳಿ

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

Kannada Prathamik Shikshana

— MARCH 1934 —

ಸಂಪಾದಕ—ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,

ಸಂಪುಟ ೭೦] ಮಾರ್ಚ ೧೯೩೪ [ವ. ೫ ಸಂ. ೧೨

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ಬುದ್ಧಿ ಪರೀಕ್ಷೆ	೧
೨.	ಹಿಂದುಮಕ್ಕಳ ಬುದ್ಧಿಪರೀಕ್ಷೆಯು ...	೩
೩.	ಗಣಿತದ ಲೆಕ್ಕಗಳು	೮
೪.	ಸಚ್ಛಿಕ್ಷಕ	೯
೫.	ಪ್ರಾಚೀನ ಕಾಲದ ಸ್ಕೌಟ ಶಿಕ್ಷಣ ...	೧೪
೬.	ಮಾನಸಶಾಸ್ತ್ರ	೧೭
೭.	ಪುಸ್ತಕಗಳು; ಅವುಗಳನ್ನು ಓದುವ ಕ್ರಮ	೨೫
೮.	ಪ್ರಕಟನೆಗಳು	೩೦

Printed by K. R. Bhise at the Karnatak Printing Works, Dharwar
& Published by V. N. Magdal, B.A.,
Head Master, Training School, Dharwar, at his Office.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— **ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.,**

ಸಂಪುಟ ೭೦ ||| **ಮಾರ್ಚ ೧೯೩೪** ||| ವರ್ಷ ೫ ಸಂ. ೧೨

ಬುದ್ಧಿಪರೀಕ್ಷೆ

ಸದ್ಯಃಕಾಲವು ಶಿಕ್ಷಣಪ್ರಪಂಚದಲ್ಲಿ ಪರೀಕ್ಷೆಗಳ ಕಾಲವು; ಪರೀಕ್ಷಕರು ತೆರಪಿಲ್ಲದೆ ಭರದಿಂದ ವಿದ್ಯಾರ್ಥಿಗಳ ಪರೀಕ್ಷೆಯನ್ನು ತೆಗೆದುಕೊಂಡು ಆಯಾತರಗತಿಗಳಿಗೆ ಅವರವರು ಯೋಗ್ಯರಿರುವರೋ ಹ್ಯಾಗೆ ಎಂಬದನ್ನು ನಿಶ್ಚಯಿಸಿ ಅವರನ್ನು ಮುಂದುವರಿಸುತ್ತಿರುವರು. ತೂಕಕ್ಕೆ ಏರದಿರುವವರನ್ನು ಹಿಂದುಳಿಸುತ್ತಿರುವರು. ತಿಂಗಳೊಪ್ಪತ್ತಿನಲ್ಲಿ ಸಾರ್ವಜನಿಕ ಪರೀಕ್ಷೆಗಳ ಸುರಿಮಳೆಯೂ ಆರಂಭವಾಗಿ ನಮ್ಮಲ್ಲಿಯ ಲಕ್ಷಾವಧಿ ತರುಣರ ಆಯುಷ್ಕ್ರಮಣದಲ್ಲಿಯ ಒಂದು ತರಗತಿಯು ನಿಶ್ಚಯಿಸಲ್ಪಡುವದು. ನಮ್ಮಲ್ಲಿ ಸಾಲೆಗಳೂ ವರ್ಗಗಳೂ ಏರ್ಪಟ್ಟು ಲೋಕಶಿಕ್ಷಣವು ಒಂದು ಬಗೆಯಲ್ಲಿ ನಡೆಯಲಾರಂಭಿಸಿದಂದಿನಿಂದ ಈ ಸಂಗತಿಯು ಅವ್ಯಾಹತವಾಗಿ ವರ್ಷಾನುವರ್ಷ ನಡೆಯುತ್ತಿರುವದು.

ಆದರೆ ಹೀಗೆ ವರ್ಷದಲ್ಲಿ ಕಲಿತ ವಿಷಯಗಳಲ್ಲಿ ಬಾಯಿಂದಾಗಲಿ ಬರೆಹ ಮೂಲಕವಾಗಲಿ ಪರೀಕ್ಷೆಗಳನ್ನು ತೆಗೆದುಕೊಳ್ಳುವದರಿಂದ ನಿಶ್ಚಿತವಾದ ಲಾಭವು ಆಗುವದಿಲ್ಲೆಂದೂ ವಿದ್ಯಾರ್ಥಿಗಳ ಜ್ಞಾನದ ಪರೀಕ್ಷೆಯನ್ನು ಮಾಡುವದು ಮಾತ್ರ ಇದರಿಂದ ತಕ್ಕಮಟ್ಟಿಗೆ ಸಿದ್ಧಿಸುವದೆಂದೂ ಅವರ ಬುದ್ಧಿಪರೀಕ್ಷೆಯು ಈ ಕ್ರಮದಿಂದ ಆಗುವದಿಲ್ಲೆಂದೂ ಶಿಕ್ಷಣ ಶಾಸ್ತ್ರಜ್ಞರು ಸಾರುತ್ತಿರುವರು. ಸದ್ಯದ ಪರೀಕ್ಷೆಗಳು ತೀರ ನಿರರ್ಥಕವಾದುವೆಂದೂ ಇವುಗಳನ್ನು ನಿಲ್ಲಿಸಿಬಿಡಬೇಕೆಂದೂ ಎಲ್ಲರು ಹೇಳುವದಿಲ್ಲ. ಇವುಗಳಲ್ಲಿ ಸುಧಾರಣೆಯಾಗುವದು ಆವಶ್ಯಕವಿರುವದೆಂಬಬಗ್ಗೆ ಮಾತ್ರ ಮತ್ಯೈಕ್ಯವು ಇರುವದೆಂದು ಧಾರಾಳವಾಗಿ ಹೇಳಬಹುದು.

ವಿದ್ಯಾರ್ಥಿಗಳ ಬುದ್ಧಿಶಕ್ತಿಯನ್ನು ಸಾಮಾನ್ಯವಾಗಿ ಪರೀಕ್ಷಿಸುವದಲ್ಲದೆ ಯಾವ ಬೌದ್ಧಿಕ ಶಕ್ತಿಗಳು ಆತನಲ್ಲಿ ಎಷ್ಟು ಬಲವಾಗಿರುವವೆಂಬದನ್ನು ಕಂಡು ಹಿಡಿದು ಯಾವ ಬಗೆಯಲ್ಲಿ ಶಿಕ್ಷಣವನ್ನು ಸಾಗಿಸುವದರಿಂದ ಆತನ ಪ್ರಗತಿಯು ತಕ್ಕ ದಾರಿಯಲ್ಲಿ ಸಾಗಿ ಸ್ವಾಭಾವಿಕವಾಗಿ ಆತನಲ್ಲಿ ಇರುವ ಶಕ್ತಿಯ ಪೂರ್ಣ ಉಪಯೋಗವು ಆತನಿಗೆ ಆಗುವದೆಂಬದನ್ನು ನಿಷ್ಕರ್ಷಿಸಿ ಆತನಿಗೆ ನೆರವಾಗುವದೇ ಶಿಕ್ಷಣದ ಧ್ಯೇಯವೆಂದು ಶಾಸ್ತ್ರಜ್ಞರು ಇತ್ತಲಾಗಿ ಪ್ರತಿಪಾದಿಸುತ್ತಿರುವರು. ಅವರು ಅನೇಕ ಪ್ರಯೋಗಗಳನ್ನು ಮಾಡಿ ಬೇರೆ ಬೇರೆ ವಯಸ್ಸಿನ ಹುಡುಗರ ಬುದ್ಧಿಶಕ್ತಿಯನ್ನು ನಿಷ್ಕರ್ಷಿಸುವದಕ್ಕಾಗಿ ಬೇರೆ ಬೇರೆ ಪ್ರಶ್ನಮಾಲೆಗಳನ್ನು ಏರ್ಪಡಿಸಿ ಸಾವಿರಾರು ಹುಡುಗ ಹುಡಿಗೆಯರಿಗೆ ಇವುಗಳನ್ನು ಕೇಳಿನೋಡಿ ಕೆಲವು ಸಂಗತಿಗಳನ್ನು ಗೊತ್ತುಪಡಿಸಿರುವರು. ಇವು ಪಾಶ್ಚಾತ್ಯ ದೇಶಗಳಲ್ಲಿ ನಿಷ್ಕರ್ಷಿಸಲ್ಪಟ್ಟ ಪ್ರಶ್ನಗಳು. ನಮ್ಮ ದೇಶದ ವಿದ್ಯಾರ್ಥಿಗಳಿಗಾಗಿ ಇವುಗಳಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ, ಸಾವಿರಾರು ವಿದ್ಯಾರ್ಥಿಗಳಿಗೆ ಇವುಗಳನ್ನು ಕೇಳಿನೋಡಿ ಹೊರಡುವ ಸಿದ್ಧಾಂತಗಳನ್ನು ಮಿ॥ ವಿ. ವಿ. ಕಾಮತ ಬಿ. ಎ., ಟಿ. ಡಿ. ಶಿಕ್ಷಕ ಹೈಸ್ಕೂಲು, ಧಾರವಾಡ, ಇವರು ಈ ಬಗ್ಗೆ ಲೇಖಗಳನ್ನು ಪ್ರಸಿದ್ಧಿಸುತ್ತಿರುವರು. ಈ ಬಗ್ಗೆ ಒಂದು ವಿಸ್ತೃತವಾದ ಲೇಖವನ್ನು ಇವರು ಪ್ರಾಥಮಿಕ ಶಿಕ್ಷಕರಿಗಾಗಿ ನಮ್ಮ ಪತ್ರಿಕೆಯಲ್ಲಿ ಜುಲೈ ೧೯೩೩ರಲ್ಲಿ ಪ್ರಸಿದ್ಧಿಸಿರುವದು ವಾಚಕರಿಗೆ ಗೊತ್ತಿರುವದೆಂದು ನಂಬಿದ್ದೇವೆ. ಈ ವಿಷಯವು ಪ್ರಾಥಮಿಕ ಶಿಕ್ಷಣದ ದೃಷ್ಟಿಯಿಂದ ಒಳ್ಳೇ ಮಹತ್ವದ್ದಾಗಿದೆ. ಮೊದಲಿನ ಲೇಖದಲ್ಲಿ ಇವರು ಈ ವಿಷಯದ ಸಾಮಾನ್ಯ ದಿಗ್ದರ್ಶನವನ್ನು ಮಾಡಿದ್ದರು. ಇತ್ತಲಾಗಿ ಇವರು ಮತ್ತೊಂದು ಲೇಖವನ್ನು ಕಳಿಸಿರುವರು. ಇದರಲ್ಲಿ ಮೂಲ ಪ್ರಶ್ನಗಳಲ್ಲಿ ತಾವು ಮಾಡಿರುವ ಹೆಚ್ಚುಕಡಿಮೆಗಳ ಮೂಲಕ ತಮಗೆ ಯಾವ ಸಂಗತಿಗಳು ಗೊತ್ತಾಗಿವೆಯೆಂಬದನ್ನು ಬರೆದಿರುವರು. ಈ ವಿಷಯದ ಬಗ್ಗೆ ಕನ್ನಡದಲ್ಲಿ ಒಂದು ಪುಸ್ತಕವನ್ನು ಬರೆಯುತ್ತಿರುವರು. ಅದು ತೀವ್ರದಲ್ಲಿಯೇ ಪ್ರಸಿದ್ಧವಾಗುವದೆಂದು ನಾವು ನಂಬಿದ್ದೇವೆ. ಶ್ರೀ. ಕಾಮತರವರ ಲೇಖವನ್ನು ಈ ಸಂಚಿಕೆಯಲ್ಲಿ ನಾವು ಕೊಟ್ಟಿರುವೆವು. ಅದನ್ನು ಪ್ರಾಥಮಿಕ ಶಿಕ್ಷಕರು ಲಕ್ಷ್ಯಪೂರ್ವಕವಾಗಿ ಅಭ್ಯಾಸಿಸುವರೆಂದು ನಾವು ಕೋರುತ್ತೇವೆ.

ಹಿಂದಮಕ್ಕಳ ಬುದ್ಧಿಪರೀಕ್ಷೆಯು

ಲೇಖಕರು:—ಶ್ರೀ. ವಿ. ವಿ. ಕಾಮತ, ಬಿ. ಎ., ಟಿ. ಡಿ. ಧಾರವಾಡ ಹಾಯಸ್ಕೂಲು.

ಹಿಂದುಸ್ತಾನದಲ್ಲಿ ಬುದ್ಧಿಪರೀಕ್ಷೆಯ ಬಗ್ಗೆ ನಡೆದ ಕೆಲಸಗಳು—

ಪಾಶ್ಚಾತ್ಯ ದೇಶಗಳಲ್ಲಿ ಬುದ್ಧಿಪರೀಕ್ಷೆಯ ಪ್ರಶ್ನಮಾಲೆಯನ್ನು ಆರಂಭಿಸಿ ದವರು ಬಿನೆಟರೆಂಬ ಫ್ರೆಂಚ ಗೃಹಸ್ಥರು. ಆ ದೇಶದಲ್ಲಿ ಕಳೆದ ೨೦ ವರ್ಷಗಳಲ್ಲಿ ಈ ಪದ್ಧತಿಯ ಉಪಯೋಗವು ಭರದಿಂದ ಆಗುತ್ತಿರುವದು. ಆದರೆ ಈ ವರೆಗೆ ಹಿಂದುಸ್ತಾನದಲ್ಲಿ ಈ ಬಗ್ಗೆ ಹೇಳಿಕೊಳ್ಳುವಷ್ಟು ಕೆಲಸವು ಆಗಿಲ್ಲವೆಂದು ವಿಷಾದ ದಿಂದ ಹೇಳಬೇಕಾಗುತ್ತದೆ. ಈ ಮೂಲಕ ನಮ್ಮ ದೇಶದ ಶಿಕ್ಷಣದಲ್ಲಿ ಬಲವಾದ ಹಾನಿಯಾಗುತ್ತಿರುವದು. ಪಾಶ್ಚಾತ್ಯದೇಶಗಳಲ್ಲಿ ಶಿಕ್ಷಣದ ಬಗ್ಗೆ ಹೊಸ ಶೋಧ ಗಳು ಆಗುತ್ತಿರುವವು; ನಮ್ಮಲ್ಲಿ ಈ ಬಗ್ಗೆ ಏನೂ ನಡೆದಿಲ್ಲವೆನ್ನಬಹುದು. ಬುದ್ಧಿ ಪರೀಕ್ಷೆಯ ಪ್ರಶ್ನಮಾಲಿಕೆಯಿಂದ ವಿಶೇಷ ಉಪಯೋಗವಾಗಬೇಕಾದರೆ ಇವುಗ ಳನ್ನು ದೇಶಭಾಷೆಗಳಿಗೆ ಒಪ್ಪುವಂತೆ ಭಾಷಾಂತರಿಸಲಿಕ್ಕೆ ಬೇಕು. ಇವುಗಳನ್ನು ಹೀಗೆ ನಮ್ಮದೇಶದ ಹಲವು ಭಾಷೆಗಳಿಗೆ ತರ್ಜುಮೆಮಾಡಿ ಅವುಗಳಲ್ಲಿ ಅವಶ್ಯ ವಿರುವ ತಿದ್ದುಪಡೆಯನ್ನು ಮಾಡಲಿಕ್ಕೆ ಯಾವ ತೊಂದರೆಗಳೂ ಇಲ್ಲವೆಂದು ಹೇಳ ಬಹುದು. ಯಾಕೆಂದರೆ ಯುರೋಪದ ಬಹುತರ ಭಾಷೆಗಳಲ್ಲಿ ಇವುಗಳ ತರ್ಜು ಮೆಯು ತಕ್ಕಂತೆ ಆಗಿರುವದು. ನಮ್ಮ ದೇಶದಲ್ಲಿಯ ದೊಡ್ಡ ಪ್ರಾಂತಗಳು ಅಂದರೆ ಭಾಷಾದೃಷ್ಟಿಯಿಂದ ಆಗುವ ವಿಭಾಗಗಳು ವಿಸ್ತಾರಮಾನದಿಂದ ಯುರೋ ಪದ ಒಂದೊಂದು ದೇಶದಷ್ಟು ಮಾತ್ರ ಆಗುವವು.

ಈ ವರೆಗೆ ಹಿಂದುಸ್ತಾನದಲ್ಲಿ ಸ್ವಲ್ಪ ಜನರು ಮಾತ್ರ ಈ ವಿಷಯದಲ್ಲಿ ಮನಸು ಹಾಕಿ ಕಾರ್ಯಪರರಾಗಿರುವರು. ಲಾಹೋರದಲ್ಲಿ ಪ್ರೊಫೆಸರ ರಾಯಿಸರೆಂಬ ವರು ಹಿಂದುಸ್ತಾನಿ ನುಡಿಯಲ್ಲಿ ಬಿನೆಟನ ಪ್ರಶ್ನಮಾಲಿಕೆಯನ್ನು ಉಪಯೋಗಿಸಿ ಪರೀಕ್ಷೆ ಮಾಡಿರುವರು. ಹಾಗು ಒಂದು ಪುಸ್ತಕವನ್ನು ಪ್ರಸಿದ್ಧಿಸಿರುವರು. ಬೇರೆ ಬೇರೆ ವಯಸ್ಸಿನ ೧೦೭೦ ಹುಡುಗರನ್ನು ಇವರು ಪರೀಕ್ಷಿಸಿ ಸಿದ್ಧಾಂತಗಳನ್ನು ತೆಗೆದಿರುವರು. ಇವರು ಹುಡುಗರ ವರ್ಷಗಳ ಮಾನದಿಂದ ಪರೀಕ್ಷೆ ಮಾಡಿಲ್ಲ; ಪಾಯಿಂಟ ಸ್ಕೇಲ ಅಂದರೆ ಒಟ್ಟು ಗುಣಗಳ ಮಾನದಿಂದ ಬುದ್ಧಿಯ ಅಳತೆಗಟ್ಟಿ ರುವರು. ಪ್ರಶ್ನ ಮಾಲಿಕೆಯಲ್ಲಿ ಇಂತಿಷ್ಟು ಪ್ರಶ್ನಗಳನ್ನು ಸರಿಯಾಗಿ ಬಿಡಿಸಿದವ ರಿಗೆ ಇಂತಿಷ್ಟು ಗುಣಗಳೆಂದು ನಿಷ್ಕರ್ಷಿಸಿ, ಅವುಗಳಿಂದ ಬುದ್ಧಿಯ ತರಗತಿಯನ್ನು ನಿಶ್ಚಯಿಸಿರುವರು. ಇದು ಅಷ್ಟು ಸಮಾಧಾನಕರವಾದ ಪರೀಕ್ಷಾಕ್ರಮವಲ್ಲ.

ಮೇಲಾಗಿ ಇವರು ಪರೀಕ್ಷಿಸಿದ ಹುಡುಗರೆಲ್ಲ ೫ ವರ್ಷಕ್ಕೆ ಮಿಕ್ಕಿದವರಿರುವರು. ಇದಕ್ಕಿಂತ ಕೆಳಗಿನ ವಯಸ್ಸಿನ ಹುಡುಗರ ಪರೀಕ್ಷೆಯು ಮಾನಸಶಾಸ್ತ್ರದ ದೃಷ್ಟಿ ಯಿಂದ ಹೆಚ್ಚು ಮಹತ್ವದ್ದಾಗಿರುವದು. ಇದಲ್ಲದೆ, ಇವರು ಹುಡುಗರ ಪರೀಕ್ಷೆ ಯನ್ನು ಮಾಡಿರುವರೇ ಹೊರತು ಹುಡಿಗೆಯರ ಪರೀಕ್ಷೆಯನ್ನು ಮಾಡಿಲ್ಲ. ಹಿಂದು ಸ್ಥಾನದ ಸರಕಾರದವರು ಬುದ್ಧಿ ಪರೀಕ್ಷೆಯ ಕ್ರಮವನ್ನು ಕುರಿತು ಒಂದು ಪುಸ್ತಕ ವನ್ನು ಪ್ರಸಿದ್ಧಪಡಿಸಿರುವರು. ಇದರಲ್ಲಿ ಹಿಂದುಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಹಿಂದ ಶಿಕ್ಷಣಜ್ಞರು ಮಾಡಿರುವ ಈ ವಿಷಯಕ್ಕೆ ಸಂಬಂಧಿಸಿದ ಅಲ್ಪ ಸ್ವಲ್ಪ ಪ್ರಯ ತ್ನಗಳ ಮಾಹಿತಿಯು ಮಾತ್ರ ಇರುವದು. ಮಾನಸಶಾಸ್ತ್ರದ ದೃಷ್ಟಿಯಿಂದ ಈ ಪುಸ್ತಕವು ಹೇಳಿಕೊಳ್ಳುವಷ್ಟು ಮಹತ್ವದ್ದಾಗಿಲ್ಲ.

ಬುದ್ಧಿಪರೀಕ್ಷೆಗಳ ಉಪಯೋಗಗಳು—

ಹಳೆಯ ಶಿಕ್ಷಕರು ವರ್ಗದಲ್ಲಿ ಹುಡುಗರ ಪ್ರಗತಿಯನ್ನು ನೋಡಿ ಹುಡುಗ ರಲ್ಲಿ ಬುದ್ಧಿವಂತರು ದಡ್ಡರು ಎಂದು ಸಾಧಾರಣವಾಗಿ ಹೇಳಬಲ್ಲವರಾಗಿದ್ದರು. ಅಂದರೆ ಜ್ವರ ಬಂದವನ ಮೈಮುಟ್ಟಿ ಈತನಿಗೆ ಉರಿ ಬಂದಿವೆ ಎಂದು ಹೇಳಿದಂತಾ ಯಿತು. ಇದನ್ನು ಯಾರಾದರೂ ಹೇಳಬಹುದು. ಆದರೆ ಡಾಕ್ತರನಿಗೆ ಇದರಿಂದ ಏನೂ ಸಹಾಯವಾಗದು. ಎಷ್ಟು ಜ್ವರವಿತ್ತು? ಯಾವಾಗ ಇದು ಏರುವದು? ಯಾವಾಗ ಇಳಿಯುವದು? ಇವೆಲ್ಲ ನಿಶ್ಚಿತವಾಗಿ ತಿಳಿದರೆ ಮಾತ್ರ ಚಿಕಿತ್ಸೆಗೆ ಅದರಿಂದ ಸಹಾಯವಾಗುವದು— ಇದನ್ನು ಡಾಕ್ತರನು ಉಷ್ಣಮಾಪಕ ಯಂತ್ರದಿಂದ ನಿಶ್ಚಿತ ವಾಗಿ ನಿಷ್ಕರ್ಷಿಸುವನು— ಹಾಗೆಯೇ ಒಬ್ಬ ಹುಡುಗನು ಇನ್ನೊಬ್ಬನಿಗಿಂತ ಎಷ್ಟು ಅಂಶ ಅಥವಾ ಪಾಯಿಂಟ (ಇದು ಬುದ್ಧಿಯ ಅಳತೆಯ ಒಂದು ಬಗೆಯ ಮಾಪು) ಹೆಚ್ಚು ಬುದ್ಧಿಶಾಲಿಯೆಂಬದು ಶಿಕ್ಷಕನಿಗೆ ತಿಳಿಯಬೇಕಾದರೆ ಆತನು ಬಿನೆಟನ ಪರೀಕ್ಷಾ ಪ್ರಶ್ನಗಳನ್ನು ಉಪಯೋಗಿಸುವನು. ಇವುಗಳ ಸಹಾಯದಿಂದ ಸದ್ಯದ ಶಿಕ್ಷಕನು ಹುಡುಗರನ್ನು ತಕ್ಕಂತೆ ವರ್ಗೀಕರಿಸಿ ತಕ್ಕ ಪದ್ಧತಿಗಳಿಂದ ಅವರವರ ಶಿಕ್ಷಣವನ್ನು ಸಾಗಿಸಬಹುದಾಗಿದೆ. ತೀರ ಮಡ್ಡರೆನಿಸುವವರನ್ನು ಬೇರೆ ಮಾಡಿ ದುರ್ಬಲ ಮನಸ್ಸಿನವರಿಗಾಗಿ ಏರ್ಪಡಿಸಿರುವ ವಿಶಿಷ್ಟ ಶಾಲೆಗಳಿಗೆ ಕಳಿಸಬಹುದಾ ಗಿದೆ. ವಿಶೇಷ ಬುದ್ಧಿಶಾಲಿಗಳನ್ನು ಬೇರೆ ಮಾಡಿ ಸ್ಪೆಶಲ್ ವರ್ಗಗಳಲ್ಲಿ ಅವರಿಗೆ ಶಿಕ್ಷಣ ಕೊಡಬಹುದಾಗಿದೆ.

ಲೇಖಕರು ಮಾಡಿರುವ ಕೆಲಸವು—

ಹಿಂದುಸ್ಥಾನದಲ್ಲಿ ಬುದ್ಧಿಪರೀಕ್ಷೆಯ ಬಗ್ಗೆ ಹೇಳತಕ್ಕಂಥ ಕೆಲಸವು ಇನ್ನೂ ಆಗಿಲ್ಲವಾದ್ದರಿಂದ ಲೇಖಕರು ಬಿನೆಟನ ಪರೀಕ್ಷಾಕ್ರಮದಲ್ಲಿ ಇಲ್ಲಿಯ ಹುಡು

ಗರಿಗೆ ಅವಶ್ಯವಾದ ಹೆಚ್ಚು ಕಡಿಮೆ ಮಾಡಲುಪಕ್ರಮಿಸಿದರು. ಟರ್ಮನರೆಂಬವರು ಸ್ಟಾನ್‌ಫರ್ಡ್ ರಿವಿಜನ್ ಅಂದರೆ ಸ್ಟಾನಫರ್ಡ್ ವಿಶ್ವವಿದ್ಯಾಲಯದಲ್ಲಿದ್ದಾಗ ತಿದ್ದುಪಡೆ ಮಾಡಿರುವರು. ಈ ತಿದ್ದಿದ ಪ್ರಶ್ನಗಳನ್ನು ಅನುಸರಿಸಿ ಮುಂಬಯಿ ಇಲಾಖೆಯ ಧಾರವಾಡ ಪಟ್ಟಣದಲ್ಲಿ ಪ್ರಯೋಗಗಳನ್ನು ಮಾಡಿದೆ. ಈ ಊರ ಜನಸಂಖ್ಯೆ ೩೦,೦೦೦ ಕ್ಕಿಂತ ತುಸು ಹೆಚ್ಚು. ಇಲ್ಲಿಯ ಹುಡುಗರು ಮುಂಬಯಿಯಂಥ ದೊಡ್ಡ ಪಟ್ಟಣದ ಹುಡುಗರಷ್ಟು ಮುಂದುವರಿದವರಲ್ಲ; ಇಲ್ಲವೆ ಹಳ್ಳಿಗಾಡಿನ ಹುಡುಗರಷ್ಟು ಹಿಂದುಳಿದವರಲ್ಲ. ಆದ್ದರಿಂದ ಹಿಂದುಸ್ಥಾನದ ಸಾಮಾನ್ಯ ಹುಡುಗರ ಮಾದರಿಯವರೆಂದು ಧಾರಾಳವಾಗಿ ಹೇಳಬಹುದು. ಪರೀಕ್ಷಾ ಪ್ರಶ್ನಗಳನ್ನು ಮೊದಲು ಎರಡು ಭಾಷೆಗಳಿಗೆ—ಕನ್ನಡ ಹಾಗು ಮರಾಠಿ—ತರ್ಜುಮೆ ಮಾಡಿತು. ಇವೆರಡು ಭಾಷೆಗಳನ್ನು ಮುಂಬಯಿ ಇಲಾಖೆಯ ಅರ್ಧಕ್ಕಿಂತ ಹೆಚ್ಚು ಜನರು ಆಡುವರು. ಮೈಸೂರು ಪ್ರಾಂತವಂತೂ ಪೂರ್ಣ ಕನ್ನಡ ನಾಡು. ಮದ್ರಾಸ ಇಲಾಖೆಯಲ್ಲಿಯೂ ಕನ್ನಡವು ರೂಢಿಯಲ್ಲಿದೆ. ಕೆಲವು ಪ್ರಶ್ನಗಳು ನಮ್ಮ ದೇಶದ ಹುಡುಗರಿಗೆ ತಕ್ಕವಿರಲಿಲ್ಲ; ನಮ್ಮ ದೇಶದ ಪರಿಸ್ಥಿತಿಗೆ ಹೊಂದಿಕೆಯಾದವಿರಲಿಲ್ಲ. ಇವುಗಳಲ್ಲಿ ಅವಶ್ಯವಿರುವ ಹೆಚ್ಚು ಕಡಿಮೆಗಳನ್ನು ಮಾಡಲಾಯಿತು. ಉದಾ: ಅಮೇರಿಕದ ನಾಣ್ಯಗಳ ಬದಲು ಈ ದೇಶದ ನಾಣ್ಯಗಳನ್ನು ಉಪಯೋಗಿಸಿತು; ಚಿತ್ರಗಳು ಹಿಂದುಸ್ಥಾನದ ಪರಿಸ್ಥಿತಿಗೆ ತಕ್ಕವಾಗಿ ಮಾಡಲ್ಪಟ್ಟವು. ಶಬ್ದಕೋಶದ ಬಗ್ಗೆ ಇರುವ ಪ್ರಶ್ನಗಳಲ್ಲಿ ತಕ್ಕ ಕನ್ನಡ ಹಾಗು ಮರಾಠಿ ಶಬ್ದಗಳನ್ನು ಹಾಕಲಾಯಿತು. ಮೂಲ ಪ್ರಶ್ನಗಳಲ್ಲಿ ಭಾಷೆಗೆ ಹೊಂದುವಂತೆ ಹೆಚ್ಚು ಕಡಿಮೆಗಳನ್ನು ಮಾಡುವಾಗ ಮೂಲ ಶಬ್ದಗಳ ಅರ್ಥವೂ ಉಚ್ಚಾರವೂ ಆದಷ್ಟು ಹೋಲುವಂಥ ಶಬ್ದಗಳನ್ನೇ ಆರಿಸಲು ಬಹಳ ಪರಿಶ್ರಮ ಮಾಡಲ್ಪಟ್ಟಿದೆ. ಮೂಲದಲ್ಲಿ ಪ್ರೆಸಿಡೆಂಟರಿಗೂ ಅರಸನಿಗೂ ಇರುವ ಭೇದದ ಬಗ್ಗೆ ಪ್ರಶ್ನಗಳಿವೆ. ನಾವು ಪಾಟೀಲ ಹಾಗು ಕುಲಕರ್ಣಿಯರ ಬಗ್ಗೆ ಪ್ರಶ್ನಗಳನ್ನು ಯೋಜಿಸಿರುವೆವು. ಇವಲ್ಲದೆ ಇತರ ಹಲವು ಬದಲಾವಣೆಗಳನ್ನು ಮಾಡಿರುವೆವು.

ಬಿನೆಟನ ಇಲ್ಲವೆ ಟರಮನ್ನನ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ಎಷ್ಟು ಕಾಲವನ್ನು ಕೊಡಬೇಕೆಂಬ ಬಗ್ಗೆ ನಿಷ್ಕರ್ಷೆಯಾಗಿರಲಿಲ್ಲ. ನಾವು ಈ ಕಾಲಾವಧಿಯನ್ನು ನಿಶ್ಚಯಿಸಿರುವೆವು. ಆದ್ದರಿಂದ ನಾವು ಏರ್ಪಡಿಸಿರುವ ಪ್ರಶ್ನಗಳಿಂದ ಸರಿಯಾದ ಸಿದ್ಧಾಂತಗಳು ಹೊರಡುವವು. ಈ ಕಾಲಾವಧಿಯನ್ನು ನಿಶ್ಚಯಿಸದಿದ್ದರೆ ಒಂದು ಪ್ರಶ್ನೆಯನ್ನು ಕೇಳಿದ ಬಳಿಕ ಎಷ್ಟು ಹೊತ್ತಾದ ಮೇಲೆ ಮತ್ತೊಂದನ್ನು ಕೇಳತಕ್ಕದ್ದೆಂಬದು ಗೊತ್ತಾಗುವದಿಲ್ಲ. ಪರೀಕ್ಷಕನಿಗೆ ಇದೊಂದು ತೊಡಕೆನಿಸು

ವದು. ಎಷ್ಟೋ ಹುಡುಗರು ಉತ್ತರವನ್ನು ಸರಿಯಾಗಿ ಹೇಳುವವರಂತೆ ತೋರಿ ಕೊಳ್ಳುವರು. ಕೊನೆಗೆ ಅವರು ಏನೂ ಹೇಳುವದಿಲ್ಲ. ಇವರಿಂದ ವ್ಯರ್ಥ ವೇಳೆಯು ಮಾತ್ರ ಹೋಗುತ್ತದೆ.

ಎರಡನೆಯ ವರ್ಷದಿಂದ ಹದಿನಾಲ್ಕು ವರ್ಷ ಮುಗಿಯುವವರೆಗೆ ಕೆಲ ಬೇರೆ ಬೇರೆ ವಯೋಭಾಗಗಳನ್ನು ಮಾಡಿಕೊಂಡು ಪರೀಕ್ಷೆಯನ್ನು ಮಾಡುವದುಂಟು ಈ ಭಾಗಗಳ ಹುಡುಗ ಹುಡಿಗೆಯರ ಸರಾಸರಿ ಬುದ್ಧಿಯ ತರಗತಿಯನ್ನು ಕೆಲ ಅಂಕೆಗಳಿಂದ (ಗುಣ ಮಾರ್ಕ) ತೋರಿಸುವದುಂಟು. ಇವುಗಳನ್ನು ಕೆಳಗೆ ಕೋಷ್ಟಕದಲ್ಲಿ ಕೊಟ್ಟಿರುತ್ತದೆ.

ನಾವು ಮಾಡಿದ ಪರೀಕ್ಷೆಯ ಮೂಲಕ ೧೧೭೪ ಹುಡುಗರ ಬುದ್ಧಿಯ ತರಗತಿಯ ಕೋಷ್ಟಕವನ್ನು ಮುಂದಿನ ಆಕೃತಿಯಿಂದ ಸ್ಪಷ್ಟಮಾಡಿರುವೆವು. ಈ ಆಕೃತಿಯಲ್ಲಿ ಒಂದೊಂದು ಕೋಷ್ಟಕದ ಕ್ಷೇತ್ರವು ಹುಡುಗರ ಬುದ್ಧಿ ತರಗತಿಯ ಸಂಖ್ಯೆಯನ್ನು ತೋರಿಸುವದು; ಅಂದರೆ ೧೧೭೪ ಹುಡುಗರಲ್ಲಿ ೪೫ ಈ ಅಂಕೆಯು (ಬುದ್ಧಿಯ ತರಗತಿಯ ಉಚ್ಚ ನೀಚ ಅಂಕೆಗಳು ೪೫–೧೮೫ ಎಂದು ಎಣಿಸಿರುವೆವು.) ಇಂತಿಷ್ಟು ಹುಡುಗರ ಬುದ್ಧಿತರಗತಿಯನ್ನು ಸೂಚಿಸುವದು. ಆ ಹುಡುಗರ ಸಂಖ್ಯೆಯು ಆಯಾ ಕೋಷ್ಟಕಗಳ ಎತ್ತರದಿಂದ ಸೂಚಿತವಾಗುವದು.

ಬೌದ್ಧಿಕ ವಯಸ್ಸು.	ಸರಾಸರಿ ಬುದ್ಧಿಯ ತರಗತಿ.	ಪರೀಕ್ಷಿಸಿದ ಹುಡುಗರ ಸಂಖ್ಯೆ.
೨ ವರ್ಷದಿಂದ ೩ ವ. ೧೧ ತಿಂ.	೧೦೪·೮	೭೫
೪ ,, ೫ ,, ೧೧ ,,	೯೯·೧	೧೦೪
೬ ,, ೭ ,, ೧೧ ,,	೯೫·೧	೧೫೮
೮ ,, ೯ ,, ೧೧ ,,	೧೦೦·೧	೧೬೨
೧೦ ,, ೧೧ ,, ೧೧ ,,	೯೯·೮	೧೯೬
೧೨ ,, ೧೩ ,, ೧೧ ,,	೧೦೨·೯	೧೬೭
೧೪ ವರ್ಷ ಹಾಗು ಮೇಲೆ	೯೯·೮	೨೧೨
ಒಟ್ಟು ಹುಡುಗರ ಬಗ್ಗೆ	೯೯·೮	ಒಟ್ಟು ೧೧೭೪

ಮುಂದಿನ ಲೇಖದಲ್ಲಿ ಈ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಕ್ರಮವನ್ನೂ ಆ ಬಳಿಕ ಪರೀಕ್ಷಾ ಪ್ರಶ್ನಮಾಲೆಯನ್ನೂ ಕೊಡುವೆವು. ಈ ವಿಷಯದಲ್ಲಿ ಪ್ರಾಥಮಿಕ ಶಿಕ್ಷಕರಲ್ಲಿ ಅನೇಕರು ಮನಸು ಹಾಕುವರೆಂದು ನಾವು ಆಶಿಸುತ್ತೇವೆ.



೧೦೭೪ ಹುಡುಗ ಹುಡಿಗೆಯರ ಬುದ್ಧಿಯ ತರಗತಿಯ ಹಂಚುವಿಕೆಯ ಕೋಷ್ಟಕವು.

ಗಣಿತದ ಲೆಕ್ಕಗಳು

ಒಬ್ಬರು ಶಿಕ್ಷಕರು ಕೆಳಗಿನ ಲೆಕ್ಕಗಳು ಆಯಾ ಇಯತ್ತೆಗೆ ಹೊಸ ಅಭ್ಯಾಸ ಪತ್ರಿಕೆಯಂತೆ ಯೋಗ್ಯವಿರುವವೋ ಹ್ಯಾಗೆ ಎಂದು ಕೇಳಿರುವರು.

೧ನೆಯ ಇಯತ್ತೆ:—(೧) ೬ ಹತ್ತರಗಂಟಿನಲ್ಲಿ ೪ ಬಿಡಿ ಕಾಳು ಕಳೆದರೆ ಎಷ್ಟು? ಉಳಿಯುವವು? (೨) ೬೦ ರಲ್ಲಿ ೪ ಮಂದಿ ಸವನಾಗಿ ಹಂಚಿಕೊಂಡರೆ ಒಬ್ಬನಿಗೆಷ್ಟು? (೩) ೮೦ ರಲ್ಲಿ ಎಷ್ಟು ಕೂಡಿಸಿದರೆ ೧೦೦ ಆಗುವವು? (೪) ೩ ಆಣೆಗೆ ಪೈಗಳೆಷ್ಟು?

೨ನೆಯ ಇಯತ್ತೆ:—(೧) ೫೦೦೦ ರೂ. ಇದ್ದವು ಅರ್ಧ ಕೊಟ್ಟು ಹೊಲ ಕೊಂಡೆನು; ೮೦೦ ರೂ. ಕೊಟ್ಟು ಮನೆ ಕೊಂಡೆನು. ಉಳಿದ ರೂ. ಎಷ್ಟು? (೨) ಒಬ್ಬನಲ್ಲಿ ೧೫೦೦ ಕುರಿ ೧೬೮ ಆಡು ಇವೆ. ೧ ಕುರಿಗೆ ೪ ರೂ. ಆಡಿಗೆ ೩ ರೂ. ಯಂತೆ ಎಲ್ಲವನ್ನೂ ಮಾರಿದರೆ ಎಷ್ಟು ರೂ. ಬರುವವು?

ಈ ಬಗ್ಗೆ ನಾವು ಇಬ್ಬರು ತಜ್ಞರನ್ನು ವಿಚಾರಿಸಲಾಯಿತು. ಒಬ್ಬರು ಎಲ್ಲ ಲೆಕ್ಕಗಳು ಆಯಾ ಇಯತ್ತೆಗೆ ತಕ್ಕವೆಂದರು. ಮತ್ತೊಬ್ಬರು ೧ನೆಯ ಇ॥ ಯ ೧ನೆಯ ಲೆಕ್ಕವು ಆ ಹುಡುಗರಿಗೆ ಮೀರಿದವು, ಸಾದಾ ವಜಾಬಾಕಿಯ ಲೆಕ್ಕಗಳು ಮಾತ್ರ ಇರಬೇಕು; ೨ನೆಯ ಲೆಕ್ಕದಲ್ಲಿ ೬೦ ಹಣ್ಣುಗಳಲ್ಲಿ ೪ ಹಣ್ಣಿನ ಗುಂಪುಗಳು ಎಷ್ಟು ಆಗುವವೆಂದು ಕೇಳಬಹುದು. ಹಂಚಿ ಕೊಡುವ ಕಲ್ಪನೆಯು ೧ನೆಯ ಇ॥ ಗೆ ಗಡಚಾದದ್ದು ಎಂದು ಹೇಳುವರು. ಮಿಕ್ಕ ಲೆಕ್ಕಗಳೆಲ್ಲ ಯೋಗ್ಯವೆನ್ನುವರು.

"೨ನೆಯ ಇ॥ ಗೆ ಜೋಡು ಅಂಕಿಯ ಭಾಗಾಕಾರವು ಕಲಿತ ಮಗ್ಗಿಯೊಳಗಿನವೇ ಇರಬೇಕೆಂದು ಇದೆ; ಅಂದರೆ ೫೭, ೬೪ ಇತ್ಯಾದಿಗಳಿಂದ ಭಾಗಿಸ ಹೇಳುವದು ಸರಿಯಲ್ಲ" ಎಂದೂ ಬರೆದು ಕೇಳಿರುವರು.

ಈ ಬಗ್ಗೆ ಭಿನ್ನಾಭಿಪ್ರಾಯವಿರುವಂತೆ ತೋರುತ್ತದೆ. ಒಬ್ಬ ತಜ್ಞರು ೧೦, ೧೨, ೧೫, ೧೬, ೨೦ ಇವುಗಳಿಂದ ಭಾಗಿಸಲಿಕ್ಕೆ ಬಂದರೆ ಈ ಇಯತ್ತೆವರಿಗೆ ಸಾಕೆನ್ನುವರು.

ಎರಡನೆಯ ತಜ್ಞರು "ಕಲಿತ ಮಗ್ಗಿಯೊಳಗಿನವೆಂದು" ಹೇಳಿದ್ದರಿಂದ ಇವಲ್ಲದೆ ೧೪, ೧೬, ೧೮, ೨೦, ೨೧, ೨೪, ೨೫, ೨೭, ೨೮, ೩೦ ಮುಂ. ಗಳಿಂದ ಭಾಗಿಸಲಿಕ್ಕೆ ಈ ಇಯತ್ತೆಯ ಹುಡುಗರಿಗೆ ಬರತಕ್ಕದ್ದೆಂದು ಅಭಿಪ್ರಾಯಪಡುವರು.

ಈ ಬಗ್ಗೆ ಶಿಕ್ಷಕರ ಅನುಭವವು ಎಂತಿರುವದೆಂಬ ಬಗ್ಗೆ ಚರ್ಚೆಯಾಗುವದು ಅವಶ್ಯವಿರುವಂತೆ ತೋರುವದು.

ಸಚ್ಛಿಕ್ಷಕ

ಲೇಖಕ:— ಚಿ. ಮು. ಗದ್ದೀಗೌಡರ ವಿದ್ಯಾರ್ಥಿ ಟ್ರೇ. ಸ್ಕೂ. ಧಾರವಾಡ

ಶಿಕ್ಷಣದ ಸಾಫಲ್ಯವು ಮುಖ್ಯವಾಗಿ ಶಿಕ್ಷಕನನ್ನು ಅವಲಂಬಿಸಿದೆ. ಆದ್ದರಿಂದ ಶಿಕ್ಷಕನು ಮಾನಸ ಶಾಸ್ತ್ರವನ್ನು ಅರಿತವನೂ, ವಿದ್ವಾಂಸನೂ, ಸದ್ಗುಣಿಯೂ ವ್ಯವಸ್ಥಿತನೂ, ಸಹಾನುಭೂತಿಯುಳ್ಳವನೂ ಆಗಿರಬೇಕು. ಸಚ್ಛಿಕ್ಷಕನಲ್ಲಿರಬೇಕಾದ ಈಬಗೆಯ ಗುಣಗಳು ಯಾವವೆಂಬದನ್ನು ನೋಡುವ.

(೧) **ವಿಷಯ ಜ್ಞಾನ:**—ಶಿಕ್ಷಕನು ಬಾಲಕರಿಗೆ ಕಲಿಸತಕ್ಕ ವಿಷಯಗಳಲ್ಲಿ ಸಂಪೂರ್ಣ ನಿಷ್ಣಾತನಿರಬೇಕು. ಅಂದರೆ ಆ ವಿಷಯವನ್ನು ಬಾಲಕರಿಗೆ ಸಮಾಧಾನಕರ ವಾಗಿ ತಿಳಿಸುವನು. ತನಗೆ ಅರ್ಧಮರ್ಧ ತಿಳಿದ ವಿಷಯವನ್ನು ಚೆನ್ನಾಗಿ ಕಲಿಸಕ್ಕೆ ಯಾವನೂ ಸಮರ್ಥನಾಗಲಾರನು. ಪದ್ಧತಿಯು ಶಿಕ್ಷಣದ ಸುಗಮತೆಯ ಮಾರ್ಗ ವಾಗಿರುವದು. ಆದರೆ ವಿಷಯಜ್ಞಾನವು ಸಾಕಷ್ಟು ಇರದಿದ್ದರೆ ಬರಿಯ ಪದ್ಧತಿಯು ಹುರುಳಿಲ್ಲದ್ದಾಗುವದು. ಶಿಕ್ಷಕನು ತಾನು ಕಲಿಸುವ ವಿಷಯವನ್ನು ಪೂರಾ ಬಲ್ಲವನಾ ಗಿದ್ದರೆ ಒಂದಿಲ್ಲೊಂದು ರೀತಿಯಿಂದ ಬಾಲಕರಿಗೆ ತಿಳಿಸಿಕೊಡಲು ಸಮರ್ಥನಾಗುವನು. ಶಿಕ್ಷಣದ ಕಾರ್ಯವು ನಡೆದಾಗ ಇಂಥ ಶಿಕ್ಷಕನು ಹೊಸ ಹೊಸ ಉದಾಹರಣೆಗಳಿಂದ ಕಠಿಣ ವಿಷಯವನ್ನು ಕೂಡ ಸುಗಮವಾಗುವಂತೆ ಮಾಡುವದರಿಂದ ಬಾಲಕರ ಉತ್ಸಾಹವು ಹೆಚ್ಚುತ್ತ ಹೋಗುವದು. ಈ ಬಗೆಯಿಂದ ವರ್ಗದಲ್ಲಿ ಜೀವಕಳೆಯು ಸಂಪೂರ್ಣವಾಗಿ, ಬಾಲಕರು ಶಿಕ್ಷಕನ ವಿಷಯವಾಗಿ ಆದರಬುದ್ಧಿಯುಳ್ಳವರೂ, ವಿಧೇಯರೂ ಆಗುವರು. ವಿಷಯ ಜ್ಞಾನವುಳ್ಳ ಶಿಕ್ಷಕನಲ್ಲಿ ಕಲಿಸುವ ಧೈರ್ಯವೂ, ಆತ್ಮವಿಶ್ವಾಸವೂ ಕಂಡು ಬರುವವು. ಮೇಲಿನ ವರ್ಗದಲ್ಲಿ ಕಲಿಯತಕ್ಕ ವಿಷಯಗಳನ್ನು ಅಂಕುರ ರೂಪದಿಂದ ಬಾಲಕರು ಶಾಲೆಗಳಲ್ಲಿ ಅರಿಯಬೇಕಾಗುವದರಿಂದ ಶಿಕ್ಷಕನು ತಾನು ಕಲಿಸ ತಕ್ಕ ವಿಷಯಗಳಲ್ಲಿ ಪಾರಂಗತನಿದ್ದಂತೆ ಕಠಿಣ ವಿಷಯಗಳನ್ನು ಬಾಲಕರಿಗೆ ಅತಿ ಸುಲಭ ವಾಗುವಂತೆ ತಿಳಿಸಬಲ್ಲನು. ಪಾರಂಗತತೆಯು ಶಿಕ್ಷಕರಿಗೆ ಅವಶ್ಯವಿಲ್ಲೆಂದು ಕೆಲ ವರು ಅನ್ನುವರು. ಇಂಥವರ ಶಿಕ್ಷಣಕಾರ್ಯದ ಕಲ್ಪನೆಯು ತೀರ ಸಂಕುಚಿತವೆಂದು ಹೇಳಬಹುದು. ಟ್ರೇನಿಂಗ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ಜ್ಞಾನವನ್ನುಂಟು ಮಾಡಿಕೊಡಲಿಕ್ಕೆ ಕನಿಷ್ಠ ಪಕ್ಷಕ್ಕೆ ಎರಡು ವರುಷಗಳ ವರೆಗೆ ಟ್ರೇನಿಂಗ ಕೊಡುವದು ಅವಶ್ಯವೆಂದು ಕಂಡು ಬರುತ್ತದೆ. ಈಗಿನಂತೆ ಕೇವಲ ವ್ಹ. ಫಾ. ಪರೀಕ್ಷೆ ಪಾಸಾದ ಜನ ರಿಂದ ಶಿಕ್ಷಣ ಕಾರ್ಯವು ಯಶಸ್ವಿಯಾಗಿ ನಡೆಯಲಾರದೆಂಬದನ್ನು ಮರೆಯಕೂಡದು.

(೨) **ಪದ್ಧತಿಗಳ ರೂಢಿ:—** ಪದ್ಧತಿಯಲ್ಲಿ ಪಾಠಕ್ಕೆ ಬೇಕಾದ ಉಪಕರಣಗಳನ್ನು ಸಿದ್ಧಪಡಿಸಿಕೊಂಡು ಅವುಗಳನ್ನು ಉಪಯೋಗಿಸುವದು, ತಕ್ಕ ಪ್ರಶ್ನಗಳನ್ನು ಕೇಳುವದು, ಸಮರ್ಪಕವಾದ ದೃಷ್ಟಾಂತಗಳಿಂದ ವಿಷಯನಿರೂಪಣೆ ಮಾಡುವದು, ಕರಿ ಹಲಗೆಯ ಮೇಲೆ ಅವಶ್ಯವುಳ್ಳ ಚಿತ್ರ, ವಿಷಯದ ಸಾರಾಂಶ ಮೊದಲಾದವುಗಳನ್ನು ಬರೆಯುವದು ಇವೇ ಮೊದಲಾದವುಗಳು ಸಮಾವೇಶವಾಗುತ್ತವೆ. ಇದಲ್ಲದೆ ಬಾಲಕರ ವಿಷಯಜ್ಞಾನವು ಎಷ್ಟಿರುವದೆಂಬದನ್ನು ಅರಿತು ಅದಕ್ಕೆ ತಕ್ಕಂತೆ ಹೊಸ ಪಾಠಗಳ ಯೋಜನೆಯನ್ನು ಮಾಡಿಕೊಳ್ಳುವದೂ ಮಹತ್ವದ ಸಂಗತಿಯಾಗಿರುತ್ತದೆ. ಶಿಕ್ಷಕರಿಗೂ, ಬಾಲಕರಿಗೂ ಅನಾಯಾಸವಾಗುವಂತೆ ವಿಷಯವನ್ನು ಸಾಗಿಸುವ ಕ್ರಮಕ್ಕೆ ಪದ್ಧತಿಯೆನ್ನಬಹುದು. ಟ್ರೇನಿಂಗ ಸಂಸ್ಥೆಗಳಲ್ಲಿ ಶಿಕ್ಷಣಶಾಸ್ತ್ರ ಮತ್ತು ಶಿಕ್ಷಣಕಲೆ ಇವುಗಳ ಜ್ಞಾನವು ವಿದ್ಯಾರ್ಥಿಗಳಿಗೆ ಉಂಟಾಗುವದು ಇದಲ್ಲದೆ ಪಾಶ್ಚಾತ್ಯದೇಶಗಳಲ್ಲಿ ಬಾಲಕರ ಶಿಕ್ಷಣದ ವಿಷಯವಾಗಿ ಯಶಸ್ವಿಯಾದ ಪ್ರಯೋಗಗಳನ್ನು ಮಾಡಿದ ಫ್ರೊಬೆಲ್, ಮಾಂಟಿಸೋರಿ ಮೊದಲಾದವರ ಪದ್ಧತಿಗಳಿಂದ ಅನೇಕ ಉಪಯುಕ್ತವಾದ ಸಂಗತಿಳನ್ನು ತಿಳಿದುಕೊಳ್ಳಬೇಕು. ಪರಿಸ್ಥಿತಿಗನುಸರಿಸಿ ಪದ್ಧತಿಗಳಲ್ಲಿ ಹೆಚ್ಚುಕಡಿಮೆಯಾಗಬಹುದು. ಪಟ್ಟಣಗಳಲ್ಲಿ ಪಾಲಕರು ಸಾಮಾನ್ಯವಾಗಿ ಸುಶಿಕ್ಷಿತರಿರುವದರಿಂದ ಬಾಲಕರಿಗೆ ಎಷ್ಟೋ ಸಂಗತಿಗಳ ಜ್ಞಾನವಿರುವದು. ಮತ್ತು ಅವರು ಹೆಚ್ಚು ವ್ಯವಸ್ಥಿತರಾಗಿರುವರು. ಆದರೆ ಹಳ್ಳಿಗಳಲ್ಲಿಯ ವಾತಾವರಣವು ಶಿಕ್ಷಣಕ್ಕೆ ಅಷ್ಟು ಅನುಕೂಲವಾಗಿರುವದಿಲ್ಲ. ಪದ್ಧತಿಪೂರ್ವಕವಾಗಿ ಕೊಡುವ ಶಿಕ್ಷಣವು ಫಲಕಾರಿಯಾಗಿರುವದರಲ್ಲಿ ಸಂದೇಹವಿಲ್ಲ. ಯಾಕಂದರೆ ಪದ್ಧತಿಯು ಒಂದು ಬಗೆಯ ಹಂಚಿಕೆಯಾಗಿರುವದು. ಔಷಧವು ಒಂದೇ ಆಗಿದ್ದರೂ ಅನುಪಾನಗಳಿಂದ ಅದರ ಉಪಯೋಗವು ಆಗುವಂತೆ ಶಿಕ್ಷಣವು ಕೂಡ ಬೇರೆ ಬೇರೆ ಪದ್ಧತಿಗಳಿಂದ ಫಲಕಾರಿಯಾಗುವದು.

(೩) **ಆಳಿಕೆಯ ಸಾಮರ್ಥ್ಯ :—** ಶಿಕ್ಷಣಕಾರ್ಯವನ್ನು ಸಾಗಿಸುವವನು ಕವಿಯಂತೆ ಜನ್ಮಸಿದ್ಧ ಶಿಕ್ಷಕನಾಗಿದ್ದರೆ ಅವನಲ್ಲಿ ಆಳಿಕೆಯ ಸಾಮರ್ಥ್ಯವು ಹುಟ್ಟುಗುಣವಾಗಿರುವದು. ವರ್ಗದಲ್ಲಿ ವ್ಯವಸ್ಥೆಯನ್ನು ಕಾದುಕೊಳ್ಳಲಿಕ್ಕೆ ಈ ಗುಣವು ಅವಶ್ಯಕವಾದದ್ದು. ಗಾಂಭೀರ್ಯ, ಸಹನಶೀಲತೆ, ತಕ್ಕಧ್ವನಿ, ಧೈರ್ಯ ಇವೇ ಮೊದಲಾದ ಗುಣಗಳು ಶಿಕ್ಷಕನಲ್ಲಿ ಇದ್ದ ಹಾಗೆ ಅವನ ಆಳಿಕೆಯ ಸಾಮರ್ಥ್ಯಕ್ಕೆ ಹೆಚ್ಚು ಕಳೆಯೇರುವದು. ಇಂಥ ಶಿಕ್ಷಕರಿಗೆ ಬಾಲಕರು ಸ್ವಾಭಾವಿಕವಾಗಿ ವಿಧೇಯರಾಗುವರು. ಶಿಕ್ಷಕನು ಎಷ್ಟೇ ಜಾಣನಿದ್ದರೂ ಆಳಿಕೆಯ ಸಾಮರ್ಥ್ಯವು ಒಂದು ಅವನಲ್ಲಿರದಿದ್ದರೆ ಆ ಜಾಣತನದ ಉಪಯೋಗವಾಗಲಾರದು. ವರ್ಗದ ಸುವ್ಯವಸ್ಥೆಯಿಂದ ಶಾಂತತೆಯು ನೆಲೆಗೊಳ್ಳುವದು. ಶಾಂತತೆಯೇ ಬಾಲಕರ ಅವಧಾನದ ಜೀವಾಳವಾಗಿರುವದು. ಇಂಥ ಶಿಕ್ಷಕನು ಅವರ ಮನಸ್ಸನ್ನು ಶಿಕ್ಷಣದ ಚಾತುರ್ಯದಿಂದ ತನ್ನ ವಶದಲ್ಲಿಟ್ಟುಕೊಂಡು ಶಿಕ್ಷ

ಣದ ರುಚಿಯು ಮಕ್ಕಳಿಗೆ ಹತ್ತುವಂತೆ ಮಾಡುವನು. ಶಿಕ್ಷಣದ ಕಾಲವು ಬಹಳ ಮಹತ್ವದ್ದಾಗಿರುವದರಿಂದ ಆಳಿಕೆಯ ಸಾಮರ್ಥ್ಯವುಳ್ಳ ಶಿಕ್ಷಕನಿಂದ ಬಾಲಕರು ಅನೇಕ ಸದ್ಗುಣಗಳನ್ನು ಕಲಿಯುವರು. ಹುಡುಗರ ಮುಖಲಕ್ಷಣದಿಂದ ಅವರ ಇಂಗಿತವನ್ನು ತಿಳಿದುಕೊಳ್ಳುವ ಜ್ಞಾನವಿದ್ದ ಶಿಕ್ಷಕನ ವರ್ಗದಲ್ಲಿ ಗದ್ದಲವಾಗಲಾರದು. ಸನ್ನೆಯಿಂದಲೇ ವ್ಯವಸ್ಥೆಯನ್ನು ಕಾದುಕೊಂಡರೆ ವ್ಯವಸ್ಥೆಗೆ ಭಂಗವು ಬರುವದದಿಲ್ಲ. ಶಿಕ್ಷಕನ ರೂಪವೂ, ಉಡಿಗೆ-ತೊಡಿಗೆಗಳೂ ವ್ಯವಸ್ಥೆಗೆ ಒಮ್ಮೊಮ್ಮೆ ಕಾರಣವಾಗಿರುತ್ತವೆ. ಹೀಗೆ ಅನೇಕ ಸಂಗತಿಗಳು ಆಳಿಕೆಯ ಸಾಮರ್ಥ್ಯಕ್ಕೆ ಸಂಬಂಧಿಸಿರುವವು. ಯೋಗ್ಯ ಶಿಕ್ಷಕರ ಅನುಕರಣದಿಂದಲೂ ಪ್ರಯತ್ನದಿಂದಲೂ ಈ ಗುಣವನ್ನು ಸಂಪಾದಿಸಬಹುದು.

(೪) **ಪ್ರೀತಿ:**—ಶಿಕ್ಷಕನಲ್ಲಿ ಬಾಲಕರ ವಿಷಯವಾಗಿ ಸಂಪೂರ್ಣ ಪ್ರೀತಿಯು ಇರುವದು ಅವಶ್ಯವಿದೆ. ಚಿಕ್ಕಮಕ್ಕಳು ಮನೆಯಲ್ಲಿ ತಾಯಿತಂದೆ-ಬಳಗದವರ ಕೂಡ ಪ್ರೇಮದಿಂದ ಬೆಳೆದು, ನಡೆ-ನುಡಿ ಮೊದಲಾದವುಗಳನ್ನು ಕಲಿತಿರುವರು. ಆದದರಿಂದ ಶಾಲೆಯಲ್ಲಿ ಮನೆಯಂತೆಯೇ ಮಮತೆಮಾಡುವ ಶಿಕ್ಷಕನಿದ್ದರೆ ಬಾಲಕರು ಸಂತೋಷದಿಂದ ಶಾಲೆಗೆ ಬರುವರು; ಹೇಳಿದ ಮಾತುಗಳನ್ನು ಕೇಳುವರು; ಕಲಿಸಿದ ಪಾಠಗಳನ್ನು ಕಲಿಯುವರು. ಶುದ್ಧ ಪ್ರೇಮದಿಂದ ನಡೆಯುವ ಗುಣವಿದ್ದರೆ ಮಾತ್ರ ಉತ್ತಮ ಶಿಕ್ಷಕರಾಗಬಹುದು. ಶಾಲೆಗೂ ಮನೆಗೂ ಭೇದತೋರಬಾರದೆಂದೇ ಆರಂಭದ ಶಿಕ್ಷಕರು ಸ್ತ್ರೀಯರಿರಬೇಕೆಂದು ಕೆಲವರು ಹೇಳುವರು. ಮಕ್ಕಳ ವಿಷಯವಾಗಿ ಸ್ತ್ರೀಯರಲ್ಲಿರುವಂತೆ ಶುದ್ಧ ಪ್ರೇಮವು ಶಿಕ್ಷಕನಲ್ಲಿದ್ದರೆ ಸಾಕು; ಶಿಕ್ಷಣ ಕಾರ್ಯವು ಫಲಕಾರಿಯಾಗುವದು. ಚಿಕ್ಕಮಕ್ಕಳ ಮನೋವೃತ್ತಿಗಳು ಕೋಮಲವಾಗಿರುವದರಿಂದ ಅವು ವಿಕಾಸಹೊಂದುವಂತೆ ತಕ್ಕ ರೀತಿಯಿಂದ ಬೆಳೆಯಿಸಲಿಕ್ಕೆ ಶಿಕ್ಷಕನಿಗೆ ಪ್ರೇಮದಂಥ ಮತ್ತೊಂದು ಸಾಧನವು ಯಾವದೂ ಇಲ್ಲವೆಂದು ಹೇಳಬಹುದು. ಇದಕ್ಕೆ ವಿಪರೀತವಾಗಿ ಶಿಕ್ಷಕನು ಶೀಘ್ರಕೋಪಿಯೂ, ಕಠೋರವೃತ್ತಿಯುಳ್ಳವನೂ ಆದರೆ ಶಿಕ್ಷಣವು ಕೆಟ್ಟು ಹೋಗುವದು. ಆದ್ದರಿಂದ ಶಿಕ್ಷಣದ ಸುಪರಿಣಾಮವು ಶಿಕ್ಷಕನಲ್ಲಿರುವ ಮಕ್ಕಳ ಮೇಲಿನ ಶುದ್ಧ ಪ್ರೇಮವನ್ನೇ ಅವಲಂಬಿಸಿರುವದು. ಜಗತ್ತೇ ಪ್ರೇಮಮಯವಾಗಿರುವದರಿಂದ ಶಾಲೆಗಳು ಜನತೆಯಲ್ಲಿ ಪ್ರೇಮ, ಭಕ್ತಿ, ವಿಶ್ವಾಸಗಳನ್ನು ಉಂಟುಮಾಡುವ ಸಂಸ್ಥೆಗಳೆಂದು ತಿಳಿದುಕೊಂಡು ಶಿಕ್ಷಣಕಾರ್ಯದಲ್ಲಿ ತೊಡಗುವ ಶಿಕ್ಷಕರು ಸಂಪೂರ್ಣ ಯಶಸ್ವಿಗಳಾಗುವರು.

(೫) **ವರ್ಣನಾಶಕ್ತಿ:**—ವರ್ಣನಾಶಕ್ತಿಯು ಶಿಕ್ಷಕನಲ್ಲಿ ಹೆಚ್ಚು ಹೆಚ್ಚು ಇದ್ದ ಹಾಗೆ ಶಿಕ್ಷಣದ ಅಭಿರುಚಿಯು ಹುಡುಗರಲ್ಲಿ ಉಂಟಾಗುತ್ತ ಹೋಗುವದು. ಬಾಲಕರಿಗೆ ಹೊಸ ಹೊಸ ವಿಷಯಗಳು ತಿಳಿಯುತ್ತ ಹೋದಂತೆ ಅವರ ಬುದ್ಧಿಯು ಹೆಚ್ಚುತೀಕ್ಷ್ಣವೂ,

ಅವರ ಜಿಜ್ಞಾಸೆಯು ಪ್ರಬಲವೂ ಆಗುವದರಿಂದ ಅವರು ವಿದ್ಯೆಯಲ್ಲಿ ಮುಂದುವರಿಯುವರು.

ಉದಾ:— ಕಥೆಗಳನ್ನು ಹೇಳುವದಕ್ಕೂ ಕವಿತೆ ವಾಚನ ಪಾಠಗಳ ಭಾವವನ್ನು ತಿಳಿಸುವದಕ್ಕೂ ಇತಿಹಾಸದಲ್ಲಿಯ ಚರಿತ್ರೆಗಳನ್ನು ವಿವರಿಸಲಿಕ್ಕೂ ಶಿಕ್ಷಕನಿಗೆ ಈ ಶಕ್ತಿಯು ಅವಶ್ಯವಾದ ಸಾಧನವು. ಸವಿಯಾಗಿ ಮಾತಾಡುವ ಶಿಕ್ಷಕರ ಮಾತುಗಳನ್ನು ಪಾಲಿಸಲು ಬಾಲಕರು ಉತ್ಸುಕರಾಗುವರು. ಆದರೆ ತೊದಲುತ್ತ ಪಾಠಗಳನ್ನು ನಡಿಸುವ ಶಿಕ್ಷಕನ ಪಾಠಗಳು ಬಾಲಕರಲ್ಲಿ ತಲೆಬೇಸರವನ್ನು ಹುಟ್ಟಿಸುವವು. ಆದದರಿಂದ ಸುಲಭವಾದ ಶಬ್ದಗಳಿಂದ ಬಾಲಕರಿಗೆ ಮನೋರಂಜಕವಾಗುವಂತೆ ಪಾಠಗಳನ್ನು ನಡಿಸಲು ಸಮರ್ಥರಾದ ಶಿಕ್ಷಕರು ತಮ್ಮ ಕೆಲಸದಲ್ಲಿ ಹೊಗಳಿಸಿಕೊಳ್ಳುವರು. ಒಮ್ಮೊಮ್ಮೆ ಪಾಠಗಳನ್ನು ವಿಸ್ತರಿಸಿ ಮನೋರಂಜಕವಾಗುವಂತೆ ಹೇಳಬೇಕಾಗುವದು. ಕಠಿಣ ವಿಷಯಗಳ ಶಿಕ್ಷಣವು ಗಹನವಾಗಿರುವದರಿಂದ ಗಣಿತ, ವ್ಯಾಕರಣ ಮೊದಲಾದ ವಿಷಯಗಳ ಪಾಠಗಳನ್ನು ಪೂರಕ ಪಾಠಗಳಂತೆ ಬೇರೆ ವಿಷಯಗಳಿಗೆ ಸಂಬಂಧಿಸಿಯಾಗಲಿ, ಅಥವಾ ಲೋಕವ್ಯವಹಾರಕ್ಕೆ ಹೊಂದಿಸಿಯಾಗಲಿ ಹೇಳಿದರೆ ಹುಡುಗರು ಬೇಸರಿಲ್ಲದೆ ಕಲಿಯುವರು. ಮತ್ತು ಹೆಚ್ಚು ಕಠಿಣ ವಿಷಯಗಳನ್ನು ಒಂದೇಸವನೇ ಅಭ್ಯಾಸಿಸಲಿಕ್ಕೆ ಯೋಗ್ಯರಾಗುವರು. ಶಿಕ್ಷಣ ಶಾಸ್ತ್ರವು ಶಿಕ್ಷಣದ ದಾರಿಯನ್ನು ತೋರಿಸುವದು. ಅಂತೆಯೇ ಶಿಕ್ಷಣದ ಪದ್ಧತಿಯು ವಿಷಯನಿರೂಪಣೆಯ ಮಾರ್ಗವನ್ನು ತಿಳಿಸುವದು. ಆದರೆ ಶಿಕ್ಷಣದಲ್ಲಿಯ ತೊಂದರೆಗಳನ್ನು ನೀಗಿಸಲಿಕ್ಕೆ ವರ್ಣನಾಶಕ್ತಿಯೇ ಮುಖ್ಯ ಸಾಧನವು. ಬಾಲಕರಿಗೆ ಬೇಸರಬಂದಾಗ ಅಥವಾ ವಿಷಯವು ಕಠಿಣವೆನಿಸಿದಾಗ ಶಿಕ್ಷಕನಲ್ಲಿರುವ ವರ್ಣನಾಶಕ್ತಿಯು ಬಹಳ ಉಪಯೋಗಬೀಳುವದು. ಈ ಶಕ್ತಿಯು ಒಂದು ಕಲೆಯಾಗಿರುವದು. ವಿಷಯವನ್ನು ಉತ್ತಮ ರೀತಿಯಿಂದ ಮಾಡಿಸುವದು ಸಾಮಾನ್ಯ ಕೆಲಸವಲ್ಲ. ಶಿಕ್ಷಕನು ಅನೇಕ ಸಂಗತಿಗಳನ್ನು ಓದಿದವನೂ, ಬಹುಶ್ರುತನೂ ಆಗಿರಬೇಕಲ್ಲದೆ ಹೊಸ ಹೊಸ ಪುಸ್ತಕಗಳನ್ನು ಓದುವವನಾಗಬೇಕು. ಶಸ್ತ್ರವೈದ್ಯರಿಗೆ ಶಸ್ತ್ರಗಳು ಅವಶ್ಯವಿದ್ದಂತೆ ಶಿಕ್ಷಕನಿಗೆ ಪುಸ್ತಕಗಳು ಅವಶ್ಯವು. ಶಿಕ್ಷಕನಿಗೆ ಸಂಗೀತದ ಅಭಿರುಚಿಯಿದ್ದರೆ ಚಿಕ್ಕಮಕ್ಕಳನ್ನು ಅವನು ಕೂಡಲೆ ವಶಮಾಡಿಕೊಳ್ಳುವನು.

(೬) ಗಾಂಭೀರ್ಯ ಹಾಗೂ ಸ್ವಾಭಾವಿಕ ಉಡಿಗೆ-ತೊಡಿಗೆಗಳು- ಚಿಕ್ಕ ವಯಸ್ಸಿನಲ್ಲಿ ಬಾಲಕರ ಮನಸ್ಸು ಭಾವಚಿತ್ರದ ಯಂತ್ರದ ಕನ್ನಡಿಯಂತೆ ಇರುವದು. ಅವರು ಕಣ್ಣಿಗೆ ಕಂಡ ಸಂಗತಿಗಳ ಅನುಕರಣವನ್ನು ಕೂಡಲೆ ಮಾಡುವರು. ಒಮ್ಮೆ ಅವರಲ್ಲಿ ಉಂಟಾದ ಭಾವನೆಯನ್ನು ಅಳಿಸುವದು ಬಲು ಕಠಿಣವು. ಶಿಕ್ಷಕನು ಯಾವಾಗಲೂ ಹುಡುಗರ ಎದುರಿಗೆ ಇರುವದರಿಂದ ಅವನು ಎಲ್ಲ ರೀತಿಯಿಂದ ಹುಡುಗರಿಗೆ ಅನುಕರಣೀಯನಾಗಿರಬೇಕು. ಶಿಕ್ಷಕನು ಅಧೀರಚಿತ್ತನಾಗಿ ಕ್ಷಣಕ್ಕೊಮ್ಮೆ

ಬದಲಾಗುವ ಸ್ವಭಾವದವನಿರಬಾರದು. ಅಥವಾ ಒಮ್ಮೆಲೆ ಹಿಗ್ಗುವ ಅಥವಾ ತಗ್ಗುವ ಗುಣವುಳ್ಳವನಿರಬಾರದು. ಮತ್ತು ವಿದ್ಯಾರ್ಥಿಗಳು ಮಾಡುವ ಸಣ್ಣಪುಟ್ಟ ಸಂಗತಿಗಳನ್ನು ಲಕ್ಷಿಸಿ ವಿಕಾರಸ್ವಭಾವದಿಂದ ನಡೆಯಕೂಡದು. ಯಾವಾಗಲೂ ತಾಳ್ಮೆಯಿಂದ ನಡೆಯುವಂಥವನಿರಬೇಕು. ಒಮ್ಮೊಮ್ಮೆ ಪರಸ್ಪರ ವಿರೋಧವಾದ ಸಂಗತಿಗಳು ಸಹ ಶಾಲೆಯಲ್ಲಿ ಜರುಗಬಹುದು. ಅಂಥ ಪ್ರಸಂಗದಲ್ಲಿ ಅವೆರಡನ್ನೂ ಆಲೋಚಿಸಿ ವಿಕಾರವಶನಾಗದೆ ವಿವೇಕದಿಂದ ನಡೆಯುವ ಗಾಂಭೀರ್ಯವುಳ್ಳ ಶಿಕ್ಷಕರು ಯಶಸ್ವಿಗಳಾಗುವರು.

(ಬ) ಉಡಿಗೆ ತೊಡಿಗೆ:— ಶಿಕ್ಷಕನ ಉಡಿಗೆತೊಡಿಗೆಗಳಿಗೂ ಗುಣಗಳಿಗೂ ಪರಸ್ಪರ ಸಂಬಂಧವಿರುವದು. ಆದುದರಿಂದ ಶಿಷ್ಟಸಾಂಪ್ರದಾಯಕ್ಕೆ ಅನುಸರಿಸಿ ತನ್ನ ಯೋಗ್ಯತೆಗೆ ತಕ್ಕಂತೆ ಬಟ್ಟೆಗಳನ್ನು ಧರಿಸುವದು ಅವಶ್ಯವು. ಇಂಥ ಬಟ್ಟೆಗಳು ಸ್ವಚ್ಛವಾದವೂ, ಸ್ವಲ್ಪ ಬೆಲೆಗೆ ದೊರೆಯುವಂಥವೂ ಇರಬೇಕು.

(೭) ಶಾಲೆಯ ವಿಷಯವಾಗಿ ಅಭಿಮಾನ:— ಶಾಲೆಯು ವಿದ್ಯೆಯನ್ನು ಕೊಡುವ ಸರಸ್ವತಿಯ ಮಂದಿರವಾದುದರಿಂದ ಶಿಕ್ಷಕರು ಶಾಲೆಯ ವಿಷಯವಾಗಿ ಸಂಪೂರ್ಣ ಅಭಿಮಾನವುಳ್ಳವರಾಗಿರಬೇಕು. ಶಾಲೆಯ ಮನೆಯು ಹವೆಬೆಳಕುಗಳುಳ್ಳದ್ದೂ ಸ್ವಚ್ಛವಾದದ್ದೂ ಸುಂದರವಾದದ್ದೂ ಇರುವಂತೆ ಶಿಕ್ಷಕರು ಪ್ರಯತ್ನಿಸತಕ್ಕದ್ದು. ಈ ವಿಷಯದಲ್ಲಿ ಅವರು ಉತ್ಸುಕರಿದ್ದಂತೆ ಶಿಕ್ಷಣದ ಕಾರ್ಯವು ಸುಗಮವಾಗುವದು. ಶಾಲೆಯ ಕೀರ್ತಿಯು ಹೆಚ್ಚಾಗುವಂತೆ ಮುಖ್ಯ ಶಿಕ್ಷಕರು, ಉಪಶಿಕ್ಷಕರ (ಅಸಿಸ್ಟಂಟ ಮಾಸ್ತರ) ಕೂಡ ಸಹಾನುಭೂತಿಯಿಂದ ನಡೆದರೆ ಅವರು ವಿಧೇಯರಾಗಿಯೂ, ಮನಃಪೂರ್ವಕವಾಗಿಯೂ ಕೆಲಸಮಾಡುವರು. ಉಪಶಿಕ್ಷಕರು ಮುಖ್ಯ ಶಿಕ್ಷಕರ ಕೂಡ ಗೌರವದಿಂದ ನಡೆದು ಅವರ ಅನುಭವ ಜ್ಞಾನಗಳ ಲಾಭವನ್ನು ಮಾಡಿಕೊಳ್ಳಬೇಕು. ಶಾಲೆಯು ಪೂಜ್ಯ ಸ್ಥಳವಾದುದರಿಂದ ಶಿಕ್ಷಕರು ಬಾಲಕರಿಗೆ ಅಪಶಬ್ದಗಳಾಡುವದನ್ನೂ ಹೊಡೆಯುವದನ್ನೂ ಖಂಡಿತವಾಗಿ ನಿಲ್ಲಿಸಬೇಕು. ಶಿಕ್ಷಣ ಕಾರ್ಯವು ಶಾಲೆಗಳಲ್ಲಿ ನಿಯಮಿತವಾಗಿಯೂ, ಉತ್ಸಾಹಭರಿತವಾಗಿಯೂ ನಡೆದರೆ ಶಾಲೆಯ ಗೌರವವು ಹೆಚ್ಚಾಗುತ್ತ ಸಾಗುವದು.

ಪ್ರಾಚೀನಕಾಲದ ಸ್ಕೌಟ ಶಿಕ್ಷಣವು

ಲೇಖಕ:— ಕಾಲೇಸಾ ಹು॥ ಇಲಕಲ್ಲ ಟ್ರೇ. ಸ್ಕೂ. ವಿ. ಧಾರವಾಡ

ಪ್ರಾಚೀನಕಾಲದಲ್ಲಿ ಸ್ಕೌಟರರು ಇದ್ದರೋ ಇಲ್ಲವೋ ಎಂಬವನ್ನು ಮೊಟ್ಟ ಮೊದಲು ತಿಳಕೊಳ್ಳಬೇಕಾದ ಸಂಗತಿಯು ಅವಶ್ಯವಾದುದು—ಆಗಿನ ಕಾಲದಲ್ಲಿ ಜನರು ತಮ್ಮ ಮಕ್ಕಳನ್ನು ಉಪನಯನ ಸಂಸ್ಕಾರವನ್ನು ಮಾಡಿದ ಕೂಡಲೆ ಗುರುಕುಲಕ್ಕೆಂದು ಗುರುಗಳ ಆಶ್ರಮಕ್ಕೆ ಅಧ್ಯಯನಕ್ಕಾಗಿ ಕಳಿಸುವ ರೂಢಿ ಇತ್ತು. ಆ ಬಳಿಕ ಮಕ್ಕಳು ೮ನೆಯ ವಯಸ್ಸಿನಿಂದ ೧೬ನೆಯ ವಯಸ್ಸಿನವರೆಗೆ ಆ ಗುರುಕುಲದ ಗುರುಗಳ ಅಧೀನದಲ್ಲಿಯೇ ಇರಬೇಕಾಗುತ್ತಿತ್ತು. ಅವರು ಸದಾಕಾಲವೂ ಗುರುಗಳ ಸೇವೆಯಲ್ಲಿಯೇ ನಿರತರಾಗಿರಬೇಕಾಗಿತ್ತು. ಗುರುಗಳು ವಹಿಸಿದ ಕಾರ್ಯಗಳಲ್ಲಿ ಎಷ್ಟು ಪ್ರಕಾರದ ಕಠಿಣ ಪ್ರಸಂಗಗಳು ಬಂದೊದಗಿದರೂ ಕೂಡ ಅವುಗಳನ್ನು ಲೆಕ್ಕಿಸದೆ ಗುರುಗಳ ಮೇಲೆ ಸಂಪೂರ್ಣ ವಿಶ್ವಾಸವನ್ನಿಟ್ಟು ತಾನು ವಹಿಸಿದ ಕಾರ್ಯವನ್ನು ಫಲಾಪೇಕ್ಷೆ ಇಲ್ಲದೆ ಪೂರ್ಣಗೊಳಿಸುವದಕ್ಕಾಗಿ ದಕ್ಷತೆಯಿಂದ ತತ್ಪರವಾಗಿರಬೇಕಾಗಿತ್ತು.

ಈ ಗುರುಕುಲವಾಸವೆಂದರೆ ಕೇವಲ ಅರಣ್ಯದಲ್ಲಿ ಪರ್ಣಕುಟೀರವನ್ನು ತಾವೇ ಕಟ್ಟುವದಕ್ಕಾಗಿ ಬೇಕಾಗುವಂಥ ಗಿಡ, ಟೊಂಗೆ, ಎಲೆ, ಮುಂತಾದ ಸಾಧನಗಳನ್ನು ತಾವೇ ಹೋಗಿ ಅರಣ್ಯವನ್ನೆಲ್ಲ ಸುತ್ತುಹಾಕಿಕೊಂಡು ಅಲ್ಲೊದಗುವ ಕಷ್ಟಗಳನ್ನೂ ವೇದನೆಗಳನ್ನೂ ಸಹಿಸುತ್ತ ದೊರಕಿಸಿಕೊಂಡು ಬಂದು ಅಂದವಾಗಿಯೂ, ಅಚ್ಚುಕಟ್ಟಾಗಿಯೂ ಭದ್ರವಾಗಿಯೂ ಬಿಸಿಲು ಮಳೆಗಳಿಂದ ಬಾಧೆಯು ತಟ್ಟದಂತೆಯೂ, ಇರುವಂಥ ಕುಟೀರವನ್ನು ಕಟ್ಟಿಕೊಂಡು ಗುರುಗಳಲ್ಲಿ ವಿದ್ಯಾಭ್ಯಾಸ ಮಾಡುವದು. ಈ ಅರಣ್ಯದಲ್ಲಿರುವಾಗ ಗಡ್ಡೆ ಗೆಣಸು ಮೊದಲಾದವುಗಳನ್ನು ದೊರಕಿಸಿಕೊಂಡು ಬಂದು ಆಹಾರವನ್ನಾಗಿ ಸೇವಿಸಬೇಕಾಗುವದು. ಇಂಥ ಸಂದರ್ಭಗಳಲ್ಲಿ ಗುರುಕುಲವಾಸಿಗೆ ಆಹಾರಕ್ಕೆ ಯೋಗ್ಯವಾದ ಗಡ್ಡೆಗೆಣಸುಗಳಾವವು, ಮತ್ತು ಔಷಧೋಪಚಾರಕ್ಕೆ ತಕ್ಕ ವನಸ್ಪತಿಗಳಾವವು, ಮೂರ್ಛೆಬರುವ ಸ್ಮೃತಿತಪ್ಪಿಸುವ ಇಲ್ಲವೆ ಜೀವಹರಣಮಾಡುವಂಥ ಗಿಡಮೂಲಿಕೆಗಳಾವವು ಎಂಬದರ ಬಗ್ಗೆ ಜ್ಞಾನವಾಗುತ್ತಿತ್ತು. ಮತ್ತು ಆಹಾರಕ್ಕೆ ಯೋಗ್ಯವಾದ ಗಡ್ಡೆಗೆಣಸುಗಳನ್ನು ಅಡಿಗೆ ಮಾಡಲು ಸಹ ಅವರು ಅರಿತಿರಬೇಕಾಗುತ್ತಿತ್ತು, ಇದಲ್ಲದೆ ವನನಿವಾಸದಲ್ಲಿ ಸಂಭವಿಸುವ ಆಪತ್ತುಗಳ ಚಿಕಿತ್ಸೆಯು ಸಹ ಅವರಿಗೆ ಗೊತ್ತಿರಬೇಕಾಗುತ್ತಿತ್ತು; ಅಂದರೆ ತಕ್ಕಮಟ್ಟಿಗೆ ವೈದ್ಯವಿದ್ಯೆಯು (ಪ್ರಥಮ ಚಿಕಿತ್ಸೆ) ಸಹ ಗೊತ್ತಿರಬೇಕಾಗುತ್ತಿತ್ತು. ಇದಲ್ಲದೆ ಆತ್ಮರಕ್ಷಣೆಯ ಸಲುವಾಗಿ ಅವಶ್ಯವಾದ ಧನು

ರ್ವಿದ್ಯೆ ಮೊದಲಾದವುಗಳೂ ಮತ್ತು ಹಿಂಸ್ರ ಪಶುಪಕ್ಷಿ ಮೊದಲಾದವುಗಳ ಬಾಧೆ ತಟ್ಟ ದಂತೆ ನೋಡಿಕೊಳ್ಳುವದಕ್ಕೆ ಯುಕ್ತಿಪ್ರಯುಕ್ತಿಗಳೂ ಸಮಯಸೂಚಕತನವೂ ಬೇಕಾಗುತ್ತಿದ್ದವು. ಉದಾ-- ಈಸುವದು, ಬೆಂಕಿಯನ್ನು ಕಟ್ಟಿಗೆಗಳಿಂದ ತಿಕ್ಕಿ ಹೊರಡಿಸುವದು, ನದಿ ಮೊದಲಾದವುಗಳ ಮೇಲೆ ಪೂಲು ಕಟ್ಟುವದು, ಸಂಕೇತ ಭಾಷೆಗಳು, ಕೃಷಿಕರ್ಮ, ಜ್ಯೋತಿಷ್ಯಶಾಸ್ತ್ರ, ಕಲಾಕೌಶಲ್ಯ ಮೊದಲಾದ ವ್ಯವಹಾರೋಪಯೋಗಿ ವಿಷಯಗಳಾದ ಸ್ವಾವಲಂಬನದ ಸಂಗತಿಗಳು ಗೊತ್ತಾಗಬೇಕಾಗುತ್ತಿದ್ದವು. ಇದಕ್ಕೆ ತಕ್ಕ ಉದಾಹರಣೆಯು ಬೇಕಾದರೆ ಶ್ರೀಕೃಷ್ಣನೇ ಸಾಕ್ಷಿಯು.

ಭಕ್ತಸುಮದಾಸ, ಶ್ರೀಕೃಷ್ಣ, ಪಾಂಡವರು, ವಿಭೀಷಣ, ಪರಶುರಾಮ, ಆಂಜನೇಯ, ಮೊದಲಾದವರೂ ಐತಿಹಾಸಿಕ ಕಾಲದಲ್ಲಿ ಶ್ರೀ ಸಮರ್ಥ ರಾಮದಾಸರೂ ಅವರ ಸಹಸ್ರಾವಧಿ ಶಿಷ್ಯರೂ ಮತ್ತು ಗೋಬ್ರಾಹ್ಮಣ ಪ್ರತಿಪಾಲಕನೆಂಬ ಬಿರುದನ್ನು ಧರಿಸಿದ ಶಿವಾಜಿ, ತಾನಾಜಿ, ಮೊದಲಾದವರು ಸಹ ಮಿಗಿಲಾದ ಸ್ಕೌಟರೆಂದೆನ್ನಲು ಏನೂ ಅಭ್ಯಂತರವಿಲ್ಲ. ಯಾಕಂದರೆ– ಈ ಸ್ಕೌಟ ಚಳವಳಿಗೆ ಒಳಪಟ್ಟಿರುವ ಎಲ್ಲ ವಿಷಯಗಳೂ ಅವರಲ್ಲಿ ಚಿಕ್ಕಂದಿನಲ್ಲಿಯೇ ನೆಲೆಗೊಂಡಿದ್ದವು. ಮೌರ್ಯ ಚಂದ್ರಗುಪ್ತನ ಕಾಲದಲ್ಲಿಯ ಶಿಕ್ಷಣ ಕ್ರಮ, ನಾಗರಿಕತೆ, ಬಂಧುವಿಶ್ವಾಸ, ರಾಜಭಕ್ತಿ, ದೇಶಾಭಿಮಾನ, ವೀರ್ಯ ಶೌರ್ಯ, ಔದಾರ್ಯಗಳನ್ನು ನೋಡಿ, ಸ್ವಲ್ಪ ವಿಚಾರ ಮಾಡಲಾಗಿ ಆಗಿನ ಕಾಲದಲ್ಲಿ ಸ್ಕೌಟ ಈ ಹೆಸರು ಪ್ರಚಾರದಲ್ಲಿ ಬರದಿದ್ದರೂ ಸ್ಕೌಟಚಳವಳಿಯಲ್ಲಿರುವ ವಿಷಯದ ಸಂಗತಿಗಳನ್ನೇ ಅವರು ಅನುಸರಿಸುತ್ತಿದ್ದರೆಂದು ಕಂಡುಬರುವದು.

ರಾಜನೀತಿ, ಕಷ್ಟಸಹಿಷ್ಣುತೆ, ಕುಟಿಲತಂತ್ರ, ಗುಪ್ತಾಲೋಚನೆ, ಸ್ವರಾಜ್ಯ ಸ್ಥಾಪನೆ, ಮೊದಲಾದವುಗಳಲ್ಲಿ ಹೆಸರನ್ನು ಪಡೆದಂಥವರು ಸ್ಕೌಟುಗಳಲ್ಲೆಂದು ಯಾರು ಹೇಳುವರು ? ಈ ಸಂಗತಿಗಳು ಮುದ್ರಾರಾಕ್ಷಸವೆಂಬ ಗ್ರಂಥದಿಂದ ಚೆನ್ನಾಗಿ ವಿದಿತವಾಗುವವು. ಮರಾಠರ ಕಾಲಕ್ಕೆ ಹೆಸರು ಪಡೆದ ರಾಮದಾಸ ಸದ್ಗುರುಗಳು, ಶ್ರೀ ಶಿವಾಜಿ ಮಹಾರಾಜರು, ಜೀಜಾಬಾಯಿ, ಏಸುಬಾಯಿ, ಸಂಭಾಜಿ ಮಹಾರಾಜ, ರಾಜಕುವರ, ತಾನಾಜಿ, ನೇತಾಜಿ, ಬಾಜಿ, ಮೊದಲಾದ ಶೂರವೀರರು ಸ್ವರಾಜ್ಯ ಸ್ಥಾಪನೆಯ ಸ್ವತಂತ್ರ ನಿಶಾನೆಯನ್ನು ನಿಲ್ಲಿಸಬೇಕಾದ ಸಂದರ್ಭಗಳಲ್ಲಿ ಎಷ್ಟು ಕಷ್ಟಗಳನ್ನೂ ತಾಪಗಳನ್ನೂ ಸಹಿಸಿ ತಮ್ಮ ಸ್ವಾಮಿಕಾರ್ಯದಲ್ಲಿ ಸ್ವಾಮಿನಿಷ್ಠತೆಯನ್ನು ತೋರಿಸಲಿಲ್ಲ ! ಈ ಸಂಗತಿಗಳು ಕರ್ನಾಟಕದ ಶ್ರೇಷ್ಠ ಕಾದಂಬರಿಕಾರರಾದ ಶ್ರೀ ಗಳಗನಾಥ ಇವರ ಗ್ರಂಥಗಳಿಂದ ಚೆನ್ನಾಗಿ ಕಂಡುಬರುವವು. ಕರ್ನಾಟಕದಲ್ಲಿ ಶ್ರೀ ವಿದ್ಯಾರಣ್ಯ ಮಾಧವಾಚಾರ್ಯ, ಹುಕ್ಕರಾಜ, ಬುಕ್ಕರಾಜ, ವೆಂಕಟಾದ್ರಿ, ಹನುಮನಾಯಕ, ಲಕ್ಷ್ಮಣನಾಯಕ ಮೊದಲಾದ ಕನ್ನಡವೀರರು ಸ್ಕೌಟರಲ್ಲವೇ ? ಇವರೆಲ್ಲರೂ ನಿಜವಾದ ಸ್ಕೌಟರೇ.

ನಮ್ಮಲ್ಲಿ ಅನೇಕರು ಬಿ. ಏ., ಎಮ್. ಏ., ಪರೀಕ್ಷೆ ಕೊಟ್ಟಿದ್ದರೂ ತಕ್ಕ ಸುಧಾರಣೆಯಾಗಿಲ್ಲವೆಂದು ಜನತೆಯು ಸಾರುತ್ತಿರುವದು. ಹಿಂದಿನಕಾಲದ ಶಿಕ್ಷಣವು ಹೀಗಿರಲಿಲ್ಲ. ಗುರುಕುಲವಾಸದಲ್ಲಿ ಎಷ್ಟೋ ದಿವಸಗಳವರೆಗೆ ಸೇವೆಯನ್ನು ಮಾಡಿ, ಗುರುವಿನ ಪ್ರಸನ್ನತೆಯನ್ನು ಪಡೆಯುವದೇ ಇಷ್ಟವಾಗಿತ್ತು. ಆಗ ಗುರುಗಳು ತಮ್ಮ ಹಸ್ತವನ್ನಿಟ್ಟರೆ ತೀರಿತು. ಶಿಷ್ಯನು ಜ್ಞಾನಿಯಾಗುತ್ತಿದ್ದನು. ಇದು ನೈತಿಕ ಶಿಕ್ಷಣದ ಗುರಿಯಲ್ಲವೇ ? ಈಗ ನಮ್ಮಲ್ಲಿ ನೈತಿಕ ಬಲವು ಅಡಗಿ ಹೋಗಿದೆ. ಇದಿಲ್ಲದ್ದರಿಂದಲೇ ನಾವು ಈ ಪರಿ ಬಳಲುತ್ತಿರುವೆವು. ಈಗಿನ ಶಿಕ್ಷಕ, ಶಿಷ್ಯರಲ್ಲಿ ಭಕ್ತಿಭಾವನೆಗಳಿಲ್ಲ. ಅದಿಲ್ಲದ್ದರಿಂದಲೇ ಶಿಕ್ಷಣದಲ್ಲಿ ನಾವು ಹಿಂದೆ ಬಿದ್ದಿರುವೆವು. ಶಾರೀರಿಕ ನೈತಿಕ ಮಾನಸಿಕ ಉನ್ನತಿಯೇ ಶಿಕ್ಷಣದ ನಿಜವಾದ ಧ್ಯೇಯವು. ಹೀಗಾದರೇನೇ ಶಿಕ್ಷಣವು ಸರ್ವಾಂಗ ಸುಂದರವಾಗುವದು. ಇದಕ್ಕಾಗಿ ನಾವು ಬೇರೆ ಆಲೋಚಿಸುವ ಕಾರಣವಿಲ್ಲ. ಪ್ರಾಚೀನ ಆರ್ಯರೇ ನಮಗೆ ಮಾರ್ಗದರ್ಶಿಗಳಾಗಿರುವರು. ಅವರ ಬಹುಭಾರವಾದ ಋಣವು ನಮ್ಮ ತಲೆಯ ಮೇಲೆಯೇ ಅದೆ. ಅವರ ಗುರುಕುಲಗಳ ಮಾದರಿಯಾದ ಸ್ಕೌಟ ಶಿಕ್ಷಣವು ನಮ್ಮೀ ಕಾಲದಲ್ಲಿ ಪ್ರಾರಂಭವಾಗಿದೆ. ಈ ಸುಸಂಧಿಯನ್ನು ನಾವು ಕಳೆಯದೆ ಅದನ್ನು ಕೈಕೊಳ್ಳಲೇಬೇಕು. ಸ್ಕೌಟವು ಯಶಸ್ವಿಯಾಗದಿದ್ದರೆ ಶಿಕ್ಷಣವು ಅಂಗಹೀನವಾಗುವದೆಂದು ಹೇಳಲು ಸಂದೇಹವಿಲ್ಲ.

ಬಿಹಾರ ಪ್ರಾಂತದಲ್ಲಿ ಕಳೆದ ತಿಂಗಳಲ್ಲಿ ಭೂಕಂಪವಾಗಿ ಅಕಲ್ಪಿತ ಹಾನಿಯಾಗಿರುವದು ಲೋಕಪ್ರಸಿದ್ಧವು. ಈ ಸಂಗತಿಯು ನಮ್ಮ ಶಾಲೆಗಳಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಗೊತ್ತಿರತಕ್ಕದ್ದು. ಅಸಂಖ್ಯಜನರಿಗೆ ಒಮ್ಮಿಂದೊಮ್ಮೆ ಬಂದೊದಗಿದ ಹಾನಿಯಿಂದ ಆತನ ಮನಸ್ಸು ಕರಗಬೇಕು. ಸಹಾನುಭೂತಿಯ ಮೂಲಕ ತನ್ನ ಕೈಲಾದ ಸಹಾಯವನ್ನು ಮಾಡಲು ಅವನು ಹಾತೊರೆಯಬೇಕು. ಈ ಕಾರ್ಯವನ್ನು ನೆರವೇರಿಸಿ ತಮ್ಮ ತಮ್ಮ ವಿದ್ಯಾರ್ಥಿಗಳಿಂದ ಬಂದ ಅಲ್ಪ ಹಣವನ್ನು ಬಿಹಾರದ ಜನರಿಗೆ ಮುಟ್ಟುವಂತೆ ಶಿಕ್ಷಕರು ಪ್ರಯತ್ನಪಡುವರೆಂದು ನಾವು ನಂಬಿದ್ದೇವೆ.

ಮಾನಸಶಾಸ್ತ್ರವು

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಅವಲೋಕನ

'ಸಲಿ' ಎಂಬ ಮಾನಸಶಾಸ್ತ್ರಜ್ಞನು ಯಾವದೊಂದು ಪದಾರ್ಥವನ್ನು ಸೂಕ್ಷ್ಮರೀತಿಯಿಂದ ಪರೀಕ್ಷಿಸಿ, ಅದರ ಭಾಗಗಳನ್ನು ಲಕ್ಷಪೂರ್ವಕವಾಗಿ ನಿರೀಕ್ಷಿಸುವದಕ್ಕೆ ಅವಲೋಕನವೆಂಬ ಸಂಜ್ಞೆಯನ್ನು ಕೊಟ್ಟಿರುವನು. ಅವನ ಮತದಂತೆ ಅವಲೋಕನವು ಸಂಕಲಿತ ವ್ಯಾಪಾರವಾಗುವದು. ಅವಲೋಕನ ಮಾಡುವಾಗ ಬಾಲಕರು ಮೊದಲು ಇಡೀವಸ್ತುವನ್ನು ನಿರೀಕ್ಷಿಸಿ, ತದನಂತರ ಅದರ ಭಾಗಗಳನ್ನು ನಿರೀಕ್ಷಿಸುವರು. ಆದಕಾರಣ ಅವಧಾನದ ಅನೇಕ ವ್ಯಾಪಾರಗಳು ಒಟ್ಟುಗೂಡಿ ಆಗುವ ಸಂಕಲಿತ ವ್ಯಾಪಾರವು ಅವಲೋಕನವು. ಅವಲೋಕನವನ್ನು ಮಾಡುವಾಗ್ಗೆ ನಮ್ಮ ಲಕ್ಷವು ಯಾವದೊಂದು ವಿವಕ್ಷಿತ ವಸ್ತುವಿನ ಕಡೆಗೆ ಹಚ್ಚಲ್ಪಟ್ಟು ಅದರಿಂದ ಆ ವಸ್ತುವಿನ ವಿಷಯವಾಗಿ ಸಾಧ್ಯವಿದ್ದ ಮಟ್ಟಿಗೆ ನಿಶ್ಚಿತ ಜ್ಞಾನವನ್ನು ಮಾಡಿಕೊಳ್ಳುವದಿರುವದು.

ವಸ್ತುತಃ ನಮಗಾಗುವ ಜ್ಞಾನವು, ಪಂಚೇಂದ್ರಿಯಗಳು ಹಾಗು ಮನಸ್ಸು ಇವುಗಳ ದ್ವಾರದಿಂದ ಆಗುವಾಗ ಅವಧಾನವು ಆಯಾ ಇಂದ್ರಿಯಗಳ ವ್ಯಾಪಾರಕ್ಕೆ ಸಂಬಂಧಿಸಲ್ಪಡುವದು. ಆದರೂ ಸಾಧಾರಣವಾಗಿ ಅವಲೋಕನದಲ್ಲಿ ನೇತ್ರೇಂದ್ರಿಯದ ಭಾಗವು ಹೆಚ್ಚಾಗಿರುವದರಿಂದ ಆ ಇಂದ್ರಿಯಕ್ಕೆ ಸಂಬಂಧಿಸಿದ ಒಂದು ವಿಶಿಷ್ಟವಾದ ವ್ಯಾಪಾರಕ್ಕೆ ಅವಲೋಕನವೆನ್ನುವ ರೂಢಿಯುಂಟು. ಈ ಸಂಕುಚಿತ ಅರ್ಥದಲ್ಲಿಯ ಆ ಶಬ್ದವನ್ನು ನಾವೂ ಉಪಯೋಗಿಸಿದ್ದೇವೆ.

ಅವಲೋಕನ ಹಾಗು ಪ್ರಯೋಗಗಳಲ್ಲಿರುವ ಭೇದಗಳನ್ನು ಕೆಳಗೆ ಕೊಟ್ಟ ಉದಾಹರಣೆಗಳಿಂದ ಸ್ಪಷ್ಟೀಕರಿಸುವಾ—

ಶಿಕ್ಷಕನು ನೀರು ಕಾಸಿ ಅದು ಉಗಿಯಾಗುವದನ್ನೂ ಒಂದು ತಾಮ್ರದ ಸಳಿಯನ್ನು ಕಾಸಿ ಅದು ಉದ್ದಾಗುವದನ್ನೂ ಪ್ರತ್ಯಕ್ಷ ಪ್ರಯೋಗಮಾಡಿ ವಿದ್ಯಾರ್ಥಿಗಳಿಗೆ ತೋರಿಸುವನು. ನೀರು ಉಷ್ಣತೆಯಿಂದ ಉಗಿಯಾಗಿ ಮೇಲಕ್ಕೇರಿ ಆಕಾಶ ಮಂಡಲದಲ್ಲಿ ಮೋಡಗಳಾಗುತ್ತವೆಂದು ಹೇಳಿ ಮೋಡಗಳನ್ನು ನಿರೀಕ್ಷಿಸಲಿಕ್ಕೆ ಹೇಳುವನು. ಇದರಂತೆ ನಾನಾತರದ ಕಲ್ಲುಗಳನ್ನು ಹುಡಗರಿಗೆ ತೋರಿಸಿದ ಮೇಲೆ ಅವುಗಳಲ್ಲಿ ಕೆಲವು ಹರಿಯುವ ನೀರಿನಿಂದ ಹುಟ್ಟುತ್ತಿರುವದರಿಂದ ಅವು ಜಲಶಿಲೆಗಳೆಂದೂ ಬೇರೆ ಕೆಲವು ಭೂಗರ್ಭದಲ್ಲಿರುವ ಉಷ್ಣತೆಯಿಂದ ಉಂಟಾಗಿರುವದರಿಂದ ಅಗ್ನಿಶಿಲೆಗಳೆಂದೂ ಹೇಳಿ ಅವರನ್ನು ನಿರೀಕ್ಷಿಸಲಿಕ್ಕೆ

ಹಚ್ಚುವನು. ಈ ಎಲ್ಲ ಪ್ರಕಾರಗಳಲ್ಲಿ ಒಂದುತರದ ನಿರೀಕ್ಷಣವು ಇದ್ದೇ ಇರುವದು. ಆದರೂ ಅದರಲ್ಲಿ ತಾರತಮ್ಯವಿರುವದು. ನಾವು ಪ್ರಯೋಗಮಾಡಿ ವಸ್ತುಗಳ ಸ್ಥಿತಿ, ಗುಣ ಧರ್ಮಗಳನ್ನು ತಿಳಕೊಳ್ಳುವಾಗ ನೀರುಕಾಸಿ ಉಗಿಯಾಗುವಂತೆ ಮಾಡುವಾಗ ಉಷ್ಣತೆ ಯೆಂಬ ಕಾರಣವನ್ನು ತೆಗೆದುಕೊಂಡು ಉಗಿಯೆಂಬ ಕಾರ್ಯವನ್ನು ಉಂಟುಮಾಡು ತ್ತೇವೆ. ಈ ತರದ ಪ್ರಯೋಗವನ್ನು ಬೇಕಾದಾಗ ಮಾಡುವದು ಸಾಧ್ಯವದೆ. ಆದರೆ ಮೋಡ ವನ್ನು ನಿರೀಕ್ಷಿಸಲಿಕ್ಕೆ ಹೇಳಿದಾಗ ನಾವು ಕಾರ್ಯವನ್ನು ನಿರೀಕ್ಷಿಸಿ ನೀರು ಉಗಿಯಾಗಿ ಮೇಲಕ್ಕೇರುವದು ಕಾರಣವೆಂದು ತಿಳಿದುಕೊಳ್ಳುತ್ತೇವೆ. ಆದರೆ ಆ ಉಗಿಯಿಂದ ಮೋಡ ವನ್ನು ಮಾಡಿ ತೋರಿಸುವದು ನಮ್ಮಿಂದ ಆಗದಮಾತು. ಸೃಷ್ಟಿಯ ನಿರೀಕ್ಷಣವೆಲ್ಲ ಈ ಪ್ರಕಾರದ್ದೇ ಇರುವದು. ಭೂಗರ್ಭಶಾಸ್ತ್ರ, ವನಸ್ಪತಿಶಾಸ್ತ್ರ, ಖನಿಜಶಾಸ್ತ್ರ ಮೊದಲಾದವು ಕೇವಲ ಅವಲೋಕನದಿಂದ ಅಭ್ಯಾಸಿಸತಕ್ಕ ಶಾಸ್ತ್ರಗಳು. ಇವುಗಳ ಅಭ್ಯಾಸದಿಂದ ನಮಗೆ ಅನೇಕ ಕಾರ್ಯಗಳ ಜ್ಞಾನವಾದರೂ ಅವುಗಳ ಕಾರಣಗಳು ಇಂಥವೇ ಎಂದು ನಿಶ್ಚಯ ವಾಗಿ ಹೇಳಲಿಕ್ಕೆ ಬರುವದಿಲ್ಲ. ಪದಾರ್ಥ ವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರ ಮೊದಲಾದ ಶಾಸ್ತ್ರಗಳು ಪ್ರಯೋಗಮಯವಾದ ಶಾಸ್ತ್ರಗಳು.

ನಿರೀಕ್ಷಣ ಶಕ್ತಿಯ ಬೆಳವಣಿಗೆಯು-ಶೈಶವಾವಸ್ಥೆಯಲ್ಲಿ ಶಿಶುಗಳಿಗೆ ಅವಧಾನವು ಇಲ್ಲದಿರುವದರಿಂದ ಹಾಗು ಕಣ್ಣಿನಿಂದ ನೋಡಿ ತಿಳಕೊಳ್ಳುವ ಇಚ್ಛೆಯು ಇಲ್ಲದಿರುವದ ರಿಂದ ಅವರಲ್ಲಿ ಅವಲೋಕನ ಶಕ್ತಿಯು ಎಷ್ಟು ಮಾತ್ರವೂ ಇರಲಾರದು. ಬಾಲ್ಯಾ ವಸ್ಥೆಯಲ್ಲಿ ಹುಡುಗರು ಚಿತ್ತಾಕರ್ಷಕವಾದ ವಸ್ತುಗಳನ್ನು ನೋಡಿ ಅವುಗಳ ಚಿತ್ರಗ ಳನ್ನು ಮನಸ್ಸಿನಲ್ಲಿಟ್ಟುಕೊಳ್ಳಹತ್ತುವರು. ಆದರೆ ಅವರಲ್ಲಿರುವ ಅವಲೋಕನ ಶಕ್ತಿಯು ದುರ್ಬಲವಾಗಿರುವದರಿಂದ ಅವರ ಮನಸ್ಸಿನಲ್ಲಿ ಮಾಡಿಕೊಂಡ ವಸ್ತುಗಳ ಚಿತ್ರಗಳು ನಿಜವಾದ ಚಿತ್ರಗಳಿಂದ ಭಿನ್ನವಾಗಿರುವವು. ಹುಡುಗರಿಗೆ ಮನುಷ್ಯನ ಚಿತ್ರ ತೆಗೆಯ ಹೇಳಿದರೆ ಒಬ್ಬೊಬ್ಬನು ಒಂದೊಂದು ವಿಧವಾಗಿ ಮನುಷ್ಯನ ಚಿತ್ರವನ್ನು ತೆಗೆಯುವದರ ಕಾರಣವು ಅವನ ಮನಸ್ಸಿನಲ್ಲಿ ಬಿಂಬಿಸಿದ ಚಿತ್ರದಲ್ಲಿರುವ ದೋಷವು. ಮೆಮರಿ ಡ್ರಾಯಿಂಗ ಸ್ಮರಣದಿಂದ ಯಾವದೊಂದು ವಸ್ತುವಿನ ಚಿತ್ರತೆಗೆಯುವದು ಹುಡುಗರ ನಿರೀಕ್ಷಣ ಶಕ್ತಿಯನ್ನು ಪರೀಕ್ಷಿಸಲಿಕ್ಕೆ ಬರುವದು.

ಅವಲೋಕನ ಶಕ್ತಿಯನ್ನು ಬೆಳೆಸುವ ಸಾಧನಗಳು:—

ಕೇವಲ ಪುಸ್ತಕಗಳಿಂದ ಜ್ಞಾನ ಮಾಡಿಕೊಳ್ಳುವದರಿಂದ ಅವಲೋಕನ ಶಕ್ತಿಯು ಬೆಳೆಯದೆ ಹುಡುಗರಿಗೆ ವಸ್ತುಗಳ ವಿಷಯವಾಗಿ ಶಾಬ್ದಿಕ ಜ್ಞಾನವಾಗುವದು. ಆದರೆ ಅವರಿಗೆ ವಸ್ತುಗಳನ್ನು ನಿರೀಕ್ಷಿಸಲಿಕ್ಕೆ ಹೇಳಿ ಅವರಿಗೆ ಅವಲೋಕನ ಮಾಡುವ ಚಟವು ಹತ್ತುವಂತೆ ಮಾಡಿದರೆ ಅವರು ಸೃಷ್ಟಿಯಲ್ಲಿರುವ ವಸ್ತುಗಳ ಯಥಾರ್ಥಜ್ಞಾನವನ್ನು

ಸ್ವಂತ ಪ್ರಯತ್ನದಿಂದಲೂ ಆಸ್ಥೆಯಿಂದಲೂ ಮಾಡಿಕೊಳ್ಳಹತ್ತುವರು. ಶಾಲೆಯಲ್ಲಿ ಕಲಿಸುವ ವಿಷಯಗಳಲ್ಲಿ ಅವಲೋಕನಕ್ಕೆ ಸಹಾಯ ಮಾಡುವ ವಿಷಯಗಳು ಯಾವ ವೆಂದರೆ:— (೧) ವಸ್ತುಪಾಠ (೨) ಭೌತಿಕಶಾಸ್ತ್ರಗಳು (೩) ಚಿತ್ರಕಲೆ (೪) ಭೂಗೋಲ (೫) ಇತಿಹಾಸ ಕೆಲಮಟ್ಟಿಗೆ ವ್ಯಾಕರಣ.

ವಸ್ತುಪಾಠ:— ಹುಡುಗರು ತಮ್ಮ ಮುಂದೆ ಇಟ್ಟ ವಸ್ತುವನ್ನು ಸಂಪೂರ್ಣ ವಾಗಿ ಅವಲೋಕಿಸಿದ ಬಳಿಕ ಅದರ ಭಾಗಗಳನ್ನು ತಮಗೆ ಗೊತ್ತಿದ್ದ ವಸ್ತುಗಳ ಭಾಗ ಗಳಿಗೆ ಹೋಲಿಸಿ ಅವುಗಳಲ್ಲಿ ಕಂಡುಬರುವ ಸಾಮ್ಯ ವೈಷಮ್ಯಗಳನ್ನು ಕಂಡುಹಿಡಿಯ ಬೇಕು. ಹೀಗೆ ಮಾಡುವಾಗ ಅವರ ಎದುರಿಗೆ ಅನೇಕ ಪದಾರ್ಥಗಳು ಇರಬಾರದು. ಯಾಕೆಂದರೆ– ಅವ್ಯವಸ್ಥೆಯಿಂದ ಅವರ ಚಿತ್ತವು ಚಂಚಲವಾಗುವದು. ಅವಲೋಕನ ದಿಂದ ಆದ ಬೋಧೆಯು ಆ ವಸ್ತುವಿನ ಚಿತ್ರವನ್ನು ಮನಸ್ಸಿನಲ್ಲಿ ಬಿಂಬಿಸುವದು. ಅದು ಎಷ್ಟುಮಟ್ಟಿಗೆ ಬಿಂಬಿಸಿರುವದೆಂಬದನ್ನು ಪರೀಕ್ಷಿಸಬೇಕಾದರೆ ಅವರಿಗೆ ಅದರ ಚಿತ್ರವನ್ನು ತೆಗೆಯಲಿಕ್ಕೆ ಹಚ್ಚಬೇಕು. ಇಲ್ಲವೆ ಅವರ ಮಾತಿನಿಂದಲೇ ಅವರ ವರ್ಣನೆಯನ್ನು ಮಾಡಲಿಕ್ಕೆ ಹಚ್ಚಬೇಕು. ಹೊಸ ಪದ್ಧತಿಯ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಅವಲೋಕನ ಮಾಡಿದಮೇಲೆ ಅವಲೋಕನದ ಫಲಿತವನ್ನು ಹುಡುಗರು ತಾವೇ ಹೇಳಬೇಕಾಗುವದು. ಹಳೇ ಪದ್ಧತಿಯ ಶಿಕ್ಷಣದಲ್ಲಿ ಶಿಕ್ಷಕರು ಹೇಳತಕ್ಕದ್ದನ್ನೆಲ್ಲ ತಾವೇ ಹೇಳಿಬಿಟ್ಟು ಆ ಮೇಲೆ ಹುಡುಗರಿಗೆ ವಸ್ತುಗಳನ್ನು ತೋರಿಸುತ್ತಿದ್ದರು. ಇಲ್ಲವೆ ಅವರಿಗಾದ ಶಾಬ್ದಿಕ ಜ್ಞಾನವೇ ಸಾಕೆಂದು ಭಾವಿಸುತ್ತಿದ್ದರು. ಈ ತರದ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ಕಣ್ಣುಗಳಿದ್ದರೂ ಕುರುಡರು, ಕಿವಿಗಳಿದ್ದರೂ ಕಿವುಡರು, ಆದಂತೆ ಅಜ್ಞಾನಿಗಳಾಗಿ ರುತ್ತಿದ್ದರು. ವಸ್ತುಗಳು ದೊರಕದಿದ್ದರೆ ಅವುಗಳಿಗೆ ಸಂಬಂಧಿಸಿದ ಚಿತ್ರಗಳನ್ನಾದರೂ ತೋರಿಸಬೇಕು, ಇಲ್ಲವೆ ಶಿಕ್ಷಕನು ಕರಿಹಲಗೆಯಮೇಲೆ ವಸ್ತುಗಳ ಭಾವ ಚಿತ್ರಗಳ ನ್ನಾದರೂ ತೆಗೆಯಬೇಕು.

ಭೌತಿಕ ಶಾಸ್ತ್ರಗಳು:— ಎಲ್ಲಕ್ಕೂ ಮೊದಲು ಹುಡುಗರು ಸ್ವಾಭಾವಿಕವಾಗಿ ಸೃಷ್ಟಿಯಲ್ಲಿರತಕ್ಕ ಪ್ರಾಣಿ ವನಸ್ಪತಿಗಳನ್ನು ವಿಮರ್ಶಿಸಿ ಅವುಗಳ ಗುಣ ಧರ್ಮಗಳಲ್ಲಿ ಕಂಡುಬರುವ ಕಾರ್ಯ ಕಾರಣ ಭಾವಗಳನ್ನು ಅರಿತುಕೊಳ್ಳಲಿಕ್ಕೆ ಜಿಜ್ಞಾಸೆಯುಳ್ಳವ ರಾಗಬೇಕು. ಆ ಮೇಲೆ ತಾವೇ ಪ್ರಯೋಗಗಳನ್ನು ಮಾಡಿ ಆ ಪ್ರಯೋಗಗಳ ಫಲಿತಾಂ ಶಗಳನ್ನು ಶಿಕ್ಷಕನ ಸಹಾಯದಿಂದ ಬರೆದಿಡಬೇಕು. ಈ ಕ್ರಮದಿಂದ ಅವರ ಜ್ಞಾನವು ಬೆಳೆದಮೇಲೆಯೂ ಶಾಸ್ತ್ರಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಓದಲಿಕ್ಕೆ ಹಚ್ಚಬೇಕು.

ಭೂಗೋಲ:— ಹಳೆಪದ್ಧತಿಯಂತೆ ಈ ವಿಷಯವನ್ನು ಕಲಿಸುವಾಗ ಮೊದಲು ಕೆಲವು ವ್ಯಾಖ್ಯೆಗಳನ್ನು ಹೇಳಿಕೊಟ್ಟು ಆ ಮೇಲೆ ಭೂಮಂಡಲದಲ್ಲಿರುವ ಖಂಡಗಳು,

ಅವುಗಳಲ್ಲಿರುವ ದೇಶಗಳು, ರಾಜಧಾನಿಗಳು, ಪರ್ವತಗಳು, ಹುಟ್ಟುವಳಿಗಳು ಇವೇ ಮೊದಲಾದವುಗಳ ನಾಮಾವಳಿಗಳನ್ನು ಬಾಯಿಪಾಠಮಾಡಿಸುತ್ತಿದ್ದರು. ಅದರಿಂದ ಹುಡುಗರಿಗೆ ಯಾವತರದ ಮನರಂಜನವಾಗದೆ ಭೂಗೋಲವು ತಲೆಬೇಸರಬರುವ ವಿಷಯ ವೆಂದು ಭಾವಿಸುತ್ತಿದ್ದರು. ಆದರೆ ಹೊಸಪದ್ಧತಿಯ ಶಿಕ್ಷಣಕ್ರಮವು ಇದಕ್ಕೆ ವಿಪರೀತ ವಾಗಿರುವದು. ಗೊತ್ತಿದ್ದ ಸಂಗತಿಗಳಿಂದ ಗೊತ್ತಿಲ್ಲದ ಸಂಗತಿಗಳಿಗೆ ಹೋಗ ಬೇಕೆಂಬ ತತ್ವವನ್ನವಲಂಬಿಸಿ ಶಾಲೆಯ ಸುತ್ತಲಿರುವ ವಸ್ತುಗಳು, ಹುಟ್ಟುವಳಿ, ವ್ಯಾಪಾರ, ಉದ್ಯೋಗ ಸುತ್ತುಮುತ್ತಲಿನ ಪ್ರದೇಶಗಳಲ್ಲಿರುವ ಗುಡ್ಡ ನದಿ ಮೊದಲಾದವುಗಳ ಜ್ಞಾನವನ್ನು ಪ್ರತ್ಯಕ್ಷ ನಿರೀಕ್ಷಣದಿಂದ ಮಾಡಿಕೊಟ್ಟಮೇಲೆ ನಕಾಶ-ಚಿತ್ರ ಮಾಡಲ್ ಮೊದಲಾದವುಗಳ ಸಹಾಯದಿಂದ ಜಿಲ್ಹಾ, ಇಲಾಖೆ, ದೇಶ, ಖಂಡಗಳ ವಿಷಯವಾಗಿ ಕಲಿಸುತ್ತ ಹೋಗಬೇಕಾಗುವದು. ಇದರಿಂದ ಹುಡುಗರಿಗೆ ಹೆಚ್ಚು ಹೆಚ್ಚು ಕಲಿಯ ಬೇಕೆಂಬ ಆಸ್ಥೆಯು ಉಂಟಾಗುವದು.

ಇತಿಹಾಸ:— ಹಳೆಪದ್ಧತಿಯಲ್ಲಿ ಅತಿ ಪ್ರಾಚೀನಕಾಲದ ಇತಿಹಾಸವನ್ನು ಕಲಿಸಲಿಕ್ಕೆ ಪ್ರಾರಂಭಿಸಿ ಅದನ್ನು ಸದ್ಯದ ಕಾಲದವರೆಗೆ ಬಂದು ಮುಟ್ಟುವಂತೆ ಮಾಡಿ ಆಯಾಕಾಲದಲ್ಲಿದ್ದ ಅರಸರ ಹೆಸರು, ಆದ ಯುದ್ಧಗಳು, ಅವುಗಳ ಇಸ್ವಿ ಇವೇ ಮೊದ ಲಾದವುಗಳನ್ನು ಹುಡುಗರಿಗೆ ಬಾಯಿಪಾಠಮಾಡಲಿಕ್ಕೆ ಹೇಳುತ್ತಿದ್ದರು. ಆದರೆ ಹೊಸ ಪದ್ಧತಿಯ ಶಿಕ್ಷಣದಲ್ಲಿ ಈ ತರದ ಹಾಳು ಸಂಗತಿಗಳಿಗೆ ಪ್ರಾಧಾನ್ಯಕೊಡದೆ ನಾಗರಿಕರ ಕರ್ತವ್ಯಗಳೇನು ? ಈಗಿನ ರಾಜ್ಯಪದ್ಧತಿಯು ಹ್ಯಾಗೆ ಅದೆ ! ಮೊದಲಾದ ವಿದ್ಯಾರ್ಥಿ ಗಳಿಗೆ ಅನುಭವಕ್ಕೆ ಬರುವ ಸಂಗತಿಗಳಿಗೆ ಮಹತ್ವಕೊಡುವದರಿಂದ ವಿದ್ಯಾರ್ಥಿಗಳು ಆಸ್ಥೆಯಿಂದ ಮನುಷ್ಯ ಪ್ರಾಣಿಗಳ ಪ್ರಗತಿಗೆ ಅವಶ್ಯವಾದ ಸಂಗತಿಗಳನ್ನು ಇತಿಹಾಸ ರೂಪದಿಂದ ಕಲಿತುಕೊಳ್ಳುವರು.

ಚಿತ್ರಕಲೆ:— ಚಿತ್ರಕಲೆಯಲ್ಲಿ ನಿಪುಣನಾಗಲಿಕ್ಕೆ ಇಚ್ಛಿಸುವವನು ಅವಶ್ಯ ವಾಗಿ ತನ್ನ ನಿರೀಕ್ಷಣ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಹುಡುಗರ ಮುಂದೆ ವಸ್ತು ವನ್ನಿಟ್ಟು ಅವರ ಚಿತ್ರವನ್ನು ತೆಗೆಯ ಹೇಳಿದರೆ ಅವರು ಚಿತ್ರ ತೆಗೆಯುವ ಮೊದಲು ಅದನ್ನು ಸೂಕ್ಷ್ಮರೀತಿಯಿಂದ ಅವಲೋಕಿಸುವರು. ದೊಡ್ಡ ಚಿತ್ರವನ್ನು ಸಣ್ಣವಾದ ಆಕಾಶದಲ್ಲಿ ತೆಗೆಯುವಾಗ ಇಲ್ಲವೆ ಸಣ್ಣ ಚಿತ್ರವನ್ನು ದೊಡ್ಡದಾಗಿ ತೆಗೆಯುವಾಗ ಅದರ ಪ್ರತಿಯೊಂದು ಭಾಗವನ್ನು ಹುಡುಗನು ಅವಲೋಕಿಸಬೇಕಾಗುವದು.

ಸ್ಮರಣ

ನಾವು ಇಂದ್ರಿಯಗಳ ಮುಖಾಂತರ ಮಾಡಿಕೊಂಡ ಜ್ಞಾನವು ಬೋಧೆಯಾಗಿ ಪರಿಣಮಿಸಿದ ಮೇಲೆ ಅದರಿಂದ ಒಂದೊಂದು ಬಗೆಯ ಬಿಂಬವು ಉಂಟಾಗಿ ಆ ಬಿಂಬವು

ನಾವು ಕೇಳಿದ ಇಲ್ಲವೆ ನೋಡಿದ ವಸ್ತುಗಳು ಪ್ರತ್ಯಕ್ಷ ನಮ್ಮ ಎದುರಿಗೆ ಇಲ್ಲದಾಗ ಸಹ ನಮ್ಮ ಮನಸ್ಸಿನಲ್ಲಿ ಬರುವದು. ಹೀಗಾಗುವದಕ್ಕೆ ಮನಸಿನ ಒಂದು ವಿಶೇಷ ಧರ್ಮವೇ ಕಾರಣವು; ಈ ಮನಸ್ಸಿನ ಧರ್ಮಕ್ಕೆ ಸ್ಮರಣವೆಂಬ ಹೆಸರು. ಕೆಲವು ಶಾಸ್ತ್ರಜ್ಞರು ಸ್ಮರಣವು ಮನಸ್ಸಿನ ಸ್ಥಿತಿ ಎಂದೂ ಬೇರೆ ಕೆಲವರು ಅದು ಮನಸಿನ ಶಕ್ತಿಯೆಂದೂ ಪ್ರತಿಪಾದಿಸುವರು. ಅದು ಕೇವಲ ವಾದಗ್ರಸ್ತ ವಿಷಯವು.

ನಮ್ಮ ಮನೋ ವ್ಯಾಪಾರಗಳೆಲ್ಲ ಚೈತನ್ಯ ಕ್ಷೇತ್ರದಲ್ಲಿ ನಡೆಯುತ್ತಿರುವದರಿಂದ ಬಿಂಬ ರೂಪದಿಂದ ಹೊಂದಿದ ಜ್ಞಾನವು ನಮ್ಮ ಅವಧಾನ ಅವಲೋಕನಗಳ ಪರಿಮಿತಿ ಯನ್ನು ಅವಲಂಬಿಸಿ ಸ್ಫುಟವಾಗಿ ಇಲ್ಲವೆ ಮಸಮುಸಕಾಗಿ ಚೈತನ್ಯ ಕ್ಷೇತ್ರದಲ್ಲಿ ಮೂಡಿ ಕೊಳ್ಳುವದು. ಇದಕ್ಕೆ ಮನಸ್ಸಿನ ಧಾರಣಾಶಕ್ತಿಯೇ ಕಾರಣವು. ಅಂತರ ದೃಷ್ಟಿಯಿಂದ ಚೈತನ್ಯ ಕ್ಷೇತ್ರವನ್ನು ನೋಡಲು ಚೈತನ್ಯ ಕೇಂದ್ರದಲ್ಲಿ ಮೂಡಿರುವ ಚಿತ್ರಕ್ಕೆ ಸಂಬಂಧಿ ಸಿದ ಜ್ಞಾನವು ಸಹಜವಾಗಿ ನಮ್ಮ ಸ್ಮರಣಕ್ಕೆ ಬರುವದು. ಆದರೆ ಚೈತನ್ಯತಟದಲ್ಲಿ ಇದ್ದ ಬಿಂಬದ ಜ್ಞಾನವು ಮಸಮುಸಕಾಗಿ ಸ್ಮರಣದಲ್ಲಿ ಬರುವದು. ಅನುಕೂಲತೆಗಾಗಿ ಚೈತನ್ಯವು ಒಂದು ಜಲಾಶಯವೆಂದು ಕಲ್ಪಿಸುವಾ, ನಾವು ಪ್ರಯತ್ನಪೂರ್ವಕವಾಗಿ ಇಲ್ಲವೆ ಕೆಲವು ದಿವಸಗಳ ಹಿಂದೆ ಮಾಡಿಕೊಂಡ ಜ್ಞಾನವು ಆಯಾ ವಸ್ತುಗಳ ಬಿಂಬ ರೂಪದಿಂಡ ಚೈತನ್ಯವೆಂಬ ಜಲಾಶಯದಿಂದ ಪೃಷ್ಠಭಾಗದಮೇಲೆ ತೇಲಾಡುತ್ತಿರುವ ದರಿಂದ ಅವು ನಮ್ಮ ಅಂತರ ದೃಷ್ಟಿಗೆ ಗೋಚರವಾಗುವವು. ಆದರೆ ನಾವು ಅನೇಕ ವರ್ಷಗಳ ಹಿಂದೆ ಮಾಡಿಕೊಂಡ ಜ್ಞಾನವು, ಅದರ ಉಪಯೋಗವು ನಮಗೆ ಮಾಡಿ ಕೊಳ್ಳುವ ಪ್ರಸಂಗವು ಬರದಿದ್ದರೆ ಆ ಬಿಂಬವು ಪೃಷ್ಠಭಾಗದ ಮೇಲೆ ಉಳಿಯದೆ ಜಲಾ ಶಯದಲ್ಲಿ ಮುಳಗಲಿಕ್ಕೆ ಹತ್ತಿ ಎಲ್ಲಿಯೋ ಉಳಿಯುವದು. ಆಗ ಮನಸಿನ ಇತರ ಶಕ್ತಿ ಗಳನ್ನು ಪಾತಾಳಗರಡದಂತೆ ಉಪಯೋಗಿಸಿ ಅದು ಪೃಷ್ಠಭಾಗಕ್ಕೆ ಬರುವಂತೆ ಮಾಡಿದರೆ ಅದು ನಮ್ಮ ಮನಸಿನಲ್ಲಿ ಬರುವದು. ಸಹಜವಾಗಿ ನಮ್ಮ ನೆನಪಿನಲ್ಲಿ ಬರುವ ವ್ಯಾಪಾ ರಕ್ಕೆ ಸ್ಮೃತಿಯೆಂಬ ಶಬ್ದವನ್ನು ಉಪಯೋಗಿಸಿದರೆ, ಸಂಪೂರ್ಣವಾಗಿ ನಷ್ಟವಾಗದೆ ಕೆಲಕಾಲದವರೆಗೆ ಚೈತನ್ಯ ಸ್ಥಿತಿಯಲ್ಲಿ ಕೆಳಕೆಳಗೆ ಇಳಿದು ಹೋಗಿ ಇಲ್ಲದಂತಾಗಿರುವ ಸಂಸ್ಕಾರ, ಭಾವನೆ ಮೊದಲಾದವುಗಳನ್ನು ಮರಳಿ ಚೈತನ್ಯದ ಪೃಷ್ಠಭಾಗಕ್ಕೆ ತರುವ ವ್ಯಾಪಾರದಲ್ಲಿ ಸಮಾವೇಶವಾಗುವ ಮನೋವೃತ್ತಿಗಳಿಗೆ ಸಂಸ್ಮರಣೆ ಎಂಬ ಸಂಜ್ಞೆಯನ್ನು ಕೊಡಬಹುದು.

ಯಾವ ಪ್ರಯತ್ನದಿಂದಲೂ ಸಂಗತಿಗಳು ನೆನಪಿಗೆ ಬಾರದಿದ್ದರೆ, ಅಂಥ ಮನಸಿನ ಸ್ಥಿತಿಗೆ ವಿಸ್ಮರಣವೆಂಬ ಹೆಸರು.

ಸ್ಮರಣಶಕ್ತಿಯು ಬೇರೆ ಬೇರೆ ಜನರಲ್ಲಿ ಬೇರೆ ಬೇರೆ ವಿಧವಾಗಿರುವದು. ಕೆಲವರು ಬೇಕಾದ ಸಂಗತಿಗಳನ್ನು ಸ್ಮರಣದಲ್ಲಿಟ್ಟುಕೊಳ್ಳಬಲ್ಲರು. ಕೆಲಕೆಲವರಿಗೆ ಕೆಲವು ಸಂಗತಿಗಳು ಮಾತ್ರ ನೆನಪಿನಲ್ಲಿ ಉಳಿಯುವವು. ಈ ತರದ ವೈಷಮ್ಯಗಳುಂಟಾಗಲಿಕ್ಕೆ ಆಯಾ ವ್ಯಕ್ತಿಗಳಲ್ಲಿ ಇರುವ ಅವಧಾನ ಅಭಿರುಚಿ ಮೊದಲಾದವುಗಳಲ್ಲಿ ಕಂಡುಬರುವ ಅಭ್ಯಂತರವು ಕಾರಣವಾಗಿದೆ. ಸ್ಮರಣದಲ್ಲಿ (೧) ಗ್ರಹಣ. (೨) ಧಾರಣ. (೩) ಪ್ರತ್ಯಾನಯನ ಅಂದರೆ–ತಿರುಗಿ ಬೇಕಾದಾಗ ಮನಸ್ಸಿನಲ್ಲಿ ತಂದುಕೊಳ್ಳುವ ಕ್ರಿಯೆ. ಹೀಗೆ ಮೂರು ಮೆಟ್ಟುಗಳಿವೆ.

ಸ್ಮರಣಶಕ್ತಿಯ ವ್ಯಾಪಾರವು ಮೇಲೆ ಹೇಳಿದ ಮೂರು ಸಂಗತಿಗಳನ್ನು ಒಳಕೊಂಡಿರುವದೆಂದು ತೋರಿಸುವದಕ್ಕಾಗಿ ಸ್ಮರಣವನ್ನು ಫೋನೋಗ್ರಾಫ್ ಎಂಬ ಯಂತ್ರಕ್ಕೆ ಹೋಲಿಸಿ ನೋಡುವಾ– ಈ ಯಂತ್ರದಲ್ಲಿ ಇರುವ ವಿಶೇಷ ರಚನೆಯಿಂದ ನಾವು ಮಾತಾಡಿದ ಇಲ್ಲವೆ ಹಾಡಿದ ಕೂಡಲೆ ನಮ್ಮ ಧ್ವನಿಯು ಒಂದು ಉಳಕದಮೇಲೆ ಇಲ್ಲವೆ ತಗಡಿನ ಮೇಲೆ ಮೂಡಿಕೊಳ್ಳುವದು ಇದೇ ಗ್ರಹಣವು. ಆ ತಗಡು ಒಂದೇ ತರದ ಗಟ್ಟಿಯಾದ ಪದಾರ್ಥದಿಂದ ಮಾಡಿರುವದರಿಂದ ಮೂಡಿದ ಚಿತ್ರವು ಕೆಲವು ವೇಳೆ ಅಚ್ಚಳಿಯದೆ ಹಾಗೇ ಉಳಿಯುವದು ಇದೇ ಧಾರಣವು. ಆ ಯಂತ್ರದಲ್ಲಿ ಬೇರೆ ಕೆಲವು ಸುಧಾರಣೆಯನ್ನು ಮಾಡಿದ ಮೇಲೆ ಅದು ತಗಡಿನಮೇಲೆ ಮೂಡಿದ ಚಿತ್ರಕ್ಕೆ ಅನುಗುಣವಾಗಿ ಆಧ್ವನಿಯ ಪರಿಣಾಮದ ಪುನರುಚ್ಚಾರಣೆಯನ್ನು ಬೇಕಾದಾಗ ಮಾಡಹತ್ತುವದು. ಧಾರಣಶಕ್ತಿ ಇಲ್ಲದೆ ಪುನರುಚ್ಚಾರಣೆಯಾಗಲಾರದು. ರಸನೇಂದ್ರಿಯ ಘ್ರಾಣೇಂದ್ರಿಯಗಳಿಂದ ಉಂಟಾದ ಅನುಭವವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವು ಮಿದುಳಿಗೆ ಇಲ್ಲದಿರುವದರಿಂದ ಅವುಗಳ ಪ್ರತ್ಯಾನಯನವಾಗದೆ ಕೂಡಲೆ ವಿಸ್ಮರಣೆಯಾಗುವದು.

ಗ್ರಹಣ:— ನಮ್ಮ ಇಂದ್ರಿಯಗಳ ಮುಖಾಂತರ ಮಾಡಿಕೊಳ್ಳುವ, ಸೃಷ್ಟಿಯಲ್ಲಿರುವ ಅನೇಕ ವಸ್ತುಗಳ ಬಗ್ಗೆ ಬೋಧೆ ಇಲ್ಲವೆ ಕಲ್ಪನೆಗಳು ನಮ್ಮ ಮನಸಿನಲ್ಲಿ ಉಳಿದು ಪುನಃ ಸ್ಮರಣೆಯಲ್ಲಿ ಬರುವದು. ನಾವು ಆಯಾ ವಸ್ತುಗಳ ಪರಿಗ್ರಹಣವನ್ನು ಮಾಡುವ ಬಗೆಯು ಆ ಪರಿಗ್ರಹಣದಿಂದ ಮನಸಿನ ಮೇಲೆ ಉಂಟಾದ ಒಂದು ತರದ ಠಸೆ ಹಾಗೂ ಆಯಾ ವಸ್ತುಗಳಲ್ಲಿ ಕಂಡುಬರುವ ಸಾಹಚರ್ಯ ಮೊದಲಾದ ಸಂಗತಿಗಳನ್ನು ಅವಲಂಬಿಸಿರುವದು. ಆದ್ದರಿಂದ ಪರಿಗ್ರಹಣವು ಚನ್ನಾಗಿ ಆಗಬೇಕಾದರೆ ಕೇವಲ ಯಾಂತ್ರಿಕರೀತಿಯಿಂದ ಪದಾರ್ಥಗಳ ಬಗ್ಗೆ ಶಾಬ್ದಿಕ ಜ್ಞಾನವನ್ನು ಮಾಡಿಕೊಂಡರೆ ಸಾಲದು. ಅಂದರೆ ಗಿಳಿಯಂತೆ ಪಾಠ ಮಾಡುವದರಿಂದ ನಿಜವಾದ ಗ್ರಹಣವು ಎಂದೂ ಆಗಲಾರದು. (೨) ಕಲಿಯತಕ್ಕ ವಸ್ತುಗಳಲ್ಲಿ ಮುಖ್ಯವಾದವು ಯಾವವು ಎಂಬದನ್ನು ಗೊತ್ತುಮಾಡಿ ಮುಖ್ಯವಾದ ಸಂಗತಿಗಳನ್ನು ಆರಿಸಿ ದೃಷ್ಟಾಂತ, ಪ್ರಯೋಗ, ಕಾರ್ಯಕಾರಣಭಾವ,

ಮೊದಲಾದವುಗಳ ಸಹಾಯದಿಂದ ಅವು ಮನಸಿನಲ್ಲಿ ನಿಲ್ಲುವಂತೆ ಮಾಡಬೇಕು. (೩) ಒಂದೊಂದು ವಿಷಯವನ್ನು ಕಲಿಯುವಾಗ ಪೂರ್ವಾಪರ ಸಂಬಂಧವು ಉಳಿಯುವಂತೆ ಮಾಡಬೇಕು ಕಲಿತ ವಿಷಯಗಳ ಜ್ಞಾನವು ಗಟ್ಟಿಯಾಗಿ ಉಳಿಯಬೇಕಾದರೆ ಅವು ಗಳ ಮಹತ್ವ ಹಾಗು ಅವುಗಳ ಜ್ಞಾನವಾಗುವದಕ್ಕೆ ಬೇಕಾಗುವ ಮಾನಸಿಕ ಶ್ರಮ ಇವೇ ಮೊದಲಾದವುಗಳನ್ನವಲಂಬಿಸಿ ಕಾಲಾವಧಿಯು ದೊರಕಲಿಕ್ಕೆ ಬೇಕು. ಅನೇಕ ವಸ್ತುಗಳ ಅವಲೋಕನವನ್ನು ಏಕಕಾಲಕ್ಕೆ ಮಾಡಿದ್ದಾದರೆ ಯಾವ ವಿಷಯದ ಜ್ಞಾನ ವಾದರೂ ಯಥಾರ್ಥವಾಗಿ ಆಗಲಾರದು

ಧಾರಣ:—ಇದು ನಮ್ಮ ಇಂದ್ರಿಯಜನ್ಯ ಜ್ಞಾನಕ್ಕೆ ಕಾರಣೀಭೂತವಾದ ಬಾಹ್ಯವಸ್ತುವಿನ ವೈಲಕ್ಷಣ್ಯ ಹಾಗು ಅದರ ಪರಿಗ್ರಹಣವನ್ನು ಬಹು ಮಟ್ಟಿಗೆ ಅವಲಂಬಿ ಸಿರುವದು. (೨) ಅವಧಾನ ಶಕ್ತಿಯ ತೀವ್ರತೆಯನ್ನವಲಂಬಿಸಿ ಧಾರಣಾಶಕ್ತಿಯ ತೀವ್ರತೆಯು ಇರುವದು.

(೩) ಧಾರಣಾಶಕ್ತಿಯು ವಿದ್ಯಾರ್ಥಿಗಳಲ್ಲಿರುವ ಆಯಾ ವಸ್ತು ಇಲ್ಲವೆ ವಿಷಯ ಗಳಲ್ಲಿರುವ ಆಸ್ಥೆಯನ್ನು ಅವಲಂಬಿಸಿರುವದು.

(೪) ಯಾವದೊಂದು ವಿಷಯದ ಬಗ್ಗೆ ಪುನಃ ಪುನಃ ಚಿಂತನ ಮಾಡುವವರಿಂದ ಇಲ್ಲವೆ ಪುನರುಚ್ಚಾರಣೆಯಿಂದ ಆ ವಿಷಯದ ಧಾರಣವು ಪ್ರಬಲವಾಗುತ್ತ ಹೋಗು ವದು.

(೫) ನಮ್ಮ ಮನಸಿನ ಮೇಲೆ ಅಕಸ್ಮಾತ್ತಾಗಿ ಆಘಾತವನ್ನು ಮಾಡಿ ಅದ್ವಿತೀಯ ವಾದ ಸುಖದುಃಖಗಳನ್ನುಂಟುಮಾಡುವ ವಸ್ತುಗಳು ಎಂದೂ ಮರೆಯದಂತೆ ಗಟ್ಟಿ ಯಾಗಿ ಮನಸಿನಲ್ಲಿ ಉಳಿಯುವವು.

(೬) ಧಾರಣಾಶಕ್ತಿಯ ಬಲವು ಆಯಾ ಕಾಲದಲ್ಲಿ ವಿದ್ಯಾರ್ಥಿಗಳ ಶಾರೀರಿಕ ಸ್ವಾಸ್ಥ್ಯವನ್ನು ಅವಲಂಬಿಸಿರುವದು. ಮನಸು ಪ್ರಫುಲ್ಲಿತವಾಗಿದ್ದಾಗ ಕಲಿತ ವಿಷ ಯಗಳು ಬಹು ಬೇಗ ಮನಸಿನಲ್ಲಿ ಉಳಿಯುವವು. ಆದರೆ ತಲೆಶೂಲಿಎದ್ದಾಗ ಹುಡುಗರು ದಣಿದು ಬೇಸತ್ತಿರುವಾಗ ಕಲಿತ ವಿಷಯಗಳು ಬಹು ಬೇಗ ಮರೆತು ಹೋಗುತ್ತವೆ.

ಪ್ರತ್ಯಾನಯನ:—ಪ್ರತ್ಯಾನಯನವು ಬಹುಮಟ್ಟಿಗೆ ಗ್ರಹಣ ಧಾರಣಗಳನ್ನು ಅವಲಂಬಿಸಿರುವದು. ಧಾರಣದ ತೀವ್ರತೆಯು ಹೆಚ್ಚಾಗಿದ್ದಂತೆ ಪ್ರತ್ಯಾನಯನವು ಬಹು ಹೆಚ್ಚು ಸುಲಭವಾಗಿ ಆಗುವದು. ಈ ವಿಷಯದಲ್ಲಿ ಮನಸು ಒಂದು ಸಾಟಿ ಎಂದು ಕಲ್ಪಿ ಸುವಾ; ಇದರ ಮೇಲೆ ನಾನು ಖಡುವಿನಿಂದ ಬರೆದರೆ ಬರೆದದ್ದು ಸಹಜವಾಗಿ ಅಳಿಸಿ

ಹೋಗುವದು. ಆದರೆ ಆ ಪಾಟಿಯ ಮೇಲೆ ಕಬ್ಬಿಣದ ಮೊಳೆಯಿಂದ ಅಕ್ಷರಗಳನ್ನು ಕೊರೆದರೆ ಅವು ಅಚ್ಚಳಿಯದೆ ಹಾಗೆ ಉಳಿಯುವವು. ನಾವು ಪ್ರತ್ಯಕ್ಷ ನೋಡಿದ ವಸ್ತುಗಳು ಪಾಟಿಯ ಮೇಲೆ ಮಳೆಯಿಂದ ಬರೆದ ಚಿತ್ರದಂತೆ ಎಂದೂ ಮರೆಯದೆ ಮನಸಿನಲ್ಲಿ ನಡುವವು. ಆದರೆ ಆ ವಸ್ತುಗಳ ಬಗ್ಗೆ ಮಾಡಿಕೊಂಡ ಜ್ಞಾನವು ಪಾಟಿಯ ಮೇಲೆ ಖಡುವಿನಿಂದ ಬರೆದ ಚಿತ್ರದಂತೆ ಮಸಮಸಕ ಆಗಿ ಮರೆತು ಹೋಗುವದು. ಪುನರಾವರ್ತನೆಯಿಂದ ಧಾರಣಾಶಕ್ತಿಯು ಬೆಳೆದು ಪ್ರತ್ಯಾನಯನವು ಸುಲಭವಾಗುವದು. ವರ್ಣಮಾಲೆ, ಮಗ್ಗಿಗಳು, ನಕ್ಷತ್ರವಾರಗಳ ಹೆಸರು ಮುಂತಾದವುಗಳು ಪುನರುಚ್ಚಾರಣದಿಂದ ಮನಸಿನಲ್ಲಿ ಗಟ್ಟಿಯಾಗಿ ಉಳಿದು ನಿರಾಯಾಸವಾಗಿ ನಮ್ಮ ನೆನಪಿಗೆ ಬರುವವು.

(೨) ಪ್ರತ್ಯಾನಯನವು ಸಾಹಚರ್ಯವನ್ನು ಅವಲಂಬಿಸಿರುವದು. ಸಾಹಚರ್ಯವೆಂದರೇನೆಂಬದನ್ನು ಕುರಿತು ವಿಚಾರ ಮಾಡುವಾ.

ನಮ್ಮ ಮನಸಿನಲ್ಲಿರುವ ಕಲ್ಪನೆಗಳು ಏಕಾಕಿಯಾಗಿರದೆ ಅವು ಒಂದನ್ನೊಂದು ಆಶ್ರಯಿಸಿ ಸಂಗಡಿಗರಂತೆ ಇರುವವು. ಇದರಿಂದ ಒಂದು ಕಲ್ಪನೆಯು ನೆನಪಾದರೆ ಅದರ ಇಷ್ಟಮಿತ್ರನಂತಿರುವ ಬೇರೊಂದು ಕಲ್ಪನೆಯು ಸಾಹಚರ್ಯದಿಂದ ನಮ್ಮ ಮನಸಿನಲ್ಲಿ ಬರುವದು.

ಪದಾರ್ಥಗಳು ಹಾಗು ಅವುಗಳ ಗುಣಧರ್ಮಗಳಲ್ಲಿ ಸಾಹಚರ್ಯವಿರುವದು. ಸಕ್ಕರೆಯ ಕಲ್ಪನೆಯು ನಮ್ಮ ಮನಸಿನಲ್ಲಿ ಬಂದ ಕೂಡಲೆ ಅದರ ವಿಶೇಷ ಗುಣವಾದ "ಸೀ" ಇದರ ಕಲ್ಪನೆಯು ಮನಸ್ಸಿನಲ್ಲಿ ತನ್ನಷ್ಟಕ್ಕೆ ತಾನೇ ಬರುವದು. ಇದರಂತೆ ಸಾಲೆಯು ನೆನಪಾದ ಕೂಡಲೆ ವಿದ್ಯಾರ್ಥಿಗಳ ಮನಸಿನಲ್ಲಿ ಶಿಕ್ಷಕ, ಅಭ್ಯಾಸ, ಸಹಾಧ್ಯಾಯ, ಹುಡುಗರು ಇವೇ ಮೊದಲಾದ ಕಲ್ಪನೆಗಳು ಬರುವವು. ವಾಚನಾಲಯ, ಔಷಧಾಲಯ, ಬಂದೀಖಾನೆಗಳಿಗೆ ಒಂದೊಂದು ಬಗೆಯ ಕಲ್ಪನೆಗಳು ಸಾಹಚರ್ಯದಿಂದ ನಮ್ಮ ಮನಸಿನಲ್ಲಿ ಬರುವವು. ಇದರಂತೆ ಒಂದು ಶಬ್ದವನ್ನು ಕೇಳಿದ ಕೂಡಲೆ ಅದಕ್ಕೆ ಸಂಬಂಧಿಸಿದ ಕೆಲವು ಕಲ್ಪನೆಗಳು ಸಾಹಚರ್ಯದಿಂದ ನಮ್ಮ ಮನಸಿನಲ್ಲಿ ಬರುವವು. ಆಕಾಶವು ಮೇಘದಿಂದ ಆಚ್ಛಾದಿತವಾಗಿದ್ದಾಗ ಮಳೆ ಬರುವ ಕಲ್ಪನೆಯು ನಮ್ಮಲ್ಲಿ ಬರುವದು. ಮುಂಜಾನೆ ಎದ್ದ ಕೂಡಲೆ ನೆಲವು ತೊಯ್ದದ್ದನ್ನು ನೋಡಿದರೆ ರಾತ್ರಿಯಲ್ಲಿ ಮಳೆ ಬಂದಿರುವದೆಂಬ ಕಲ್ಪನೆಯು ಸಾಹಚರ್ಯದಿಂದ ನಮ್ಮ ಮನಸಿನಲ್ಲಿ ಬರುವದು. ನಾವು ಒಂದು ಕವಿತೆಯನ್ನು ಅನ್ನುವಾಗ ಒಂದು ಪಾದವನ್ನು ಅಂದ ಕೂಡಲೆ ಎರಡನೇ ಪಾದವು ತನ್ನಷ್ಟಕ್ಕೆ ತಾನೇ ನೆನಪಿನಲ್ಲಿ ಬರುವದು. ಮೇಲೆ ಹೇಳಿದ ಉದಾಹರಣಗಳಲ್ಲಿ ಸಾಹಚರ್ಯದ ನಾಲ್ಕು ಪ್ರಕಾರಗಳು ಕಂಡುಬರುತ್ತವೆ.

ಪುಸ್ತಕಗಳು; ಅವುಗಳನ್ನು ಓದುವ ಕ್ರಮ.

(ಶಿಕ್ಷಕರನ್ನು ವಾಚನಾಲಯಗಳನ್ನು ಉದ್ದೇಶಿಸಿ ಬರೆದದ್ದು)

ಶಾಲೆಗಳಲ್ಲಿಯೇ ಆಗಲಿ ವ್ಯವಹಾರದಲ್ಲಿಯೇ ಆಗಲಿ ಆದ ಜ್ಞಾನವನ್ನು ದೃಢ ಪಡಿಸಲಿಕ್ಕೆ ಬರೆಹದಂಥ ಸಾಧನವು ಬೇರೊಂದಿಲ್ಲ. ಕೈ ಬರಹದ ಮೂಲಕ ಒಬ್ಬರು ಪಡೆದ ಜ್ಞಾನವು ಎಲ್ಲ ಕಡೆಯಲ್ಲಿ ಏಕಕಾಲಕ್ಕೆ ಪಸರಿಸುವದು ಅಸಾಧ್ಯವಾದ ಮಾತು. ಅಚ್ಚಿನ ಯಂತ್ರವಾದಂದಿನಿಂದ, ಒಬ್ಬರ ಜ್ಞಾನವು ಮತ್ತೊಬ್ಬರಿಗೆ ಪೃಥ್ವಿಯ ಎಲ್ಲ ಕಡೆಗಳಲ್ಲಿಯೂ ಏಕಕಾಲಕ್ಕೆ ಪುಸ್ತಕ ರೂಪದಿಂದ ಪಸರಿಸಲಿಕ್ಕೆ ಒಳ್ಳೇ ಅನುಕೂಲವಾಗಿದೆ. ಹಾಗೆಯೇ ಆ ಜ್ಞಾನವು ಪುನಃ ಸ್ಮರಣದಲ್ಲಿ ಬರಲಿಕ್ಕೆ ಪುಸ್ತಕಗಳು ಇದ್ದೇ ಇರುತ್ತವೆ. ಈ ರೀತಿಯಾಗಿ ಬರಿಯ ಬಾಯಿಮಾತಿನಿಂದ ಪಡೆದುದಕ್ಕಿಂತಲು ಹೆಚ್ಚುಕಾಲ ಅಥವಾ ಶಾಶ್ವತವಾಗಿ ಬುದ್ಧಿಯಲ್ಲಿ ಜ್ಞಾನವು ನೆಲೆಗೊಳ್ಳಲಿಕ್ಕೆ ಪುಸ್ತಕಗಳೇ ಹೆಚ್ಚಿನ ಸಾಧನವಾಗಿವೆ. ಒಬ್ಬ ಅಲೌಕಿಕ ವ್ಯಕ್ತಿಯು ಮೃತನಾದರೂ ಅವನ ಬೋಧನೆಯ ವಿಷಯಗಳು ಅಚ್ಚಾಗಿದ್ದರೆ ಆ ಪುಸ್ತಕಗಳನ್ನು ಓದತಕ್ಕವರ ಭಾಗಕ್ಕೆ ಆತನು ಸರ್ವದಾ ಜೀವಿಸಿದ್ದಂತೆಯೇ ಸರಿ. ಅಂದರೆ ಆ ಪುಸ್ತಕವು ಅವನ ಪ್ರತಿನಿಧಿಯಾಗಿ ಜ್ಞಾನೋಪದೇಶವನ್ನು ಕೊಟ್ಟು ಆತನಿಗೆ ಶಾಶ್ವತವಾದ ಕೀರ್ತಿಯನ್ನು ಅಜರಾಮರವಾಗಿ ಉಂಟು ಮಾಡಿಕೊಡುವದು. ಈಗ್ಗೆ ೨ ಸಾವಿರ ವರ್ಷಗಳ ಪೂರ್ವದಲ್ಲಿ ರೋಮಪಟ್ಟಣದಲ್ಲಿದ್ದ ಜಗತ್ಪ್ರಸಿದ್ಧನಾದ ಕೇಟೋ ಎಂಬಾತನು ತನಗಿಂತ ಪೂರ್ವದಲ್ಲಿ ಆಗಿ ಹೋದ ವಿದ್ವಾಂಸರ ಸಹವಾಸವನ್ನು ಪಡೆಯಬೇಕೆಂದೂ ತಾನು ಬೇಗ ಮೃತಪಟ್ಟರೆ ಹಾಗಾಗುವದೆಂದೂ ಹಾರೈಸುತ್ತಿದ್ದನಂತೆ! ಈಗಿನ ಕಾಲದಲ್ಲಿ ಅಂತಹ ಕಲ್ಪನೆಮಾಡಿಕೊಳ್ಳುವ ಪ್ರಸಂಗವಿರುವದಿಲ್ಲ. ಪೂರ್ವಿಕ ಮಹಾಶಯರೆಲ್ಲ ಪುಸ್ತಕ ರೂಪದಿಂದ ನೆಲಸಿರುವರು; ಅವರು ಸ್ನೇಹಿತರಾಗಿ ತಮ್ಮ ವಿಚಾರಗಳನ್ನು ಹೇಳುತ್ತಲಿರುವರು; ಕೆಲವರು ಪದ್ಯರೂಪವಾಗಿ ಕೆಲವರು ಗದ್ಯರೂಪದಿಂದ ತಮ್ಮ ತಮ್ಮ ಅನುಭವಗಳನ್ನು ಪ್ರಕಟಗೊಳಿಸುತ್ತಲಿರುವರು. ಇಷ್ಟೇ ಅಲ್ಲ, ಆಯಾ ವಿಷಯಗಳನ್ನು ಓದುತ್ತಿರುವಾಗ ಪ್ರತ್ಯಕ್ಷವಾಗಿ ಆ ಅನುಭವಗಳನ್ನು ಅನುಭವಿಸುವೆವೆಂದು ನಮಗೆ ಅನಿಸುತ್ತಿರುವದು. ಆ ಸುಖಾಸ್ವಾದದಲ್ಲಿ ನಮ್ಮ ನಮ್ಮ ಮರವೇ ನಮಗೆ ಆಗುವದು.

ಅನೇಕ ಪುಸ್ತಕಗಳಲ್ಲಿ ಅನೇಕಾನೇಕ ವಿಷಯಗಳು ಅನೇಕ ಭಾಷೆಗಳಲ್ಲಿ ವರ್ಣಿತವಾಗಿವೆ. ಸದ್ಯಕ್ಕೆ ಇಂಗ್ಲಿಷ ಭಾಷೆಯಲ್ಲಿ ಎಲ್ಲ ವಿಷಯಗಳು ಬರೆಯಲ್ಪಟ್ಟಿರುವವೆಂದರೆ ಅತಿಶಯೋಕ್ತಿಯಾಗಲಾರದು. ಅದೊಂದು ಭಾಷೆಯಲ್ಲಿ ಪಾಂಡಿತ್ಯವನ್ನು ಪಡೆದರೆ

ಬೇಕಾದ ವಿಷಯಗಳ ಜ್ಞಾನವನ್ನು ಸಂಪಾದಿಸಬಹುದು. ಎಲ್ಲ ಭಾಷೆಗಳನ್ನು ಕಲಿಯ ಬೇಕೆಂದು ಭಯಪಡುವ ಕಾರಣವಿಲ್ಲ.

ಇಷ್ಟಾದರೂ ಒಂದೇ ಭಾಷೆಯ ಸಮಗ್ರ ಪುಸ್ತಕಗಳನ್ನೂ ಓದುವದು ಕೂಡ ಅಸಾಧ್ಯವಾದ ಮಾತೇ ಸರಿ. ಹಾಗೆ ಓದುವದಾದರೂ ಉಪಯೋಗವಿಲ್ಲದ್ದೇ ಎಂದು ಹೇಳಬಹುದು. ಒಂದು ಪುಸ್ತಕ ಭಾಂಡಾರದಲ್ಲಿರುವ ಸಾವಿರಾರು ಪುಸ್ತಕಗಳನ್ನು ಸುಮ್ಮನೆ ಓದಿ ಮುಗಿಸುವದಕ್ಕಿಂತ ಉತ್ತಮ ಗ್ರಂಥಕಾರರಿಂದ ರಚಿತವಾದ ಕೆಲವು ಪುಸ್ತಕಗಳನ್ನು ಓದಿ ತಿಳಿದುಕೊಂಡು ಬುದ್ಧಿ ಸಂಸ್ಕಾರ ಪಡೆಯುವದು ಸುಲಭಸಾಧ್ಯವೂ ಶ್ರೇಯಸ್ಕರವೂ ಆಗಿದೆ. ಆದದರಿಂದ ಯಾವದೊಂದು ವಿಷಯದ ಜ್ಞಾನವನ್ನು ಮಾಡಿ ಕೊಳ್ಳುವದಕ್ಕಾಗಿ ಎಂತಹ ಪುಸ್ತಕಗಳನ್ನು ಆರಿಸಿಕೊಳ್ಳಬೇಕು, ಅವನ್ನು ಯೋಗ್ಯ ವಾಗಿ ಯಾವ ತೆರನಾಗಿ ಓದಬೇಕು.. ಎಂಬೀ ವಿಷಯಗಳೇ ಮಹತ್ವವಾದವೆಂದು ಒಟ್ಟಿನಮೇಲೆ ಧ್ವನಿತವಾಗುತ್ತದೆ.

ಇದು ಅಲ್ಲದೆ ಯಾವದಾದರೊಂದು ಪುಸ್ತಕವನ್ನು ನಾವು ಯಾವ ಉದ್ದೇಶದಿಂದ ಓದುವೆವೋ ಫಲವೂ ತದನುಗುಣವಾಗಿಯೇ ಲಭಿಸುವದು. ಒಂದು ಪುಸ್ತಕದ ಒಂದು ವಿಷಯವು ಒಬ್ಬರಿಗೆ ನೀತಿಬೋಧಕವಾಗಬಹುದು; ಮತ್ತೊಬ್ಬರಿಗೆ ಬುದ್ಧಿ ಕೌಶಲ್ಯವನ್ನು ಉಂಟುಮಾಡಬಹುದು; ಇನ್ನೊಬ್ಬರಿಗೆ ಮನೋವ್ಯಾಪಾರಗಳನ್ನು ಉದ್ದೀಪ್ತಗೊಳಿಸ ಬಹುದು; ಇತರರಿಗೆ ಬರಿ ವಿನೋದಕರವಾಗಿ ಮಾತ್ರ ಇರಬಹುದು. ಹೀಗೆ ಪುಸ್ತಕ ಗಳೂ ತಮ್ಮನ್ನು ಉಪಯೋಗಿಸಿಕೊಳ್ಳುವವರ ಯೋಗ್ಯತೆ, ಉದ್ದೇಶ, ಶ್ರದ್ಧೆ ಇವುಗಳಿಗೆ ತಕ್ಕ ಫಲವನ್ನು ಕೊಡುವವು.

ಶಾಲೆಗಳಲ್ಲಿಯೇ ಆಗಲಿ ಮನೆಗಳಲ್ಲಿಯೇ ಆಗಲಿ ಮಕ್ಕಳ ಕೈಯಲ್ಲಿ ಓದಲಿಕ್ಕೆ ಸುಮ್ಮಸುಮ್ಮನೆ ಯಾವವಾದರೂ ಕೆಲವು ಪುಸ್ತಕಗಳನ್ನು ಕೊಡುವದಕ್ಕಿಂತ ಓದುಗರ ಯೋಗ್ಯತೆ, ಅವನ್ನು ಓದುವ ಉದ್ದೇಶ, ಪುಸ್ತಕದಲ್ಲಿಯ ವಿಷಯದ ಮಹತ್ವ ಇವನ್ನೆಲ್ಲ ವಿಚಾರಿಸಿ ಅವರ ವಯಸ್ಸು, ಆಗಿನ ಪರಿಸ್ಥಿತಿ ಇವುಗಳಿಗನುಸರಿಸಿ ಪುಸ್ತಕಗಳನ್ನು ಆರಿಸಿಡುವದು ಬಹಳ ಮಹತ್ವವಾದದ್ದೆಂದು ಇಷ್ಟೆಲ್ಲ ವಿವರಣೆಯಿಂದ ಗೊತ್ತಾಗುವದು. ಹೀಗಿದ್ದರೂ ತಮ್ಮ ಮಕ್ಕಳ ವಿಷಯದಲ್ಲಿ ಈ ರೀತಿ ವಿಚಾರಿಸುವವರೊಬ್ಬರನ್ನಾದರೂ ಕಾಣುವದು ಅಪರೂಪ. ವಿದ್ಯಾರ್ಥಿಗಳೇ ದೊಡ್ಡವರಾಗಿ ಯೋಗ್ಯವಾದ ವಿಷಯಗಳನ್ನು ಗ್ರಹಿಸಿ ಮಿಕ್ಕವನ್ನೆಲ್ಲ ತ್ಯಜಿಸಿ ಬುದ್ಧಿ ಸಂಸ್ಕಾರ ಪಡೆದು ಮುಂದೆ ಬರಬಹುದು. ಇಂಥ ವಿದ್ಯಾರ್ಥಿಗಳು ೧೦೦ಕ್ಕೆ ಹೊರಡುವ ಪ್ರಮಾಣವು ತೀರ ಅಲ್ಪವಿರುವದು ಸಹಜವೇ. ಆದದರಿಂದ ಶಿಕ್ಷಣವು ಫಲಕಾರಿಯಾಗದೆ ಎಲ್ಲಿ ನೋಡಿದರೂ ದೊಡ್ಡ ಸನಕಳೆಯೇ ತೋರುವದರಲ್ಲಿ ಆಶ್ಚರ್ಯವಲ್ಲ. ಶಾಲೆಗಳಲ್ಲಿ ಅಥವಾ ಗ್ರಾಮಗಳಲ್ಲಿ ವಾಚನಾಲಯ

ಗಳನ್ನಷ್ಟೇ ಇಟ್ಟು ಸಂತೋಷಪಟ್ಟರೆ ತೀರದು. ಮೇಲೆ ಹೇಳಿದಂತೆ ವರ್ಗೀಕರಿಸಿ ಓದ ತಕ್ಕ ಪುಸ್ತಕಗಳ ಪಟ್ಟಿಯನ್ನು ಎಲ್ಲರಿಗೂ ಕಾಣುವಂಥ ಸ್ಥಳದಲ್ಲಿ ತೂಗಹಾಕಬೇಕು. ಹಾಳು ರಗಳೆಯು ಬಹಳ ಪುಸ್ತಕಗಳನ್ನು ಕಪಾಟಿನಲ್ಲಿಡುವದಕ್ಕಿಂತ ಯೋಗ್ಯವಾದ ಹಾಗು ನಿತ್ಯಬಳಿಕೆಯು ಸ್ವಲ್ಪ ಕಡಿಮೆ ಪುಸ್ತಕಗಳನ್ನಷ್ಟೇ ಇಡಬಹುದು.

ಈಗೀಗ ಪ್ರಕಟವಾದ ವಾಚನ ಕಲಿಸುವ ಪದ್ಧತಿಯು ತೀರ ಯೋಗ್ಯವಾದ ದ್ದೆಂದು ಇಷ್ಟೆಲ್ಲ ವಿಚಾರಾಂತ್ಯದಲ್ಲಿ ನಿಶ್ಚಿತವಾಗುವದು. ಹೀಗೆ ಗೊತ್ತಾದರೂ ಕಲಿ ಸುವ ಕ್ರಮಕಲ್ಕಗಲಿ ಕ್ರಮಗೊಳಿಸುವ ವ್ಯವಸ್ಥೆಯು ದಣಿವಿಗಾಗಲಿ ಬೇಸತ್ತು ಇದ್ದಂತೆ ಸಾಗಲಿ, ಎಂದೆನ್ನುವವರೇ ಬಹಳ. ಶಿಕ್ಷಕರೇ ಹೀಗೆನ್ನುವಾಗ ಪಾಲಕರಿಗಂತೂ ಯಾವದೂ ಗೊತ್ತೇ ಇರುವದಿಲ್ಲ. ಕೆಲವರು ಅರಿತವರಾಗಿದ್ದರೂ ತಿರಸ್ಕರಿಸಿ ಈ ವಿಷ ಯಕ್ಕೆ ಗಮನವನ್ನೇ ಕೊಡುವದಿಲ್ಲ.

ವಾಚನವು ಜ್ಞಾನದ ಮಾರ್ಗವು. ಕೇವಲ ಸ್ವಾನುಭವ ಜನ್ಯ ಜ್ಞಾನವು ತೀರ ಸ್ವಲ್ಪ. ಅಯುತವಾಗಿ ದೊರೆಯುವ ಪರಾನುಭವಜನ್ಯ ಜ್ಞಾನವೇ ಅಲ್ಪ ವೇಳೆಯಲ್ಲಿ ದೊರೆ ಯುವದು ಬಹಳ ಮಹತ್ವವಾದದ್ದು. ಬರೇ ಓದಿಬಿಟ್ಟರೆ ಈ ಜ್ಞಾನವು ಸ್ಥಿರವಾಗ ಲಾರದು. ಓದಿದ್ದನ್ನು ಚೆನ್ನಾಗಿ ತಿಳಿದುಕೊಂಡು ಅದು ಬುದ್ಧಿಸ್ಥವಾಗುವಂತೆ ಅದನ್ನು ಪರ್ಯಾಲೋಚಿಸಬೇಕು. ತೀರ ಮಹತ್ವವಾದ ವಿಷಯವನ್ನು ಟಿಪ್ಪಣಿ ಬುಕ್ಕಿನಲ್ಲಿ ಬರೆ ದಿಟ್ಟುಕೊಳ್ಳಬೇಕು. ಬರಿಯ ವಿಷಯ ಜ್ಞಾನಕ್ಕೇ ಮಹತ್ವಕೊಟ್ಟರೆ ತೀರದು. ಉತ್ತ ಮೋತ್ತಮ ವಾಕ್ಯಗಳಾಗಲಿ, ಅರ್ಥದಿಂದ ತುಂಬಿ ತುಳುಕುವ ಶಬ್ದಗಳಾಗಲಿ ಇದ್ದರೆ ಅವನ್ನು ಬರೆದಿಟ್ಟುಕೊಳ್ಳಬೇಕು. ಬೇಕಾದಾಗ ಅವು ಜ್ಞಾಪಕಕ್ಕೆ ಬರುವಂತೆ ಪ್ರಸಂಗ ವಿಶೇಷದಲ್ಲಿ ಗಟ್ಟಿಮಾಡಬಹುದು. ಓದಿದಭಾಗದ ಆವೃತ್ತಿಯನ್ನಂತೂ ಆರಂಭದಲ್ಲಿ ಮಾಡಿಯೇ ಮಾಡಬೇಕು. ಒಟ್ಟಿನಮೇಲೆ ಓದಿದ ವಿಷಯವನ್ನು ಶ್ರದ್ಧೆಯಿಂದ ಮನನ ಮಾಡಿಕೊಳ್ಳಲಿಕ್ಕೆ ತಪ್ಪಬಾರದು.

ಸಮುದ್ರ, ಪ್ರಯಾಣ, ಪರ್ವತ, ಭವ್ಯಮಂದಿರ, ನದಿ, ದಬದಬೆ ಮೊದಲಾದವು ಗಳ ವರ್ಣನೆಯ ಪುಸ್ತಕಗಳನ್ನು ಓದುವಾಗ ಅವು ಮನಸ್ಸನ್ನು ಆಕರ್ಷಿಸುವ ಬಗೆ ಯನ್ನು ನೆನಪಿಟ್ಟುಕೊಳ್ಳಲಿಕ್ಕೆ ಬೇಕು. ಮೇಲೆ ಬರೆದಂತೆ ತಕ್ಕ ಶಬ್ದಗಳು, ಅವು ಗಳನ್ನುಪಯೋಗಿಸುವ ಬಗೆ, ಇವನ್ನು ತಿಳಿದುಕೊಳ್ಳಬೇಕು.

ಆಗ ಆ ವಸ್ತುಗಳ, ನಕಾಶ-ಚಿತ್ರಗಳ ಉಪಯೋಗಮಾಡಿಕೊಳ್ಳಬೇಕು. ಉದಾ ಹರಣಾರ್ಥವಾಗಿ ಗೆರಸಪ್ಪೆಯ ದಬದಬೆ, ತಾಜಮಹಾಲಿನ ವರ್ಣನೆ, ನಲರಾಜನ ದುಃಖ ಕಥನ ಇವುಗಳನ್ನೋದುವಾಗ, ಭಾವಪಟ ಕನಿಷ್ಠಪಕ್ಷಕ್ಕೆ ಚಿತ್ರ ಇವು ಇದ್ದರೆ ನೆಟ್ಟಗೆ.

ಯಾವನೊಬ್ಬ ಮಹನೀಯನ ಚರಿತ್ರೆಯನ್ನು ಓದುವಾಗ ಅದಕ್ಕೆ ಸಂಬಂಧಿಸಿ ವೃತ್ತಾಂತಗಳು ವಿಪುಲವಾಗಿದ್ದರೆ ಕೆಲಕೆಲವು ಭಾಗಗಳನ್ನು ಓದುತ್ತ ಪುಸ್ತಕ ಮುಚ್ಚಿ ಅವನ್ನು ನೆನಪುಮಾಡಿಕೊಳ್ಳಬೇಕು. ಸ್ವಲ್ಪ ಮರೆತರೆ ಪುಸ್ತಕ ತೆಗೆದು ನೋಡಿಕೊಳ್ಳ ಬೇಕು. ಜಗತ್ತಿನಲ್ಲಿ ದೊಡ್ಡವಾಗಿ ತೋರುವ ಸಂಗತಿಗಳು ಸಹ ಕಾರಣಕ್ಕೆ ಒಳಪಟ್ಟೇ ಇರುತ್ತವೆ. ಅವು ಮೊದಮೊದಲು ಸುಲಭ ಸಾಧ್ಯವಾಗುತ್ತ ಬೆಳೆದು ಬೆಳೆದು ದೊಡ್ಡ ವಾಗಿ ಕಾಣುವವು. ಜೀವನ ಚರಿತ್ರೆಯು ಕಾರ್ಯಕಾರಣ ಭಾವಗಳ ಕಡೆಗೆ ಲಕ್ಷಗೊಟ್ಟು ಓದಿದರೆ ಎಷ್ಟೋ ಜನರಿಗೆ ಹಾಗೆಯೇ ಆಚರಿಸಲಿಕ್ಕೆ ಪ್ರಸಂಗಗಳು ದೊರೆಯುವವು. ಕ್ಲೈವನು ಹ್ಯಾನಿಬಾಲನ ಚರಿತ್ರೆಯನ್ನೇ ಓದಿ ಆರ್ಕಾಟದ ಕಾಳಗದಲ್ಲಿ ಜಯಶೀಲ ನಾದನು; ಓದುಗರೆಲ್ಲರೂ ಕಡಿಮೆ ಯೋಗ್ಯತೆಯುವರೇ ಇರುವದಿಲ್ಲ. ಯಾರು ಹ್ಯಾಗಾ ಗುವರೆಂಬ ನಿರ್ಣಯುವೂ ಆಗ ಆಗುತ್ತಲಿರುವದಿಲ್ಲ, ಕೇವಲ ದೈವವಾದಿಯಾಗಿ ಬೇ ಗಾಗಿ ಕೊಡುವದಕ್ಕಿಂತ ಕರ್ಮಾಸಕ್ತನಾಗಿ ಹೆಣಗುತ್ತಲಿರುವದು ಲೇಸೆಂದು ಗಟ್ಟಿ ಯಾಗಿ ತಿಳಿಯಬೇಕು. ತಾನು ಓದಿದ ಸಂಗತಿಯನ್ನು ಮಿತ್ರರ ಮುಂದೆಯಾಗಲಿ ಮನೆಯವರ ಎದುರಿಗಾಗಲಿ ಹೇಳುವ ರೂಢಿಯನ್ನಿಟ್ಟುಕೊಳ್ಳಬೇಕು. ಇದು ಸ್ವಭಾವ ಶೀಲವಾಗಿಯೇ ಇರುವದು. ಹುಡುಗರು ಹಾಗೆ ಹೇಳಬಂದರೆ ಪ್ರಪಂಚದಲ್ಲಿ ತೊಡಗಿ ಬಸವಳಿದು ಬೇಯುವ ನಾವು ಕೇಳುವದರ ಬದಲು ಅಕ್ಕಸಪಟ್ಟು ಮೈಮೇಲೆ ಹೋಗು ವೆವು. ಬಳಿಕ ಪಶ್ಚಾತ್ತಾಪ ಪಡುವೆವು. ಶಿಕ್ಷಕರೂ ಪಾಲಕರೂ ಆದ ನಾವೇ ಹಾಗೆ ಮಾಡುವಾಗ ಉಳಿದವರ ಪಾಡೇನು?

ತರ್ಕಶಾಸ್ತ್ರ, ತತ್ವಶಾಸ್ತ್ರ ಮೊದಲಾದ ಆಲೋಚನಾಶಕ್ತಿಯನ್ನು ಬಲಪಡಿಸತಕ್ಕ ಸಂಗತಿಗಳನ್ನು ಓದುವಾಗ ನಡುನಡುವೆ ಒಂದೊಂದು ಮೆಟ್ಟಿಗೆ ನಿಲ್ಲಬೇಕು. ಅಲ್ಲಿ ಗ್ರಂಥಕರ್ತನ ಆಶಯವೇನು? ಆತನು ಹಾಗೆ ಅಭಿಪ್ರಾಯಪಡುವದಕ್ಕೆ ಕಾರಣ ಗಳೇನು? ನಮ್ಮ ಬುದ್ಧಿಗೆ ತೋರುವ ಇತರ ಕಾರಣಗಳು ಯಾವವು? ಮೊದಲಾದವು ಗಳನ್ನೆಲ್ಲ ಯೋಚಿಸಿ ಊಹಿಸಬೇಕು.

ಯಾವದನ್ನೇ ಆಗಲಿ ನಾವು ಓದಿದ್ದನ್ನು ನಮ್ಮ ಭಾಷೆಯಲ್ಲಿ ಬರೆ ದಿಡುವದರಿಂದ ಉಂಟಾಗುವ ಲಾಭವು ನೆಲೆಯಿಲ್ಲದ್ದು. ಮೇಲು ತರಗತಿ ಪಡೆಯುವ ವಿದ್ಯಾರ್ಥಿಗಳಿಗಂತೂ ಈ ಸಂಗತಿಯ ಮಹತ್ವವು ಅಷ್ಟಿಷ್ಟೆಂದು ಹೇಳಲಾ ಸಲ್ಲ. ಇದರಿಂದ ನಮ್ಮ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಇತರರಿಗೆ ತಿಳಿಯಪಡಿ ಸುವ ಶಕ್ತಿಯು ಹೆಚ್ಚುವದು ಮಾತ್ರವಲ್ಲದೆ, ನಾವು ಓದಿದ ಅಂಶಗಳಲ್ಲಿ ನಿಷ್ಕೃಷ್ಟವಾದ ಜ್ಞಾನವೂ ಉಂಟಾಗುವದು. ಯಾಕಂದರೆ– ತನಗೇ ಚೆನ್ನಾಗಿ ತಿಳಿಯದಿದ್ದುದನ್ನು ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುವದೂ ಕಷ್ಟ. ಹೀಗಿರುವಾಗ ಒಂದು ಪುಸ್ತಕದಲ್ಲಿ

ುವ ಸಾರಾಂಶವನ್ನು ನಮಗೆ ನಾವೇ ಆಗಲಿ ಅಥವಾ ಇತರರಿಗೇ ಆಗಲಿ ತಿಳಿಯ ಹೇಳು ದು ಅಷ್ಟು ಸುಲಭವಾದ ಕೆಲಸವಲ್ಲ. ಅದಕ್ಕೆ ನಿಶ್ಚೃಷ್ಟವಾದ ವಿಷಯ ಜ್ಞಾನವೂ ಚಾತುರ್ಯವೂ ಉತ್ತಮ ಭಾಷೆಯೂ ಅತ್ಯಾವಶ್ಯಕ. ಓದಿದ್ದನ್ನು ನಮ್ಮಷ್ಟಕ್ಕೇ ನಾವೇ ೀಳಿಕೊಳ್ಳುತ್ತ ಪುನಃ ಪುನಃ ಆವೃತ್ತಿಮಾಡಿಕೊಳ್ಳುವದಕ್ಕಿಂತಲೂ ಇತರರಿಗೆ ಹೇಳು ದು ಉತ್ತಮ. ಯಾಕಂದರೆ—ಅವರಿಗೆ ಚೆನ್ನಾಗಿ ತಿಳಿಯುವಂತೆ ಹೇಳಬೇಕಾದರೆ ುಖ್ಯವಾಗಿ ನಮ್ಮಲ್ಲಿರುವ ವಿಷಯಜ್ಞಾನವೂ ಸರಿಯಾದ ವಿಚಾರಸರಣಿಯೂ ವೆಲ್ಲಾ ಕಲೆತು ಕೆಲಸಮಾಡುವವು. ಹಾಗೆ ಹೇಳಿದ್ದರಲ್ಲಿ ಏನಾದರೂ ತಪ್ಪುತಡಿಗಳಾ ರೆ ಸ್ನೇಹಿತರು ಅಥವಾ ಹಿತಕರ್ತೃಗಳು ತಿದ್ದುವದಕ್ಕೂ ಅವಕಾಶವಿರುವದು. ಅದರೂ ಾವು ಓದಿದ್ದರ ಮುಖ್ಯಾಂಶಗಳನ್ನು ಬರೆದಿಡುವದರಲ್ಲಿಯೂ ತುಂಬಾ ಪ್ರಯೋಜನ ುಂಟು. ಬರೆವಣಿಗೆಯಲ್ಲಿ ಅಭಿಪ್ರಾಯಗಳನ್ನು, ಮಾತಾಡುವಾಗ ಉಪಯೋಗಿಸುವ ಕ್ಕಿಂತಲೂ ಮೇಲಾದ ಕ್ರಮದಲ್ಲಿ ಉತ್ತಮವಾದ ಮಾರ್ಗದಲ್ಲಿ ಉಪಯೋಗಿ ುವದಕ್ಕೆ ಅವಕಾಶವುಂಟು.

ವಾಚನಾಭಿರುಚಿಯನ್ನು ಉಂಟುಮಾಡತಕ್ಕದ್ದು ಶಿಕ್ಷಕರ ಮುಖ್ಯ ಕರ್ತವ್ಯ ಗಳಲ್ಲಿ ಒಂದಾಗಿದೆ. ಲೋಕದಲ್ಲಿ ಸಮಸ್ತ ವಿಷಯಗಳು ಸಾಮಾನ್ಯವಾಗಿ ಗ್ರಂಥಗಳ ್ಲಿಯೇ ಅಡಕವಾಗಿರುವವು. ಆದುದರಿಂದ ಓದುಗರಲ್ಲಿ ಆಸಕ್ತಿ ಹುಟ್ಟಿದರೆ ಎಂಥ ಿಷಯಗಳನ್ನಾದರೂ ತಿಳಿದುಕೊಳ್ಳುವದಕ್ಕೆ ಸಹಾಯವಾಗುವದು.

ಪ್ರ ಕ ಟ ನೆ.

೧೯೩೪ನೆಯ ಇಸ್ವಿಯ ಎಪ್ರಿಲ ತಿಂಗಳಲ್ಲಾಗುವ (ಉರ್ದುಬಾಹ್ಯ) ವ್ಹ. ಫಾ. ಪರೀಕ್ಷೆಯ ವೇಳಾಪತ್ರಿಕೆ

ವಾರ ಮತ್ತು ತಾರೀಖು	ಸ್ಟ್ಯಾಂಡರ್ಡ ವೇಳೆ		ವಿಷಯ	ಗುಣಗಳು	ಶರಾ
	ಇಂದ	ವರೆಗೆ			
ಮಂಗಳವಾರ	೧೧	೧೨	ಉಮೇದವಾರರ ಹೆಸರು ಹಚ್ಚಿಕೊಳ್ಳುವದು.		
೩-೪-೧೯೩೪	೧೨	೧೪	೨ನೆಯ ಸದರ (ಅ) ಮತ್ತು (ಬ) ನಿಬಂಧ ಅಥವಾ ರಿಪೋರ್ಟ ಮತ್ತು ಕೈಬರಹ. ದೇಶಭಾಷೆಯಲ್ಲಿ ವ್ಹ. ಉರ್ದುಡವರಿಗೆ, ಉರ್ದುದಲ್ಲಿ ಉ. ವ್ಹ. ಉಮೇದವಾರರಿಗೆ	(ಅ) ೫೦ (ಬ) ೨೫	
,,	೧೫	೧೮	೫ನೆಯ ಸದರ ಆರೋಗ್ಯವಿಜ್ಞಾನ ಅಥವಾ ಶಾರೀರಶಾಸ್ತ್ರ ಹಾಗು ಆರೋಗ್ಯಶಾಸ್ತ್ರ ಮತ್ತು ಶಾಸ್ತ್ರೀಯ ವಿಷಯ.	೧೦೦	
ಬುಧವಾರ	೧೧	೧೪	೩ನೆಯ ಸದರ (ಅ) ಗಣಿತ.	(ಅ) ೧೦೦	
೪-೪-೧೯೩೪	೧೫	೧೮	೪ನೆಯ ಸದರ (ಅ) ಹಾಗು (ಬ) ಇತಿಹಾಸ, ಭೂಗೋಲ	(ಅ) ೫೦ (ಬ) ೫೦	
ಗುರುವಾರ	೧೧	೧೪	೩ನೆಯ ಸದರ (ಬ) ಮತ್ತು (ಕ) ಭೂಮಿತಿ ಹಾಗು ಹಿಂದೂಪದ್ಧತಿ ಜಮಾಖರ್ಚು.	(ಬ) ೫೦ (ಕ) ೫೦	
೫-೪-೧೯೩೪	೧೫	೧೮	೧ನೆಯ ಸದರ (ಬ) ಮತ್ತು (ಕ) ದೇಶಭಾಷೆ ಅಥವಾ ಉರ್ದು.	(ಬ) ೪೫ (ಕ) ೩೦	ಗದ್ಯ ೨೫ ಪದ್ಯ ೨೦
ಶುಕ್ರವಾರ	೭-೩೦	೯-೩೦	೬ನೆಯ ಸದರ (ಅ) ಉರ್ದು ಅಥವಾ ದೇಶಭಾಷೆ.	(ಅ) ೫೦; ಬರಹದ ಕೆಲಸ ೪೦	ಬಾಯಿಪರೀಕ್ಷೆ ೧೦
೬-೪-೧೯೩೪	೯-೪೫	೧೦-೩೦	ಬಾಯಿಪರೀಕ್ಷೆ ೬ನೆಯ್ಯ ಸದರ (ಅ)		
,,	೧೫	೧೭	೬ನೆಯ ಸದರ (ಬ) ಪತ್ರ ಅಥವಾ ರಿಪೋರ್ಟ. ಉರ್ದುದಲ್ಲಿ ವ್ಹ. ಉರ್ದು ಉಮೇದವಾರರು, ದೇಶಭಾಷೆಯಲ್ಲಿ ಉರ್ದು ವ್ಹ. ಉಮೇದವಾರರು	(ಬ) ೩೫	
,,	೧೭-೧೫	೧೮	ಬಾಯಿಪರೀಕ್ಷೆ ೧ನೆಯ ಸದರ (ಅ) ಮತ್ತು (ಡ) ಸ್ಥಾನಿಕ ಉಮೇದವಾರರಿಗೆ ಮಾತ್ರ.	(ಅ) ೩೦ (ಡ) ೨೦	

೧೯೩೪ನೆಯ ಇಸ್ವಿಯ ಅಗ್ರಿಕಲ್ಚರಲ್ ಬಾಯಸ್ ಅಭ್ಯಾಸಪತ್ರಿಕೆಯಂತೆ ಹುಡುಗರ ವ್ಹ. ಫಾ. ಪರೀಕ್ಷೆಯ ವೇಳಾಪತ್ರಿಕೆ

ವಾರ ಮತ್ತು ತಾರೀಖು	ಸ್ಟ್ಯಾಂಡರ್ಡ ವೇಳೆ		ವಿಷಯ	ಗುಣ
	ಇಂದ	ವರಿಗೆ		
ಮಂಗಳವಾರ ೩-೪-೧೯೩೪	೧೧	೧೨	ಉಮೇದವಾರರ ಹೆಸರು ಹಚ್ಚಿಕೊಳ್ಳುವದು	
	೧೨	೧೪	೨ನೆಯ ಸದರ (ಅ) ಮತ್ತು (ಬ) ನಿಬಂಧ ಅಥವಾ ರಿಪೋರ್ಟ ಮತ್ತು ಕೈ ಬರಹ	(ಅ) ೫೦ (ಬ) ೨೫
	೧೫	೧೭	೫ನೆಯ ಸದರ(ಅ)ಶಾಸ್ತ್ರೀಯ ವಿಷಯ(ಬ)ಆರೋಗ್ಯಶಾಸ್ತ್ರ	(ಅ) ೨೫ (ಬ) ೨೫
ಬುಧವಾರ ೪-೪-೧೯೩೪	೧೧	೧೪	೩ನೆಯ ಸದರ (ಅ) ಗಣಿತ (ಬ) ಕ್ಷೇತ್ರಫಲ (ಕ) ಹಿಂದು ಪದ್ಧತಿ ಜಮಾಖರ್ಚು	(ಅ) ೫೦ (ಬ) ೨೫ (ಕ) ೨೫
	೧೫	೧೮	೪ನೆಯ ಸದರ (ಅ) ರಾಜ್ಯದಾಡಳಿತ (ಬ) ಸಹಕಾರಿತ್ವ (ಕ)ಭೂಗೋಲ	(ಅ) ೨೫ (ಬ) ೨೫ (ಕ) ೫೦
ಗುರುವಾರ ೫-೪-೧೯೩೪	೧೧	೧೪	೬ನೆಯ ಸದರ (ಅ) ಒಕ್ಕಲತನ (ಬ) ಪ್ರಕೃತಿವಿಮರ್ಶೆ	(ಅ) ೩೫ (ಬ) ೩೦
	೧೫	೧೮	೧ನೆಯ ಸದರ (ಬ) ಮತ್ತು (ಕ) ಭಾಷಾವಿಷಯ	(ಬ) ೪೫ (ಕ) ೩೦
ಶುಕ್ರವಾರ ೫-೪-೧೯೩೪	*	*	ಪ್ರಯೋಗ ಪರೀಕ್ಷೆ ೬ನೆಯ ಸದರು	೫೦
	*	*	ಪ್ರಯೋಗ ಪರೀಕ್ಷೆ ೬ನೆಯ ಸದರು	೩೫

ಸೂಚನೆ— ಬಾಯಿಪರೀಕ್ಷೆ ೧ನೆಯ ಸದರ (ಅ) ಮತ್ತು (ಡ), (ಅ) ೩೦ (ಡ) ೨೦ ಇದು ಪ್ರತಿದಿವಸ ಬರಹಪರೀಕ್ಷೆ ಮುಗಿದ ಬಳಿಕ ಸಂಜೆಯ ಮುಂದೆ ತೆಗೆದುಕೊಳ್ಳಲ್ಪಡುವದು. ಮೊದಲು ಹೊರಗಿನಿಂದ ಬಂದವರ ಪರೀಕ್ಷೆಯಾಗುವದು.

* ಟೀಪು:— ಅಗ್ರಿಕಲ್ಚರಲ್ ಓವ್ಹರಸೀಯರರ ಒಡನೆ ಆಲೋಚನೆಮಾಡಿ ಲೋಕಲ್ ಪ್ರೆಸಿಡೆಂಟರು ವೇಳೆಯನ್ನು ನಿಶ್ಚಯಿಸುವರು.

೧೯೩೪ನೆಯ ಇಸ್ವಿಯ ಗಂಡುಮಕ್ಕಳ ಕನ್ನಡ ವ್ಹ. ಫಾ. ಪರೀಕ್ಷೆಯ ವೇಳಾಪತ್ರಿಕೆ

ತಾರೀಖು	ಸ್ಟ್ಯಾಂಡರ್ಡ ಟಾಯಿಮ್ ಇಂದ	ಸ್ಟ್ಯಾಂಡರ್ಡ ಟಾಯಿಮ್ ವರೆಗೆ	ವಿಷಯುಗಳು	ಗುಣಗಳು
ಮಂಗಳವಾರ	೧೧	೧೨	ಉಮೇದವಾರರ ಹೆಸರು ಹಚ್ಚಿಕೊಳ್ಳುವದು.	
೩-೪-೧೯೩೪	೧೨	೧೪	೨ನೆಯ ಸದರ (ಅ) ಮತ್ತು (ಬ) ನಿಬಂಧ ಅಥವಾ ರಿಪೋರ್ಟ ಹಾಗು ಕೈಬರಹ	(ಅ) ೫೦ (ಬ) ೨೫
,,	೧೫	೧೮	೫ನೆಯ ಸದರ ಆರೋಗ್ಯವಿಜ್ಞಾನ ಅಥವಾ ಶಾರೀರಶಾಸ್ತ್ರ ಮತ್ತು ಶಾಸ್ತ್ರೀಯ ವಿಷಯ ಹಾಗು ೭ನೆಯ ಪುಸ್ತಕದಲ್ಲಿಯ ಶಾಸ್ತ್ರೀಯ ವಿಷಯುಗಳು	೧೦೦
ಬುಧವಾರ	೧೧	೧೪	೩ನೆಯ ಸದರ (ಅ) ಗಣಿತ	(ಅ) ೧೦೦
೪-೪-೧೯೩೪	೧೫	೧೮	೪ನೆಯ ಸ॥ (ಅ) ಹಾಗು (ಬ) ಇತಿಹಾಸ ಮತ್ತು ಭೂಗೋಲ	(ಅ) ೫೦ (ಬ) ೫೦
ಗುರುವಾರ	೧೧	೧೪	೩ನೆಯ ಸದರ (ಬ) ಮತ್ತು (ಕ) ಭೂಮಿತಿ ಮತ್ತು ಹಿಂದು ಪದ್ಧತಿ ಜಮಾಖರ್ಚು	(ಬ) ೫೦ (ಕ) ೫೦
೫-೪-೧೯೩೪	೧೫	೧೮	೧ನೆಯ ಸದರ (ಬ) ಮತ್ತು (ಕ) ಭಾಷಾವಿಷಯ	(ಬ) ೪೫ (ಕ) ೩೦ (ಗ. ೨೫ ಪ. ೨೦)
ಶುಕ್ರವಾರ	೭-೩೦	೧೦-೩೦	ಬಾಯಿ ಪರೀಕ್ಷೆ ೧ನೆಯ ಸದರ (ಅ) ಮತ್ತು (ಡ)	(ಅ) ೩೦ (ಡ) ೨೦ ಪ.೨೦
೬-೪-೧೯೩೪	೧೫	೧೮	ಬಾಯಿಪರೀಕ್ಷೆ ಹೊರಗಿನಿಂದ ಬಂದವರ ಪರೀಕ್ಷೆಯನ್ನು ಮೊದಲು ಆ ಬಳಿಕ ಸ್ಥಾನಿಕ ಉಮೇದವಾರರ ಪರೀಕ್ಷೆ	
ಶನಿವಾರ ೭-೪-೧೯೩೪			ಬಾಯಿಪರೀಕ್ಷೆ ೧ನೆಯ ಸದರ (ಅ) ಮತ್ತು (ಡ) ಹಿಂದಿನ ದಿವಸ ಪರೀಕ್ಷೆ ಆಗದೆ ಉಳಿದ ಉಮೇದವಾರರ ಬಾಯಿ ಪ॥	

ಮಾರಾಟಕ್ಕೆ ಸಿದ್ಧವಾಗಿದೆ] [ಬೆಲೆ ೫೮ ಪೈ

ಕರ್ನಾಟಕದ ಕಥಾಮಯ ಇತಿಹಾಸ

(ಕನ್ನಡ ೪ನೆಯ ಇಯತ್ತೆಗಾಗಿ)

ಲೇಖಕ:— ಗೋ. ಅ. ಜೋಗಳೇಕರ, ಸ್ಕೂಲ್‌ಮಾಸ್ತರ ಗದಗ

ನಮ್ಮಿಂದ ರಚಿಸಲ್ಪಟ್ಟ "ಕರ್ನಾಟಕಾಚಾ ಗೋಷ್ಟೀರೂಪ ಇತಿಹಾಸ" ಎಂಬ ಮರಾಠಿ ಪುಸ್ತಕವು ಮುಂಬಯಿ ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾಗಿದೆ. ಅದರ ಕನ್ನಡ ಭಾಷಾಂತರವು ಮಾರಾಟಕ್ಕೆ ಸಿದ್ಧವಾಗಿದೆ. ಇದರಲ್ಲಿ ಐತಿಹಾಸಿಕ ಕಾಲದಿಂದ ಈಗಿನವರೆಗಿನ ಕರ್ನಾಟಕದ ಇತಿಹಾಸವು ಚಿಕ್ಕಮಕ್ಕಳಿಗೆ ತಿಳಿಯಬಹುದಾದ ಸುಲಭ ಭಾಷೆಯಲ್ಲಿ ೩೨ ಕಥೆಗಳ ರೂಪದಿಂದ ಬರೆಯಲ್ಪಟ್ಟಿದೆ. ಬಾಲಕರಲ್ಲಿ ಸ್ಫೂರ್ತಿಯೂ, ಸ್ವಾಭಿಮಾನವೂ ಹುಟ್ಟುವಂತೆ ಇದರ ರಚನೆಯಿದೆ. ಎರಡು ನಕಾಶಗಳೂ, ಅಲ್ಲಲ್ಲಿ ಬೇಕಾಗುವ ಚಿತ್ರಗಳೂ ಸೇರಿಸಲ್ಪಟ್ಟಿವೆ. ಇಂಥ ಉಪಯುಕ್ತವಾದ ಪುಸ್ತಕಕ್ಕೆ ಸ್ಕೂಲ್‌ಬೋರ್ಡುಗಳೂ, ಶಿಕ್ಷಕರೂ ಉತ್ತೇಜನಕೊಟ್ಟು ಬಾಲಕರಿಗೆ ನಿಜವಾದ ಇತಿಹಾಸಜ್ಞಾನವನ್ನು ಮಾಡಿಕೊಡಬೇಕೆಂದು ಹಾರೈಸುವೆವು.

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುವವು. ಶಿಕ್ಷಕರಿಗೂ ಪುಸ್ತಕವ್ಯಾಪಾರಿಗಳೂ ಯೋಗ್ಯ ಕಮಿಶನು ಕೊಡಲಾಗುವದು.

ಗೋ. ಅ. ಜೋಗಳೇಕರ,

ಸ್ಕೂಲ್‌ಮಾಸ್ತರ, ಗದಗ ಮ್ಯುನಿಸಿಪಾಲಿಟಿ, ಗದಗ.

ಟೆಕ್ಸ್ಟ ಬುಕ್ ಎಂದು ಮಂಜೂರಾಗಿದೆ.

ಪ್ರದೇಶ ಪದ್ಧತಿಯಿಂದ ಬರೆಯಲ್ಪಟ್ಟ

೪ನೆಯ ಇಯತ್ತೆಯ

ಸಚಿತ್ರ—ಭೂವರ್ಣನೆ

ಬೆಲೆ: ೭ ಆಣೆ] [ಬೆಲೆ: ೭ ಆಣೆ

೪ನೆಯ ಇಯತ್ತೆಯ

ಸಚಿತ್ರ—ಜಮಾಖರ್ಚು

ಬೆಲೆ: ೩ ಆಣೆ] [ಬೆಲೆ: ೩ ಆಣೆ

ಬೆಳಗಾಂವ ಜಿಲ್ಹೆಯ

ಸಚಿತ್ರ—ಭೂವರ್ಣನೆ

ಬೆಲೆ: ೫ ಆಣೆ] ಬೆಲೆ: ೫ ಆಣೆ

ನಮ್ಮ ಎಲ್ಲ ಪುಸ್ತಕಗಳು ಎ. ಆರ್. ಶಿವನಾಗಪ್ಪಾ, ಬುಕ್-ಡಿಪೋ ಹುಬ್ಬಳ್ಳಿ ಹಾಗು ಕರ್ನಾಟಕದ ಎಲ್ಲ ಬುಕ್-ಡಿಪೋಗಳಲ್ಲಿ ದೊರೆಯುವವು.

ವಿಳಾಸ:— **ಶ್ರೀಬಲಭೀಮ ಸ್ಟೋಅರ್ಸ, ಕಾಗವಾಡ. ಜಿ. ಬೆಳಗಾಂವ.**

Reg. No. B. 2567

ಜಾಹೀರಾತು

(೧) ಹಿಂದುಮುಸಲ್ಮಾನರ ಇತಿಹಾಸ.

(ಬಾಲಕೃಷ್ಣ ಹಳೇಪೇಟೆಕೃತ)

ಇದು, ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಯ ಉಪಯೋಗಕ್ಕಾಗಿ ಸುಲಭವಾದ ಅಲಂಕಾರಿಕ ಭಾಷೆಯಲ್ಲಿ ಹೊಸಪದ್ಧತಿಗನುಸಾರವಾಗಿ ಬರೆಯಲ್ಪಟ್ಟಿರುವದು. ಈ ವರೆಗೆ ಬರೆದ ಇತಿಹಾಸಗಳಲ್ಲಿ ಇದು ಒಳ್ಳೇ ಉಪಯುಕ್ತವಾಗಿರುವದು. ಮುಂಬಯಿ ಸರಕಾರದಿಂದ ಕನ್ನಡ ೫ ನೆ ಇಯತ್ತೆಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಲ್ಪಟ್ಟಿರುವದು. ಬೆಲೆ ೧–೮–೦.

(೨) ಕರ್ನಾಟಕದ ವರ್ಣನೆಯೂ ಇತಿಹಾಸವೂ.

(ನಾರಾಯಣ ಶ್ರೀನಿವಾಸ ರಾಜಪುರೋಹಿತ ಕೃತ)

ಕರ್ನಾಟಕದ ಇತಿಹಾಸ ಸಂಶೋಧಕ ಮಂಡಲದ ಪ್ರಮುಖರಲ್ಲೊಬ್ಬರಾದ ಮಿ. ರಾಜಪುರೋಹಿತ ಇವರು ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿ ಶಿಲಾಲೇಖ, ತಾಮ್ರಪಟ, ನಿಷಿದಿಯಕಲ್ಲು, ಮಾಸತಿಕಲ್ಲು, ವೀರಗಲ್ಲು ಮೊದಲಾದವುಗಳನ್ನು ಶೋಧಿಸಿ ಇವುಗಳ ಆಧಾರದಿಂದ ಸುಸಂಗತವಾಗಿ ಈ ಇತಿಹಾಸವನ್ನು ಬರೆದಿರುವರು. ೪ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವೆಂದು ಸರಕಾರದಿಂದ ಮಂಜೂರ ಆಗಿದೆ. ಬೆಲೆ ೦–೮–೦.

(೩) ದೇಶೀಯ ಜಮಾಖರ್ಚು ಪ್ರವೇಶ.

(ಹನುಮಂತ ರಾಮಚಂದ್ರ ಕುಲಕರ್ಣಿ ಕೃತ)

ಪ್ರಾಥಮಿಕ ಕನ್ನಡ ಶಾಲೆಗಳ ೬ನೆಯ ೭ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಇದ್ದ ಈ ಜಮಾಖರ್ಚಿನ ವಿಷಯವು ೪ನೆಯ ಇಯತ್ತೆಗೆ ಆರಂಭವಾಗುವದರಿಂದ ಇದನ್ನು ಸುಲಭವಾದ ರೀತಿಯಲ್ಲಿ ತಿಳಿಯುವಂತೆ ಬರೆದಿದ್ದಾರೆ. ಅಭ್ಯಾಸಕ್ಕೆ ವಿಶೇಷ ಅನುಕೂಲವಾಗಿದೆ. ಮುಂಬಯಿ ಇಲಾಖೆಯ ವಿದ್ಯಾಖಾತೆಯಿಂದ ಮಂಜೂರಾಗಿದೆ. ಬೆಲೆ ೦–೩–೬.

(೪) ವಿಜಾಪುರ ಜಿಲ್ಲೆಯ ಸಾಮಾನ್ಯ ವರ್ಣನೆಯು.

ಕನ್ನಡ ಪ್ರಾಥಮಿಕ ಶಾಲೆಗಳ ೨ನೆಯ ೩ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಹೊಸ ಪದ್ಧತಿಯಿಂದ ಬರೆಯಲ್ಪಟ್ಟಿದೆ. ಈ ಮೊದಲು ಇದೇ ಪದ್ಧತಿಯಿಂದ ಬರೆದ ಮಿ. ಯ. ಕೃ. ಅಣ್ಣೀಗೇರಿ ಇವರಿಂದಲೇ ಇದನ್ನು ಬರೆಯಿಸಿದೆ. ಅಭ್ಯಾಸವು ಸುಲಭವೂ ಸುಗಮವೂ ಮನೋರಂಜಕವೂ ಆಗುವಂತೆ ಈ ಪುಸ್ತಕದಲ್ಲಿ ನಕಾಶಗಳೂ ಚಿತ್ರಗಳೂ ಸೇರಿಸಲ್ಪಟ್ಟಿವೆ. ಬೆಲೆ ೪–೬–೦.

ಪುಸ್ತಕ ದೊರೆಯುವ ಸ್ಥಳ:—

ವಿ. ಆರ್. ಶಿವನಾಗಪ್ಪ,

ವಾಗ್ವಿಲಾಸ ಬುಕ್‌ಡಿಪೋ ಪಾವರ ಪ್ರಿಂಟಿಂಗ ಪ್ರೆಸ್, ಹುಬ್ಬಳ್ಳಿ.

Reg. No. B. 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Shikshana

— APRIL 1934 —

ಸಂಪಾದಕ— ವೆಂಕಟೇಶ ನರಸಿಂಗರಾವ ಮುಗದಾಳ ಬಿ. ಎ.,

ಸಂಪುಟ ೧] ಎಪ್ರಿಲ ೧೯೩೪ [ವ. ೬ ಸಂ. ೧

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ	ಪುಟ
೧.	ನಿಬಂಧ ಶಿಕ್ಷಣ	೧
೨.	ಶಿಕ್ಷಣ ಯೋಜನೆಗಳು	೫
೩.	ಹತ್ತಿ	೧೩
೪.	ಮಾನಸಶಾಸ್ತ್ರ	೧೭
೫	ಸಂಖ್ಯೆಗಳ ಚಮತ್ಕಾರ	೨೬
೬.	ಪತ್ರಗಳ ಸಾರಾಂಶ	೨೭
೭.	ವರ್ಧಪ್ರಾಯಿಂಜ ಪರೀಕ್ಷೆ	೨೮
೮.	ಪ್ರಕಟನೆಗಳು	೨೯
೯.	ಗಡಿಯಾರದ ಹಾಡು ...	೩೨

Printed by K. R. Bhise at the Karnatak Printing Works, Dharwar
& Published by V. N. Magdal, B. A.,
Head Master, Training School, Dharwar, at his Office.

CONTD IN

NEXT ROLL

CONTD IN
NEXT ROLL

END

END

END